ಅಕ್ಟೋಬರ್ 5, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2005

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಹೊಸ ದಾಖಲೆ ಬರೆಯಲಿದೆ ಕಾಂತಾರ

# ವರಾಹ ರೂಪಂ ದೈವ ವರಿಷ್ಠಂ



## ನಾಲ್ವರ ಸಾವು 'ದೈವ' ನಿರ್ಣಯವೇ?!



## 'ಕರವೇ' ಸೈನಿಕರ ಘರ್ಜನೆ!

## ಘನ್ನಿವಾರ್; ಅಬ್ಬಾಜ್ ಕೊಲೆ!





## ತಿಮರೋಡಿ ಗಡಿಪಾರ್!

## ವಿಜಯ್ ಕತೆ ಮುಗಿಯಿತೇ?



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



# ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

1) ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
2) ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
3) ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
4) ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
5) ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
6) ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
7) ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
8) ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)


**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**



ಮಂಗಳೂರು ಮಿತ್ರ
ಕರಾವಳಿ ಕರ್ನಾಟಕದ ಸಂಜೆ ಕನ್ನಡ ದೈನಿಕ
ಪ್ರಥಮ ಸಂಚಿಕೆ ಬಿಡುಗಡೆ ಸಮಾರಂಭ
10—6—1990, ಭಾನುವಾರ

ಅಧ್ಯಕ್ಷತೆ : ಶ್ರೀ ಸದಾಶಿವ ಭಂಡಾರಿ,
ಮೇಯರ್, ಮಹಾನಗರಪಾಲಿಕೆ, ಮಂಗಳೂರು
ಪತ್ರಿಕೆ ಬಿಡುಗಡೆ : ಶ್ರೀ ಡಿ. ವೀರೇಂದ್ರ ಹೆಗ್ಗಡೆ,
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ
ಮುಖ್ಯ ಅತಿಥಿಗಳು: ಶ್ರೀ ಬಿ. ಸಂಕಪ್ಪ ರೈ,
ಅಧ್ಯಕ್ಷರು, ದ. ಕ. ಜಿಲ್ಲಾ ಪರಿಷತ್
ಶ್ರೀ ಬ್ಲೇಸಿಯೆಸ್ ಎಂ. ಡಿ'ಸೋಜ,
ಶಾಸಕರು, ಮಂಗಳೂರು ಮತ್ತು ದ. ಕ. ಜಿಲ್ಲಾ ಕಾಂಗ್ರೆ ಅಧ್ಯಕ್ಷರು
ಶ್ರೀ ಅಪ್ಪಣ್ಣ ಹೆಗ್ಡೆ,
ವಿಧಾನ ಪರಿಷತ್ ಸದಸ್ಯರು ಮತ್ತು ದ. ಕ. ಜಿಲ್ಲಾ ಜನತಾದಳ ಅಧ್ಯಕ್ಷರು
ಶ್ರೀ ಧನಂಜಯ ಕುಮಾರ್,
ಮಾಜಿ ಶಾಸಕರು ಮತ್ತು ದ. ಕ. ಜಿಲ್ಲಾ ಬಿ. ಜೆ. ಪಿ. ಅಧ್ಯಕ್ಷರು
ಶ್ರೀ ಕುಲ್ಯಾಡಿ ಮಾಧವ ಪೈ,
ಅಧ್ಯಕ್ಷರು, ಕನ್ನಡ ಸಂಘ, ಮಂಗಳೂರು
ಶ್ರೀ ಸುರೇಶ್ ಬಲ್ಲಾಳ್
ಮಾಜಿ ಅಧ್ಯಕ್ಷರು, ನಗರಯೋಜನಾ ಪ್ರಾಧಿಕಾರ
ಶ್ರೀ ಅಹ್ಮದ್ ಹಾಜಿ ಮೊಹಿಯುದ್ದೀನ್
ಕೈಗಾರಿಕೋದ್ಯಮಿ, ಕುಂಟೆ ಮತ್ತು ಅಧ್ಯಕ್ಷರು, ಸೀರತ್ ಸಮಿತಿ, ಬಂಟ್ವಾಳ

ತಮಗೆ ಆದರದ ಸ್ವಾಗತ

ಸ್ಥಳ : ಹೋಟೇಲ್ ಉಡ್‌ಲ್ಯಾಂಡ್ಸ್, ಸಭಾಂಗಣ, ಮಂಗಳೂರು
ಸಮಯ: ಸಂಜೆ 7 ಗಂಟೆಗೆ, ಭಾನುವಾರ, 10—6—1990

ತಮ್ಮ ಆಗಮನಾಭಿಲಾಷಿಗಳು,
ಮಂಗಳೂರು ಮಿತ್ರ
ಪತ್ರಿಕಾ ಬಳಗ

## ಕರಾವಳಿಯಲ್ಲಿ ಬಿಡುಗಡೆಯಾದ ಮೊಟ್ಟ ಮೊದಲ ಸಂಜೆ ದೈನಿಕ 'ಮಂಗಳೂರು ಮಿತ್ರ'

1985ರಲ್ಲಿ ರಾಜ್ಯದ ಮೊಟ್ಟ ಮೊದಲ ಕ್ರೈಂ ವಾರಪತ್ರಿಕೆ ಮಾಡಿ ಅದ್ಭುತ ಯಶಸ್ಸುಸಾಧಿಸಿದ್ದಶ್ರೀ ಎಂ. ಮಲ್ಲಿಕಾರ್ಜುನಯ್ಯನವರು 1990ರಲ್ಲಿಮಂಗಳೂರಿನಲ್ಲಿ ಸಂಜೆ ದೈನಿಕವೊಂದನ್ನು ಹೊರ ತರಲು ಹೊರಟಾಗ, ಅವರಿಗೆ ಸಿಕ್ಕ ಶೀರ್ಷಿಕೆಯೇ 'ಮಂಗಳೂರು ಮಿತ್ರ'. ಮಂಗಳೂರಿನ ಕೆಲ ಮಿತ್ರರ ಸಹಕಾರದಿಂದ ಹಾಗೂ 'ಪೊಲೀಸ್ ನ್ಯೂಸ್' ಬಳಗದ ಸಹಕಾರದಿಂದ ಮಂಗಳೂರಿನಲ್ಲಿ ಒಂದು ಕಚೇರಿ ಹಾಗೂ ಪ್ರಿಂಟಿಂಗ್ ಪ್ರೆಸ್ ಮಾಡಿ ಕಾರ್ಯಾರಂಭ ಮಾಡಿಯೇ ಬಿಟ್ಟರು. ಅಂದು ಸಂಪಾದಕ ಮಲ್ಲಿಕಾರ್ಜುನಯ್ಯನವರಿಗೆ ಶುಭ ಹಾರೈಸಿ ಮೊಟ್ಟ ಮೊದಲ ಸಂಜೆ ದೈನಿಕ 'ಮಂಗಳೂರು ಮಿತ್ರ' ಪತ್ರಿಕೆಯನ್ನು ಬಿಡುಗಡೆಗೊಳಿಸಿದ್ದು ಬೇರ್‍ಯಾರೂ ಅಲ್ಲ, ಧರ್ಮಸ್ಥಳ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು. ದಿನಾಂಕ 10-06-1990ರಂದು ಮಂಗಳೂರಿನ ಪ್ರತಿಷ್ಠಿತ ವುಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಅದ್ದೂರಿಯಾಗಿ ಆಯೋಜಿಸಿದ್ದ ಸಮಾರಂಭದಲ್ಲಿ 'ಮಂಗಳೂರು ಮಿತ್ರ' ಲೋಕಾರ್ಪಣೆಗೊಂಡಿತು. ಆ ಭಾಗದಲ್ಲಿ ಬೆಂಗಳೂರು ಕನ್ನಡಿಗರು ಕಡಿಮೆ ಇದ್ದುದರಿಂದ ಬೆಂಗಳೂರಿನಿಂದಲೇ ತಂತ್ರಜ್ಞರನ್ನು ಮಂಗಳೂರಿಗೆ ಕರೆದೊಯ್ದು ವಸತಿ ಕಲ್ಪಿಸಿ ಹೊಸ ಸಾಧನೆಗೈದಿದ್ದು ನಮ್ಮ ಸಂಪಾದಕರ ಸಾಧನೆಯೇ ಸರಿ.....



ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಪತ್ರಿಕೆ ಬಿಡುಗಡೆ



ಹೆಗ್ಗಡೆಯವರನ್ನು ಗೌರವಿಸುತ್ತಿರುವ ಸಂಪಾದಕ ಎಂ. ಮಲ್ಲಿಕಾರ್ಜುನಯ್ಯ



ಸಂಪಾದಕ
**ಎಂ. ರಾಹುಲ್**

**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್ (ಜ್ಯೋತಿಷಿ)
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ಸಮೀಕ್ಷೆ ಏನೋ ಶುರುವಾಯ್ತು, ಆದರೆ....

ಸೆಪ್ಟೆಂಬರ್ 22ರಿಂದ ಕರ್ನಾಟಕದಲ್ಲಿ ಜಾತಿ ಸಮೀಕ್ಷೆ ಶುರುವಾಗಿದೆ. ಮತ್ತೆ ಗಣತಿ ಯಾಕೆ? ರದ್ದುಪಡಿಸಿ ಎಂಬುದಾಗಿ ಇದರ ವಿರುದ್ಧಹೈ ಕೋರ್ಟ್‌ನಲ್ಲಿ ಮೂರು ಪಿಐಎಲ್ ಸಲ್ಲಿಕೆ ಆಗಿದ್ದವು. ಆದಾಗ್ಯೂ ಸಿದ್ದರಾಮಯ್ಯ ಸರ್ಕಾರ ಧೈರ್ಯವಾಗಿ ಕೋರ್ಟ್ ತೀರ್ಪಿಗೆ ಕಾಯದೆ ಜಾತಿ ಗಣತಿ ಕಾರ್ಯಕ್ಕೆ ಚಾಲನೆ ಕೊಟ್ಟೆ ಬಿಟ್ಟಿತ್ತು. ಹೈಕೋರ್ಟ್‌ನಲ್ಲಿ ಪಿಐಎಲ್ ವಿಚಾರಣೆ ಬಾಕಿ ಇತ್ತಲ್ಲ, ಬಹುಶಃ ರದ್ದು ಅಥವಾ ಮುಂದೂಡಿಕೆ ತೀರ್ಪು ಹೊರಬೀಳಬಹುದು ಅಂತ ಶಾಲಾ ಶಿಕ್ಷಕರು ನಿರೀಕ್ಷೆ ಮಾಡುತ್ತಲೇ ಎರಡು ದಿವಸ ಮಂದಗತಿಯಲ್ಲಿ ಸಮೀಕ್ಷೆ ನಡೆಸಿದರು. ಆದರೆ ಮೂರನೇ ದಿನದ ಹೊತ್ತಿಗೆ ಜಾತಿ ಸಮೀಕ್ಷೆ ನಡೆಯಲಿ, ಆದರೆ ಯಾರನ್ನೂ ಬಲವಂತಪಡಿಸಿ ಹೇಳಿಕೆ ಪಡೆಯುವಂತಿಲ್ಲ... ಅವರು ಏನು ಹೇಳುತ್ತಾರೋ ಅದನ್ನಷ್ಟೇ ಬರೆದುಕೊಂಡು ಹೋಗಬೇಕು... ಮತ್ತು ಈ ಸಮೀಕ್ಷೆಯ ವಿವರಗಳು ಎಲ್ಲೂ ಬಹಿರಂಗವಾಗ ಬಾರದು... ಹುಷಾರ್! ಎಂಬ ತೀರ್ಪು ಪ್ರಕಟವಾಯಿತಲ್ಲ....



ಶಾಲಾ ಮೇಷ್ಟ್ರುಗಳು ಮೊಬೈಲ್ ಮುಂದಿಟ್ಟುಕೊಂಡು ಸರಿಯಾಗಿ ಟವರ್ ಸಿಗ್ತಾ ಇಲ್ಲಾ... ಗುಡ್ಡ ಬೆಟ್ಟ ಮರ ಹತ್ತಬೇಕು... ನಮ್ಮ ಕೈಲಿ ಆಗ್ತಿಲ್ಲ... ಎನ್ನುತ್ತಾ ಸರ್ಕಾರದ ವಿರುದ್ಧ ಕೂಗು ಎಬ್ಬಿಸಿದ್ದಾರೆ. ಹೇಳಿ ಕೇಳಿ ಇದು ದಸರಾ ಸಮಯ. ಸ್ವಲ್ಪ ಆಚೀಚೆ ಆದರೂ ಕೋಮು ಜ್ವಾಲೆ ಹೊತ್ತಿಕೊಳ್ಳುತ್ತೇ! ಅದಕ್ಕೆಂದೇ ಒಂದು ವರ್ಗದ ಜನ ಕಾದು ಕುಂತಿದ್ದಾರೆ!

ಪಾಪ, ಸಿದ್ದರಾಮಯ್ಯನವರಿಗೆ ಏನು ಮಾಡಬೇಕೋ ಅರ್ಥವಾಗುತ್ತಿಲ್ಲ, ಯಾರು ಸಮೀಕ್ಷೆಗೆ ಹಾಜರಾಗುವುದಿಲ್ಲವೋ ಅಂಥ ಮೇಷ್ಟ್ರು ಕಾರ್ಯಕರ್ತರನ್ನ ಕಾನೂನು ಕ್ರಮಕ್ಕೆ ಒಳಪಡಿಸುತ್ತೇನೆ ಅಷ್ಟೇ... ಎಂದು ಗುಟುರು ಹಾಕಿ ಸುಮ್ಮನಿದ್ದಾರೆ. ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ ಶಾಲಾ ಶಿಕ್ಷಕರ ಪರಿಸ್ಥಿತಿ! ಬ್ರಾಹ್ಮಣರು, ಲಿಂಗಾಯತರು ಮತ್ತು ಗೌಡರು ಸರ್ಕಾರದಿಂದ ಹೊಸ ಉಪಜಾತಿಗಳ ಸೃಷ್ಟಿ ಮಾಡಲಾಗಿದೆ, ಇದು ನಮ್ಮ ಸಂಖ್ಯೆಯನ್ನು ಕಮ್ಮಿ ಮಾಡುವ ಹುನ್ನಾರ... ಹಿಂದೂ ಧರ್ಮದ ತೇಜೋವಧೆ... ಎಂಬಿತ್ಯಾದಿ ಆರೋಪ ಮಾಡಿದ ಬೆನ್ನಲ್ಲೇ ಹೈಕೋರ್ಟ್‌ಗೆ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ ಆಗಿದ್ದವು.




ಒಟ್ಟಾರೆ, ರಾಜ್ಯ ಸರ್ಕಾರಕ್ಕೆ ಜಾತಿ ಜಟಾಪಟಿ ಟೆನ್ಷನ್ ತಂದಿಟ್ಟಿದೆ ಎನ್ನಬಹುದು. ಜಾತಿಗಣತಿ ಆರಂಭಕ್ಕೂ ಮುನ್ನವೇ ಲಿಂಗಾಯತ, ಗೌಡ ಸೇರಿ ಹಲವು ಜಾತಿಗಳಲ್ಲಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಆಕ್ರೋಶ ಭುಗಿಲೆದ್ದು, ಅಲ್ಲಲ್ಲಿ ಸಭೆಗಳು ನಡೆದವು. ಹೀಗೇಗೆ ಬರೆಸಬೇಕು ಅಂತ ಆದೇಶ ಮೊಳಗಿದವು.

15 ದಿನಗಳಲ್ಲಿ ಸರ್ಕಾರ ತರಾತುರಿಯಲ್ಲಿ ಜಾತಿಗಣತಿ ನಡೆಸುತ್ತಿದೆ. ಅದರಲ್ಲೂ ದಸರಾ ರಜೆ ದಿನಗಳಲ್ಲಿ ಜಾತಿ ಗಣತಿ ನಡೆಸುತ್ತಿದೆ. ಜನರು ಹಬ್ಬ, ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾಗ ಗಣತಿ ಮಾಡುವ ಕ್ರಮ ಸರಿಯಲ್ಲ, ಸರ್ಕಾರ 1500 ಉಪ ಜಾತಿಗಳಿಗೂ ಪ್ರತ್ಯೇಕ ಅಸ್ತಿತ್ವ ನೀಡುತ್ತಿದೆ. ಜಾತಿ ಗಣತಿ ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಹೀಗಾಗಿ ರಾಜ್ಯ ಸರ್ಕಾರದ ನಿರ್ಧಾರ ರದ್ದುಪಡಿಸುವಂತೆ ಕೋರಿ ವಕೀಲ ಸುಬ್ಬಾರೆಡ್ಡಿ ಹೊಸ ಅರ್ಜಿ ಸಲ್ಲಿಸಿದ್ದಾರೆ. ಆದರೂ ಸೆಪ್ಟೆಂಬರ್ 22ರಿಂದ ರಾಜ್ಯದಲ್ಲಿ ಜಾತಿಗಣತಿ ಆರಂಭವಾಗಿದೆ.

ಜಾತಿಗಣತಿ ನಡೆಸುವ ಬಗ್ಗೆ ಸರ್ಕಾರದ ಕೈಪಿಡಿ ಪಟ್ಟಿಯಲ್ಲಿರುವ ಕೆಲ ಜಾತಿಗಳ ಬಗ್ಗೆ ಆಕ್ಷೇಪ ವ್ಯಕ್ತವಾಗಿದ್ದರಿಂದ, ಸಿದ್ದರಾಮಯ್ಯ ಕ್ರಿಶ್ಚಿಯನ್ ಪದವಿರುವ 37 ಉಪ ಜಾತಿಗಳನ್ನು ಪಟ್ಟಿಯಿಂದ ತೆಗೆಸಿದ್ದಾರೆ. ಏಕೆಂದರೆ ಸರ್ಕಾರ ಮೊದಲಿಂದ ರಾಜ್ಯದಲ್ಲಿ ಗುರುತಿಸಿರುವ ಜಾತಿ ಮತ್ತು ಉಪಜಾತಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಕೆಲ ಜಾತಿಗಳ ಮುಂದೆ 'ಕ್ರಿಶ್ಚಿಯನ್' ಅಂಟಿಕೊಂಡಿದ್ದು ದೊಡ್ಡ ವಿವಾದವಾಗಿದೆ!

ಲಿಂಗಾಯತ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ದೇವಾಂಗ ಕ್ರಿಶ್ಚಿಯನ್, ಜಂಗಮ ಕ್ರಿಶ್ಚಿಯನ್, ಮಡಿವಾಳ ಕ್ರಿಶ್ಚಿಯನ್, ನೇಕಾರ ಕ್ರಿಶ್ಚಿಯನ್, ವಿಶ್ವಕರ್ಮ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ವಿಶ್ವಕರ್ಮ ಬ್ರಾಹ್ಮಣ ಕ್ರಿಶ್ಚಿಯನ್ ಅಂತಲೂ ಉಲ್ಲೇಖವಿದೆ! ಈ ಪಟ್ಟಿಯೇ ಈಗ ಆಕ್ರೋಶಕ್ಕೆ ಕಾರಣವಾಗಿದ್ದು, ಸಿದ್ದರಾಮಯ್ಯ ಇದನ್ನೆಲ್ಲಾ ತೆಗೆಸಿದ್ದಾರೆ ಎನ್ನಲಾಗಿದೆ. ಗಲಾಟೆ ಶುರುವಾದ ಕೂಡಲೇ ಹೆಸರು ತೆಗೆಯಲಾಗಿದೆ ನಿಜ. ಹಾಗಾದರೆ, ಮುಖ್ಯ ಜಾತಿಗಳ ಹೆಸರಿಗೆ 'ಕ್ರಿಶ್ಚಿಯನ್' ಪದ ಅಂಟಿಸಿದ್ದು ಯಾರು?

ಇದಕ್ಕೆ ಸಿದ್ದರಾಮಯ್ಯ ಹಾದಿಯಾಗಿ ಯಾರೂ ಉತ್ತರಿಸುತ್ತಿಲ್ಲ, ನೀವು ಗಮನಿಸಿರಬೇಕು, 1500 ಜಾತಿಗಳ ಲಿಸ್ಟ್ ಬಿಡುಗಡೆ ಆದಾಗ, ಕ್ರಿಸ್ಟಿಯನ್ ಪದ ನೋಡಿ ಜನ ಸಿಡಿದೆದ್ದಾಗ ಸ್ವತಃ ಮುಖ್ಯಮಂತ್ರಿಗಳೇ ಹೇಳಿದ್ದು, ಈ ಪದ ಹಿಂದಿನಿಂದಲೂ ಇದೆ, ಈಗ ಬದಲಿಸಲು ಆಗಲ್ಲ, ಅಕಸ್ಮಾತ್ ಸಾಧ್ಯವಾದ್ರೆ ಅದು ಆಯೋಗದಿಂದಲೇ ಆಗಬೇಕು ಅಂದಿದ್ರು. ಯಾವಾಗ ಗಲಾಟೆ ಉಲ್ಬಣಗೊಂಡು

☞ 15

# ಗ್ರೇಟರ್ ಬೆಂಗಳೂರು ಹೋರಾಟ ಹತ್ತಿಕ್ಕೋ ಯತ್ನ!

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂಬ ಅಂದದ ಕನ್ನಡ ಹೆಸರನ್ನು ಯಾವತ್ತು ಸಿದ್ದರಾಮಯ್ಯ ಸರ್ಕಾರ ಗ್ರೇಟರ್ ಬೆಂಗಳೂರು ಎಂದು ಬದಲಿಸಿತೋ, ಅಂದೇ ಇವರು ಪರಭಾಷಿಕರಿಗೆ ಮಾರಾಟವಾಗಿದ್ದಾರೆ ಅನ್ನೋದು ಖಚಿತವಾಗಿತ್ತು! ಅವತ್ತು ಬಿಜೆಪಿ ಮಾತ್ರವಲ್ಲ, ಕರವೇ ಜಿಲ್ಲಾಧ್ಯಕ್ಷ ಧರ್ಮಣ್ಣ ಕೂಡ ಈ ಅಬಾಸದ ವಿರುದ್ಧ ದನಿ ಎತ್ತಿದ್ದರು. ಪ್ರಜ್ಞಾವಂತ ಸಾಹಿತಿಗಳು ಲೇಖಕರು ಈ ಡಿ.ಕೆ. ಶಿವಕುಮಾರ್ ದೆಹಲಿ ಕಡೆ ಸುತ್ತಿ ಸುತ್ತಿ ಗ್ರೇಟರ್ ನೋಯ್ಡಾ ನೋಡ್ಕೊಂಡ್ ಬಂದು ಅದೇ ಗುಂಗಿನಲ್ಲಿ ಗ್ರೇಟರ್ ಬೆಂಗಳೂರು ಅಂತ ಮಾಡ್ತಾವ್ರೆ... ಅಂತ ಗೇಲಿ ಮಾಡಿ, ಹೆಸರು ಬದಲಿಸಿ ಎಂದು ಸಿದ್ದರಾಮಯ್ಯರಿಗೆ ಮಾತಿನಲ್ಲೇ ಗುದ್ದಿದ್ದರು. ಗ್ರೇಟರ್ ಬೆಂಗಳೂರು ಬದಲು ಬೃಹತ್ ಬೆಂಗಳೂರು ಪ್ರಾಧಿಕಾರ ಎನ್ನುವ ಹೆಸರೇ ಚೆನ್ನಾಗಿದೆ ಎಂಬ ಸಲಹೆ ಕೊಟ್ಟಿದ್ದರು. ಆದರೆ, ಇದನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಸರ್ಕಾರ ಇರಲಿಲ್ಲ.

ಡಿ.ಕೆ. ಶಿವಕುಮಾರ್ ಹಠದಿಂದ ಗ್ರೇಟರ್ ಅನ್ನೋ ಉಪನಾಮವೇ ಅಂತಿಮವಾಗಿ, ಅಚ್ಚ ಕನ್ನಡವನ್ನು ಅಳಿಸಿ ಬರೆಸಲಾಯಿತು. ಮಾತ್ರವಲ್ಲ,ಇದೇ ಹೆಸರಿನಲ್ಲಿ ಆಡಳಿತ ಅಸ್ತಿತ್ವಕ್ಕೂ ಬಂದುಬಿಟ್ಟಿತು! ಸರಿಯಾಗಿ ಗಮನಿಸಿ ನೋಡಿ,






ಕನ್ನಡವೇ ಉಸಿರು ಕನ್ನಡವೇ ಹಸಿರು ಸಾಲುಗಳ ಮೇಲೆ ಎಂಥ ಅಪಸವ್ಯ ಅಂಟಿಕೊಂಡಿದೆ ಎಂಬುದನ್ನು! ಇದನ್ನು ಮಾಡಿದ್ದು ಸಿದ್ದರಾಮಯ್ಯ ಅನ್ನೋದಕ್ಕಿಂತ ಡಿ.ಕೆ. ಶಿವಕುಮಾರ್ ಅನ್ನೋದೇ ಸೂಕ್ತ! ಈಗಲೂ ಕಾಲ ಮಿಂಚಿಲ್ಲ... ಕನ್ನಡಿಗರು ಒಗ್ಗಟ್ಟಾದರೆ 'ಕರವೇ' ಸೈನಿಕರ ಬೆನ್ನಿಗೆ ನಿಂತರೆ ಗ್ರೇಟ್.....ಗ್ರೇಟರ್... ಎಲ್ಲಾ ಕಿತ್ತು ಹೋಗೆಯಬಹುದು!!

☯



# ವರಾಹ ರೂಪಂ ದೈವ ವರಿಷ್ಠಂ !




**ಕೊರೋನಾ...** ಕಾಲದಲ್ಲಿ ಕೆಲಸ ಕಾರ್ಯಗಳನ್ನು ಬಿಟ್ಟು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ರಿಷಬ್‌ಶೆಟ್ಟಿ ತಲೆಯಲ್ಲಿ ಮೊಳಕೆಯೊಡೆದ ಕತೆಯೇ ಕಾಂತಾರ! ಇದು ಅವರ ಸಿನಿ ಬದುಕಿನಲ್ಲೇ ಬೇರೆ ರೀತಿಯ ಕತೆ. ನೆಕ್ಸ್ಟ್ ಲೆವೆಲ್ ಅಂತಾರಲ್ಲ ಅಂಥದ್ದು ಕಾಂತಾರ ಕತೆ! ಬ್ರಹ್ಮ ಸೃಷ್ಠಿಕರ್ತನಾದರೆ ಮಹಾವಿಷ್ಣು ಲೋಕಪಾಲಕ. ಶಿವನು ಲಯ ಕರ್ತ. ಲೋಕಪಾಲಕನ ಮಾರ್ಗ ದರ್ಶಕನಾಗಿ ಇಟ್ಟುಕೊಂಡು ರುದ್ರನ 'ರುದ್ರತಾಂಡವ' ತೋರಿಸುವುದೇ ಕಾಂತಾರ ಒನ್‌ಲೈನ್ ಸ್ಟೋರಿ! 2020ರಲ್ಲಿ 'ಕಾಂತಾರ' ಕತೆ ಬರೆದು 2021ರಲ್ಲಿ ಶೂಟಿಂಗ್ ಆರಂಭಿಸಿ 2022ರಲ್ಲಿ (ಸೆಪ್ಟೆಂಬರ್ 19) ಸಿನಿಮಾ ಬಿಡುಗಡೆ ಆಗಿತ್ತು. ಸುಮಾರು 14 ಕೋಟಿ ಬಡ್ಜೆಟ್‌ನಲ್ಲಿ ಚಿತ್ರಿಸಿದ್ದ 'ಕಾಂತಾರ' 300 ಕೋಟಿಗೂ ಹೆಚ್ಚು ಗಳಿಸಿ ಬ್ಲಾಕ್‌ಬಸ್ಟರ್ ಚಿತ್ರವಾಗಿ ಹೊರಹೊಮ್ಮಿತ್ತು. ನಿಮಗೆ ಗೊತ್ತಿರಲಿ; ಕನ್ನಡ ಅವತರಣಿಕೆ ಮಾತ್ರವೇ ಇದ್ದ 'ಕಾಂತಾರ' ಸೂಪರ್ ಹಿಟ್ ಆಗುವ ಲಕ್ಷಣ ಕಾಣಿಸುತ್ತಿದ್ದಂತೆ ಮೂರನೇ ವಾರದ ಹೊತ್ತಿಗೆ ತಮಿಳು, ತೆಲುಗು, ಹಿಂದಿ ಮತ್ತು ಮಲೆಯಾಳಂಗೆ ಡಬ್ ಮಾಡಿ ರಿಲೀಸ್ ಮಾಡಲಾಗಿತ್ತು! ಎಲ್ಲಾ ಕಡೆ ಬ್ಲಾಕ್ ಬಸ್ಟರ್!! ನಿರ್ಮಾಣ ಸಂಸ್ಥೆ 'ಹೊಂಬಾಳೆ' ಹಾದಿಯಾಗಿ ನಿರ್ದೇಶಕ - ನಟ ರಿಷಬ್ ಶೆಟ್ಟರಿಗೂ 'ಕಾಂತಾರ' ಅಷ್ಟು ದೊಡ್ಡ 'ಹಿಟ್' ಆಗುತ್ತದೆ ಅನ್ನಿಸಿರಲಿಲ್ಲವೇನೋ. ಹಾಗೆ ಅನಿರೀಕ್ಷಿತ 'ಪ್ರತಿಫಲ' ದೊರೆತದ್ದರ ಫಲವಾಗಿಯೇ 'ಕಾಂತಾರ' ಚಿತ್ರವನ್ನ ಹಾಲಿವುಡ್ ಮಟ್ಟದಲ್ಲಿ ಸೀಕ್ವೆಲ್ ಬೈ ಸೀಕ್ವೆಲ್ ಸಿದ್ದಪಡಿಸುವ ಯೋಜನೆ ಸಿದ್ದವಾಗಿದ್ದು. ನಮ್ಮ ರಿಷಬ್ ಶೆಟ್ಟರು ಮಹಾ ಬುದ್ಧಿವಂತರು. ಸೀಕ್ವೆಲ್ ಮಾತು ಆಮೇಲಿನದ್ದು ಅಂತೇಳಿ 'ಪ್ರೀಕ್ವೆಲ್'ಗೇ ಕೈ ಹಚ್ಚಿಬಿಟ್ರು!

**ವರಾಹ ರೂಪಂ!**

ವರಾಹ ಅಂದ್ರೆ ಮಹಾ ವಿಷ್ಣು, ಶ್ರೀಮನ್ನಾರಾಯಣ. ಅವನ ಮಹಿಮೆ ಇಂದಿನದ್ದಲ್ಲ ಅಥವಾ ನಿನ್ನೆ ಮೊನ್ನೆಯದ್ದೂ ಅಲ್ಲ. ಅನಾದಿ ಕಾಲದಿಂದಲೂ ಈ ಜಗತ್ತು ಸೃಷ್ಠಿಯಾದ ಕ್ಷಣದಿಂದಲೂ 'ಎಲ್ಲವೂ' ಅವನ ಅಧೀನದಲ್ಲೀ ನಡೆಯುತ್ತಿರುವುದು ಅಂತ ನಂಬಿರುವವರು ನಾವು. ಅಂಥಾ ಮಹಾವಿಷ್ಣುವಿನ 'ಕರಾವಳಿ' ರೂಪ ಪಂಜುರ್ಲಿ ದೈವ! ಪಂಜುರ್ಲಿಯ ಪವಾಡಗಳು ಅಪಾರ! ನೂರಾರು ವರ್ಷಗಳ ಹಿಂದಿನಿಂದಲೂ ಪಂಜುರ್ಲಿ ದೈವಾರಾಧನೆ ಚಾಲ್ತಿಯಲ್ಲಿರುವಂಥದ್ದು. ರಿಷಬ್ ಶೆಟ್ಟರು ಆಳವಾದ ಅಧ್ಯಯನ ನಡೆಯಿಸಿ ಸುಮಾರು 500 ವರ್ಷಗಳ ಹಿಂದೆ ಕರಾವಳಿ ಭಾಗವನ್ನು ಆಳಿದ ಕದಂಬ ರಾಜರ ಕಾಲದಲ್ಲಿ ದೈವಾರಾಧನೆ ಹೇಗಿತ್ತು, ಯಾವ್ಯಾವ ರಾಜರು ಆರಾಧಿಸಿದ್ದರು, ದೈವಕ್ಕೆ ನಡೆಯದೆ ದೈವರಾದ ಕೋಪಕ್ಕೆ ತುತ್ತಾದವರು ಯಾರ್ಯಾರು? ಎಂಬಿತ್ಯಾದಿ ವಿವರಗಳನ್ನು ಕಲೆ ಹಾಕಿ ಶುರು ಮಾಡಿದ್ದೇ ಕಾಂತಾರ ಪ್ರೀಕ್ವೆಲ್ ಅರ್ಥಾತ್ ಅಧ್ಯಾಯ-1.




2022ರಲ್ಲಿ ನೀವು ನೋಡಿರುವ 'ಕಾಂತಾರ' ಅಧ್ಯಾಯ-2ರ ಲೆಕ್ಕ. ಈಗ ರಿಲೀಸ್ ಆಗುತ್ತಿರುವುದು ನೂರಾರು ವರ್ಷಗಳ ಹಿಂದಿನ ಕತೆ. ಚಿತ್ರಕತೆಗಾರ ರಿಷಬ್ ಶೆಟ್ರು ಅದಕ್ಕೂ ಇದಕ್ಕೂ ಅದು ಹೇಗೆ 'ಲಿಂಕ್' ಮಾಡಿದ್ದಾರೆ ಎಂಬುದನ್ನು ನೀವು ಸಿನಿಮಾ ನೋಡಿಯೇ ಅರಿಯಬೇಕು!



ಇನ್ನೊಮ್ಮೆ ಹೇಳಿಬಿಡ್ತೇವೆ. ಬ್ರಹ್ಮ ಸೃಷ್ಠಿಕರ್ತ, ವಿಷ್ಣು ಲೋಕಪಾಲಕ, ಶಿವ ಲಯಕರ್ತ. ಸೃಷ್ಠಿಕರ್ತ ಬ್ರಹ್ಮ ಇಲ್ಲಿ ನಿಗೂಢ. ಲೋಕಪಾಲಕ ಮಹಾ ವಿಷ್ಣು ಇಲ್ಲಿ ಆಜ್ಞಾಪಾಲಕ. ಲಯಕರ್ತ ಶಿವನದ್ದೇ ಮೇಲಾಟ ಅರ್ಥಾತ್ ರುದ್ರತಾಂಡವ! ಶಿವನ ರುದ್ರತಾಂಡವವನ್ನ ಅಧ್ಯಾಯ-2ರಲ್ಲೇ ನೋಡಿದ್ದೀರಿ. ಇದು ಹಿಂದಿನ ಭಾಗ. ರಾಜರ ಕಾಲದ ಕತೆ. ಇನ್ನೂ ಜೋರಾಗಿರುತ್ತೆ! ನಿಮ್ಮಂತೆ ನಾವೂ ಕಾತರರಾಗಿದ್ದೇವೆ 'ಕಾಂತಾರ' ರುದ್ರತಾಂಡವನನ್ನು ನೋಡಲಿಕ್ಕೆ. ನಾಳೆ ಅಕ್ಟೋಬರ್ 2ಕ್ಕೆ ನಿಮ್ಮ ನಿಮ್ಮ ಊರುಗಳಲ್ಲೇ ನಿಮ್ಮ ಮ್ಮ ಮನೆಗಳ ಸಮೀಪದ ಚಿತ್ರಮಂದಿರಗಳಲ್ಲೇ 'ಬೆಳ್ಳಿತೆರೆ' ಅಲಂಕರಿಸುತ್ತಿದೆ 'ಕಾಂತಾರ, ಅಧ್ಯಾಯ-1' ನೋಡಿ ಪುನೀತರಾಗಿ. ದೈವದ ಆಶೀರ್ವಾದ ನಿಮಗೂ ಸಿಗಲಿ... ಅಂದಹಾಗೆ; 'ಕಾಂತಾರ' ಪ್ರೀಕ್ವೆಲ್ ಬಿಗ್ ಬಡ್ಜೆಟ್‌ನಲ್ಲಿ (65 ಕೋಟಿ) ಸುಮಾರು 17 ಭಾಷೆಗಳಲ್ಲಿ ರಿಲೀಸ್ ಆಗುತ್ತಿದೆ! ದೈವಾನು ಗ್ರಹದಿಂದ ಸಿನಿಮಾ ಗೆದ್ದುಬಿಟ್ರೆ 'ಹೊಂಬಾಳೆ' ಫಿಲಂಸ್ ಜಗದ್ವಿಖ್ಯಾತಿ ಗಳಿಸುವುದರಲ್ಲಿ ಅನುಮಾನವೇ ಇಲ್ಲ! 'ಹೊಂಬಾಳೆ' ನಮ್ಮ ಕನ್ನಡ ಚಿತ್ರರಂಗದ ಹೆಮ್ಮೆ ಅಲ್ಲವೇ...

## ಷೂಟಿಂಗ್ ಮುಗಿಯೋದರೊಳಗೆ ಸತ್ತರು ನಾಲ್ಕು ಜನ!

ಕಾಂತಾರ, ಅಧ್ಯಾಯ-1 ಷೂಟಿಂಗ್ ಶುರುವಾಗಿ ಮುಗಿಯುವುದರೊಳಗೆ ಸಿನಿಮಾಗೆ ಸಂಬಂಧಿಸಿದ ನಾಲ್ಕು ಜನ ಸತ್ತು ಹೋಗಿದ್ದಾರೆ.

'ಕಾಂತಾರ' ಮೊದಲೇ ದೈವದ ಸಿನಿಮಾ. ಯಾರು ಏನು ಅಪಚಾರ ಮಾಡಿದ್ರೋ ಏನೋ... ದೈವ ಬಲಿ ತೆಗೆದುಕೊಳ್ತು ಅಂತಲೇ ಜನ ಮಾತಾಡಿಕೊಂಡ್ರು. ಆದರೆ ಇದು ನಿಜವಲ್ಲ...

ಘಟನೆ ಒಂದರಲ್ಲಿ; ಕೊಲ್ಲೂರು ಬಳಿ ಷೂಟಿಂಗ್‌ಗೆ ತೆರಳುತ್ತಿದ್ದ ವಾಹನ ಅಪಘಾತಕ್ಕೀಡಾಗಿ ಅಸಿಸ್ಟೆಂಟ್ ಡೈರೆಕ್ಟರ್ ಸತ್ತು ಕೆಲವರು ಗಾಯಗೊಂಡರು.

ಘಟನೆ ಎರಡರಲ್ಲಿ; ಕೇರಳ ಮೂಲದ ಜೂನಿಯರ್ ಆರ್ಟಿಸ್ಟ್ ಕಪಿಲ್ ಸೌಪರ್ಣಿಕಾ ನದಿಯಲ್ಲಿ ಸತ್ತು ಹೋದ. ಅವನಿಗೆ ಸರಿಯಾಗಿ ಈಜಲು ಬರುತ್ತಿರಲಿಲ್ಲ.

ಘಟನೆ ಮೂರರಲ್ಲಿ; ಕಾಮಿಡಿ ಕಿಲಾಡಿ ರಾಕೇಶ್ ಪೂಜಾರಿ ಷೂಟಿಂಗ್ ಮುಗಿಸಿಕೊಂಡು ಉಡುಪಿಯ ಬೀಚ್‌ನಲ್ಲಿ ನೈಟ್ ಪಾರ್ಟಿಂಗ್ ಹೋಗಿ ಹೃದಯಾಘಾತಕ್ಕೀಡಾಗಿ ಸತ್ತು ಹೋದ.

ಘಟನೆ ನಾಲ್ಕರಲ್ಲಿ; ಮಿಮಿಕ್ರಿ ಕಲಾವಿದ ವಿಜು ಆಗುಂಬೆ ಹೋಂಸ್ಟೇನಲ್ಲಿ ತಂಗಿದ್ದಾಗ ಹಾರ್ಟ್ ಅಟ್ಯಾಕ್ ಆಗಿ ಸತ್ತು ಹೋದ. ಈ ನಾಲ್ಕು ಸಾವುಗಳಿಗೆ 'ದೈವ'ದ ಕೋಪವೇ ಕಾರಣ ಅನ್ನೋದು ಈಗಲೂ ಚರ್ಚೆಯಾಗುತ್ತಿದೆ! ಆದರೆ ವೈದ್ಯಲೋಕ ಮಾತ್ರ ಬೇರೆ ಕಾರಣ ಹೇಳುತ್ತದೆ.

## ರಿಷಬ್ ಶೆಟ್ಟಿ ಬಗ್ಗೆ ನಿಮಗೆಷ್ಟು ಗೊತ್ತು ?



ರಿಷಬ್‌ಶೆಟ್ಟಿ ಅವರ ನಿಜವಾದ ಹೆಸರು ಪ್ರಶಾಂತ್‌ಶೆಟ್ಟಿ. ಸಿನಿಮಾಗಾಗಿ ಅವರು ರಿಷಬ್ ಆದರು ಅಷ್ಟೇ. ವರು ಕುಂದಾಪುರ ಸಮೀಪದ 'ಕೆರಾಡಿ' ಗ್ರಾಮದ ಹಿರಿಯ ಜ್ಯೋತಿಷಿ ಭಾಸ್ಕರ ಶೆಟ್ಟರ ಮಗ. ಭಾಸ್ಕರಶೆಟ್ಟಿ ಹಿರಿಯ ಜ್ಯೋತಿಷಿ ಭಾಸ್ಕರ ಶೆಟ್ಟರ ಮಗ. ಭಾಸ್ಕರ ಶೆಟ್ಟಿ ಅವರು ಸೂರ್ಯನಷ್ಟೇ ಸತ್ಯವಂತರು. ಬೆಂಗಳೂರು ಕಡೆಯ ಇತರೆ ಗುರೂಜಿಗಳಂತೆ ಸುಳ್ಳುಪೊಳ್ಳು ಹೇಳಿ ದುಡ್ಡು ಮಾಡಿದವರಲ್ಲ. ಹಾಗಾಗಿ; ಪ್ರಶಾಂತ್‌ಶೆಟ್ಟಿ ಅಲಿಯಾಸ್ ರಿಷಬ್‌ಶೆಟ್ಟಿ ಬಹಳ ಕಷ್ಟಪಟ್ಟು ಓದಿದರು. ಅವರು ಡಿಗ್ರಿ ಮಾಡಿದ್ದು ವಿಜಯಾ ಕಾಲೇಜ್‌ನಲ್ಲಿ. ಖರ್ಚಿಗಾಗಿ ಬೈಂದೂರು ಬಸ್ ನಿಲ್ದಾಣದಲ್ಲಿ ಅಂಗಡಿ ಮುಂಗಟ್ಟುಗಳಿಗೆ ನೀರಿನ ಕ್ಯಾನ್ ಹಾಕಿದ್ದಾರೆ. ತಿಂಡಿ ಪೊಟ್ಟಣಗಳ ವಿತರಿಸಿದ್ದಾರೆ. ಕಡೆಗೆ ಹೋಟೆಲ್‌ಗಳಲ್ಲೂ ಸಪ್ಲೈಯರ್ ಕೆಲಸ ಮಾಡಿಬಿಟ್ಟಿದ್ದಾರೆ. ಇಂತಹ ಕಷ್ಟ ಜೀವಿಗೆ ಸಿನಿಮಾ ಲೋಕದಲ್ಲಿ ಏನಾದರೂ ಸಾಧನೆ ಮಾಡಬೇಕು ಅನ್ನಿಸಿದಾಗ, ಬೆಂಗಳೂರಿಗೆ ಬಂದು ಸರ್ಕಾರಿ ಪ್ರಾಯೋಜಿತ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ಸೇರಿ ನಿರ್ದೇಶನದ ಪಾಠ ಕಲಿತು, ಅವಕಾಶ ಸಿಗುವ ತನಕ ಗಾಂಧಿನಗರದಲ್ಲಿ ಪಡಬಾರದ ಪಾಡು ಪಟ್ಟಿದ್ದಾರೆ! ತುಘಲಕ್, ಲೂಸಿಯಾ ಮುಂತಾದ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿ ಹೊಟ್ಟೆ ಹೊರೆದಿದ್ದಾರೆ. ಆಮೇಲೆ ತಮ್ಮ ಕಡೆಯವರೇ ಆದ ರಕ್ಷಿತ್‌ಶೆಟ್ಟಿ ಪರಿಚಯವಾಗಿ ಇಬ್ಬರ ನಡುವೆ ಒಳ್ಳೆ ಗೆಳೆತನ ಬೆಳೆದಿದೆ. ರಕ್ಷಿತ್‌ಶೆಟ್ಟಿ ನಟನೆ ಹಾಗೂ ನಿರ್ದೇಶನದ ''ಉಳಿದವರು ಕಂಡಂತೆ' ಚಿತ್ರದಲ್ಲಿ ರಿಷಬ್ ಗಮನಾರ್ಹ ಪಾತ್ರದಲ್ಲಿ ನಟಿಸಿದ್ದಾರೆ. ಆನಂತರ ರಿಷಬ್‌ಶೆಟ್ಟಿಗೆ ನಿರ್ದೇಶನ ಮಾಡುವ ಚಾನ್ಸ್ ರಕ್ಷಿತ್‌ಶೆಟ್ಟಿಯಿಂದಲೇ ದೊರಕುತ್ತದೆ.

ನಕ್ಸಲ್ ಹಿನ್ನೆಲೆಯ 'ರಿಕ್ಕಿ' ಚಿತ್ರಿಸಲ್ಪಡುತ್ತದೆ. ರಕ್ಷಿತ್‌ಶೆಟ್ಟಿ-ಹರಿಪ್ರಿಯ ಜೋಡಿಯ ಆ ಸಿನಿಮಾಗೆ ಉತ್ತಮ ಪ್ರಶಂಸೆ ದೊರೆಯುತ್ತದೆ. ಆದರೆ ಅದು ಆರ್ಥಿಕವಾಗಿ ಅಂಥಾ ಗೆಲುವು ದಾಖಲಿಸುವುದಿಲ್ಲ. ಗೆಳೆಯನಿಗಾಗಿ ರಕ್ಷಿತ್‌ಶೆಟ್ಟಿ ಇನ್ನೊಂದು ಚಾನ್ಸ್ ಕೊಟ್ಟಾಗ 'ಕಿರಿಕ್ ಪಾರ್ಟಿ' ತಯಾರಾಗುತ್ತದೆ. ಅದು 250 ದಿನಗಳ ದಾಖಲೆ ಪ್ರದರ್ಶನ ಕಂಡು ಭರ್ಜರಿ ಹಿಟ್ ಆಗುತ್ತದೆ. ಗಮನೀಯ ಸಂಗತಿ ಏನೆಂದರೆ, ರಕ್ಷಿತ್ ಮತ್ತು ರಿಷಬ್ 'ಕಿರಿಕ್ ಪಾರ್ಟಿ' ಮೂಲಕ ರಶ್ಮಿಕಾ ಮಂದಣ್ಣಳನ್ನು ಸಿನಿ ಜಗತ್ತಿಗೆ ಪರಿಚಯಿಸಿದ್ದು!!



'ಕಿರಿಕ್ ಪಾರ್ಟಿ' ನಂತರ ರಿಷಬ್ ಶೆಟ್ಟಿ ಅವರ ಅದೃಷ್ಟವೇ ಬದಲಾಗುತ್ತದೆ. 'ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ' ಚಿತ್ರ ಸೂಪರ್ ಹಿಟ್ ಆಗಿ ಅದಕ್ಕೆ ಹತ್ತಾರು ಪ್ರಶಸ್ತಿಗಳು ಸಿಗುತ್ತವೆ. ಆನಂತರ ಜಯತೀರ್ಥ ನಿರ್ದೇಶನದ 'ಬೆಲ್ ಬಾಟಂ'ನಲ್ಲಿ ಹೀರೋ ಆಗಿ ನಟಿಸಿದ್ದು ಅದು ಸೂಪರ್ ಹಿಟ್ ಆಗುತ್ತದೆ.

ಕರಾವಳಿಯ ಇನ್ನೊಬ್ಬ ಗೆಳೆಯ, 'ಮೊಟ್ಟೆ ಮಿತ್ರ' ರಾಜ್ ಬಿ. ಶೆಟ್ಟಿ ಜೊತೆ 'ಗರುಡ ಗಮಾನ ವೃಷಭ ವಾಹನ'ದಲ್ಲಿ ನಟಿಸಿದ್ದು ಅದೂ ಕೂಡ ಬಂಪರ್ ಹಿಟ್ ಆಗುತ್ತದೆ. ಆನಂತರ 2020ರಲ್ಲಿ 'ಕೊರೋನಾ' ಕಾಲದಲ್ಲಿ ಭವಿಷ್ಯದ ಚಿಂತೆ ಮಾಡ್ತಾ ದೈವ ಸ್ಮರಣೆ ಮಾಡ್ತಾ ಬರೆದಂತ 'ಕಾಂತಾರ' ಇತಿಹಾಸ ಸೃಷ್ಠಿಸುತ್ತದೆ! ದೈವಾನು ಗ್ರಹದಿಂದ ರಾಷ್ಟ್ರಪ್ರಶಸ್ತಿ ತಂದು ಕೊಡುತ್ತದೆ!! 'ಡಿವೈನ್ ಸ್ಟಾರ್' ಎಂಬ ಪಟ್ಟವನ್ನೂ ಕೊಟ್ಟಿದೆ ಕಾಂತಾರ!!! ರಿಷಬ್ ಶೆಟ್ಟಿ ಈಗ ಬರೀ ಸ್ಯಾಂಡಲ್‌ವುಡ್ ಸ್ಟಾರ್ ಅಲ್ಲ, ಗ್ಲೋಬರ್ ಸ್ಟಾರ್...

# ಹಿಂದಿ ಪ್ರಚಾರ ಸಭೆಗೆ ವಿರೋಧ ಮಾಡಿದ್ದಕ್ಕೆ 'ಕರವೇ' ಕನ್ನಡಿಗರನ್ನು ಬಂಧಿಸಿದ್ದು ಸರಿಯೇ?

ಹೆಚ್.ಕೆ. ಮಹದೇವ್

**ಕೇಂ**ದ್ರ ಗೃಹ ಇಲಾಖೆಯ ರಾಜ ಭಾಷಾ ಸಮಿತಿ ಕಳೆದ 25/09/2025 ರಂದು ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲಿನಲ್ಲಿ ಹಿಂದಿ ಪ್ರಚಾರ ಸಭೆ ಆಯೋಜಿಸಿದ್ದು, ಇದಕ್ಕೆ ವಿರೋಧ ವ್ಯಕ್ತಪಡಿಸಿದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಹೋಟೆಲ್ ಒಳಗೆ ನುಗ್ಗಿ ಪ್ರತಿಭಟನೆ ನಡೆಸಿದಾಗ, ಅಲ್ಲಿದ್ದ ಸುಮಾರು 40 ಮಂದಿ ಕನ್ನಡಿಗರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ!



ಪಂಚತಾರ ಹೋಟೆಲ್ ತಾಜ್ ಒಳಗಡೆ ಆರು ಮಂದಿ ಸಂಸತ್ ಸದಸ್ಯರ ಉಪಸ್ಥಿತಿಯಲ್ಲಿ ಸಭೆ ನಡೆಯುತ್ತಿತ್ತಂತೆ.ಇದನ್ನು ಹೇಗೋ ಅರಿತುಕೊಂಡ ಕರವೇ ನಾರಾಯಣ ಗೌಡರ ಬಣದ ಕಾರ್ಯಕರ್ತರು ಅಲ್ಲಿಗೆ ನುಗ್ಗಿ ಕನ್ನಡ ವಿರೋಧಿ ಸಭೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಂತಿಮವಾಗಿ ಹೈಗ್ರೌಂಡ್ಸ್ ಪೊಲೀಸ್ ಎಂಟ್ರಿಯಾಗಿ ಕೈಗೆ ಸಿಕ್ಕಿದ ಎಲ್ಲಾ ಕಾರ್ಯಕರ್ತರನ್ನು ಜೀಪ್‌ಗೆ ತುಂಬಿಸಿಕೊಂಡು, ಪ್ರಕರಣ ದಾಖಲಿಸಿ ಕೋರ್ಟ್ ಮುಂದೆ ನಿಲ್ಲಿಸಿದ್ದಾರೆ. ಮಾನ್ಯ ನ್ಯಾಯಾಲಯ ಬಂಧಿಗಳನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದ್ದು, ಎಲ್ಲರೂ ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ.

ಕೇಂದ್ರ ಸರ್ಕಾರದಿಂದ ಹಿಂದಿ ಭಾಷೆಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರಿಕೆ ಮಾಡುವ ಹುನ್ನಾರ! ಈ ಹಿನ್ನೆಲೆಯಲ್ಲಿ ತಾಜ್ ವೆಸ್ಟ್ ಎಂಡ್ ಒಳಗೆ ಗುಟ್ಟಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ. ಅವರನ್ನೂ ಬಂಧಿ



ಕರವೇ ಸೈನಿಕರು

ಸಿರೋ ಪೊಲೀಸರು, ಕರವೇ ಕಾರ್ಯಕರ್ತರು ಯಾವುದೇ ಮುನ್ಸೂಚನೆ ನೀಡದೆ ದಾಳಿ ನಡೆಸಿದ್ದು, ಈ ಬಗ್ಗೆ ದೂರು ಬಂದ ಹಿನ್ನಲೆಯಲ್ಲಿ ನಾವು ಕಾನೂನು ಕ್ರಮ ಜರುಗಿಸಬೇಕಾಯ್ತು ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸರು ಹೇಳಿದ್ದಾರೆ.

ಅಂದಿನ ಪ್ರತಿಭಟನೆಯ ನೇತೃತ್ವವನ್ನು ಕರವೇ ಜಿಲ್ಲಾಧ್ಯಕ್ಷ ಧರ್ಮರಾಜ್ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ ಮೋಹನ್ ವಹಿಸಿದ್ದು ಅವರೂ ಕೂಡ ಈಗ ಜೈಲಿನಲ್ಲಿದ್ದಾರೆ. ಒಟ್ಟಾರೆ, ಕನ್ನಡಿಗರ ಮೇಲೆ ಹಿಂದಿ ಭಾಷೆ ಹೇರಿಕೆ ವಿವಾದವು ತೀವ್ರ ಸ್ವರೂಪವನ್ನು ಪಡೆದುಕೊಂಡಿದೆ ಅನ್ನೋದು ಸತ್ಯ. ಈ ಸಂಬಂಧ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡರು, ಕೇಂದ್ರ ಸರ್ಕಾರದ ಸಂಸದೀಯ ರಾಜಭಾಷಾ ಸಮಿತಿ ಬೆಂಗಳೂರಿನ ಹೋಟೆಲ್‌ನಲ್ಲಿ ಮೂರು ದಿನಗಳಿಂದ ಕನ್ನಡಿಗರೂ



ಶ್ವೇತಾಗೌಡ

ಸೇರಿದಂತೆ ಹಿಂದಿಯೇತರ ರಾಜ್ಯಗಳ ಜನರ ಮೇಲೆ ಹಿಂದಿ ಹೇರಿಕೆ ಮಾಡುವ ಹುನ್ನಾರ ನಡೆದಿದೆ. ಅವರು ನಡೆಸುತ್ತಿದ್ದ ಕಾರ್ಯಕ್ರಮದ ವಿರುದ್ಧ ನಮ್ಮ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು ತಪ್ಪೇ? ಈ ಘಟನೆಗೆ ಸಂಬಂಧಿಸಿದಂತೆ ನಮ್ಮ ನಲವತ್ತಕ್ಕೂ ಹೆಚ್ಚು ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಘಟನೆಯ ನಂತರ ಇಡೀ ಪ್ರಕರಣವನ್ನು ತಿರುಚುವ ಯತ್ನಗಳು ನಡೆಯುತ್ತಿವೆ.

ಈ ಕಾರ್ಯಕ್ರಮ ಹಿಂದಿ ಹೇರಿಕೆಯ ಕಾರ್ಯಕ್ರಮ ಅಲ್ಲ, ಅದು ಹಿಂದಿ ಭಾಷೆಗೆ ಸಂಬಂಧಿಸಿದ್ದೇ ಅಲ್ಲ ಎಂದು ತಿರುಚಲಾಗುತ್ತಿದೆ. ಕೇಂದ್ರ ಸರ್ಕಾರದ ರಾಜಭಾಷಾ ಸಮಿತಿ ಇರುವುದೇ ಹಿಂದಿ ಪ್ರಚಾರಕ್ಕೆ! ಮತ್ತು ಹಿಂದಿಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರುವುದಕ್ಕೆ!! ಹಿಂದಿ ಸಾಮ್ರಾಜ್ಯಶಾಹಿಯನ್ನು ಸ್ಥಾಪಿಸುವ ಸಲುವಾಗಿಯೇ ಈ ರಾಜಭಾಷಾ ಸಮಿತಿ ಕೆಲಸ ಮಾಡುತ್ತಿದೆ! ಯಾರಿಗಾದರೂ ಅನುಮಾನವಿದ್ದರೆ ರಾಜಭಾಷಾ ಸಮಿತಿ ಇದುವರೆಗೆ ಏನು ಕೆಲಸ ಮಾಡಿದೆ ಎಂಬುದನ್ನು ಗಮನಿಸಬಹುದು...

ಭಾರತದಲ್ಲಿ ರಾಜಶಾಹಿ ವ್ಯವಸ್ಥೆ ಹೋಗಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾಗಿದ್ದು 1947ರಲ್ಲಿ. ಆದರೆ ರಾಜಭಾಷೆಯ ಹೆಸರಲ್ಲಿ ಪ್ರಜಾಪ್ರಭುತ್ವದ, ಪ್ರಾದೇಶಿಕ ಭಾಷೆಗಳ ಕತ್ತು ಹಿಸುಕುವ ಯತ್ನ ಅಂದಿನಿಂದಲೂ ನಡೆಯುತ್ತಿದೆ. ದೇಶದಲ್ಲಿ ಈಗ ರಾಜರೂ ಇಲ್ಲ, ರಾಜಭಾಷೆಗಳೂ ಇಲ್ಲ. ಇರುವುದು ಈ ನೆಲದ ಭಾಷೆಗಳು. ನಮಗೆ ನಮ್ಮ ಕನ್ನಡವೇ ರಾಷ್ಟ್ರಭಾಷೆ! ಇನ್ಯಾವುದೋ ಭಾಷೆಯನ್ನು ರಾಜಭಾಷೆ ಎಂದು ಹೇಳಿ ನಮ್ಮ ಮೇಲೆ ಹೇರಲು ಯತ್ನಿಸಿದರೆ ನಾವು ಸುಮ್ಮನಿರಲು ಸಾಧ್ಯವಿಲ್ಲ!

ಹಿಂದಿಗೆ ರಾಷ್ಟ್ರಭಾಷೆಯ ಸ್ಥಾನ ನೀಡಲು ಯತ್ನಿಸಿ ಹಿಂದಿ ಸಾಮ್ರಾಜ್ಯಶಾಹಿಗಳು ವಿಫಲವಾಗಿದ್ದು ಇತಿಹಾಸ. ಆದರೂ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಸುಳ್ಳು ಪ್ರಚಾರ ಮಾಡಲಾಯಿತು! ಹಿಂದಿ ರಾಷ್ಟ್ರಭಾಷೆಯಲ್ಲ ಎಂಬ ಸುಳ್ಳು ಬಹಿರಂಗವಾದ ಬಳಿಕ ಈಗ ಅದನ್ನು 'ರಾಜಭಾಷೆ' ಎಂದು ಮೆರೆಸಲಾಗುತ್ತಿದೆ. ಈ ಹುನ್ನಾರವನ್ನು ನಾವು ವಿಫಲಗೊಳಿಸದೇ ಬಿಡುವುದಿಲ್ಲ.... ಕರ್ನಾಟಕದಲ್ಲಿ ಹಿಂದಿ ಹೇರಿಕೆಗೆ ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ, ನಾವು ನಮ್ಮ ಪ್ರಾಣ ವನ್ನು ಒತ್ತೆಯಿಟ್ಟಾದರೂ ಸರಿಯೇ, ಈ ಕುತಂತ್ರವನ್ನು ಬಗ್ಗುಬಡಿಯುತ್ತೇವೆ. ಇದರಲ್ಲಿ ಯಾವುದೇ ರಾಜಿ ಇಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇದನ್ನು ಅರ್ಥ ಮಾಡಿಕೊಂಡು ಹಿಂದಿ ಹೇರಿಕೆಯನ್ನು ಕೂಡಲೇ ನಿಲ್ಲಿಸಬೇಕು. ಇದು ನಮ್ಮ ಆಗ್ರಹ. ದೇಶದ ಐಕ್ಯತೆಗೆ ಧಕ್ಕೆ ತರುತ್ತಿರುವ ರಾಜಭಾಷಾ ಸಮಿತಿಯನ್ನು ರದ್ದುಪಡಿಸಬೇಕು. ಅದರ ಅಗತ್ಯ ದೇಶಕ್ಕೆ ಇಲ್ಲವೇ ಇಲ್ಲ.



ಎಚ್ಚರಿಕೆ ನೀಡಿದ ಟಿ.ಎ. ನಾರಾಯಣಗೌಡ

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪೊಲೀಸ್ ಕೇಸಿಗೆ, ಜೈಲಿಗೆ ಬೆದರುವುದಿಲ್ಲ, ಆದರೆ ನಮ್ಮ ಮುಖಂಡರ ಮೇಲೆ ಇಲ್ಲಸಲ್ಲದ ಕೇಸುಗಳನ್ನು ಹಾಕಿ,



ಜಿಲ್ಲಾಧ್ಯಕ್ಷ ಧರ್ಮೇಗೌಡ

ಸಂಬಂಧಪಡದ ಸೆಕ್ಷನ್‌ಗಳನ್ನು ಹೇರಿದರೆ ನಾವು ಸುಮ್ಮನಿರುವುದಿಲ್ಲ. ರಾಜ್ಯದ ಎಲ್ಲ ಭಾಗಗಳಿಂದ ನಮ್ಮ ಕಾರ್ಯಕರ್ತರು ಲಕ್ಷಾಂತರ ಸಂಖ್ಯೆಯಲ್ಲಿ ಬೆಂಗಳೂರಿಗೆ ಮುತ್ತಿಗೆ ಹಾಕಬೇಕಾಗುತ್ತದೆ. ಪೊಲೀಸ್ ಇಲಾಖೆ, ರಾಜ್ಯ ಸರ್ಕಾರ ಏನಾದರೂ ನಮ್ಮ ಮೇಲೆ ದಬ್ಬಾಳಿಕೆ ನಡೆಸಲು ಹೊರಟರೆ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಲು ಬಯಸುತ್ತೇನೆ ಎಂದು ಗುಡುಗಿದ್ದಾರೆ. ನಮ್ಮ ಪ್ರತಿಭಟನೆಗೆ ಸಂಬಂಧಪಟ್ಟಂತೆ ಹೈಗ್ರೌಂಡ್ಸ್ ಠಾಣೆಯ ಇನ್ಸ್‌ಪೆಕ್ಟರ್ ಭರತ್ ಅವರನ್ನು ಅಮಾನತು ಮಾಡಲಾಗಿದೆಯಂತೆ. ಇದು ನಿಜವೇ ಆಗಿದ್ದರೆ... ನಾಚಿಕೆಗೇಡಿತನ!

ರಾಜಭಾಷಾ ಸಮಿತಿ ಕಾರ್ಯಕ್ರಮವನ್ನು ಪಂಚತಾರಾ ಹೋಟೆಲ್‌ನಲ್ಲಿ ಕದ್ದುಮುಚ್ಚಿ ನಡೆಸಲಾಗುತ್ತಿತ್ತು. ಪೊಲೀಸರಿಗಾಗಲೇ, ಮಾಧ್ಯಮದವರಿಗಾಗಲೇ ಯಾವುದೇ ಮಾಹಿತಿ ನೀಡಿರಲಿಲ್ಲ.ವಾಸ್ತವ ಹೀಗಿದ್ದಾಗ್ಯೂ ಕೂಡ ಇನ್ಸ್‌ಪೆಕ್ಟರ್‌ರವರನ್ನು ಅಮಾನತು ಮಾಡಿದ್ದು ಯಾಕೆ? ಇದರ ಉದ್ದೇಶವೇನು? ಸರ್ಕಾರ ಈ ಕೂಡಲೇ ಈ ಅಮಾನತು ಆದೇಶವನ್ನು ಹಿಂದಕ್ಕೆ ಪಡೆಯಬೇಕು ಎಂದು ನಾರಾಯಣಗೌಡ ಆಗ್ರಹಿಸಿದ್ದಾರೆ.

ಹೈ ಗ್ರೌಂಡ್ಸ್ ಪೊಲೀಸ್ ಇನ್ಸ್‌ಪೆಕ್ಟರ್ ಅಮಾನತ್ತು ಆದೇಶ ಹಿಂಪಡೆಯೋ ವಿಚಾರದಲ್ಲಿ ಸರ್ಕಾರ ಇನ್ನೂ ತನ್ನ ತೀರ್ಮಾನ ತಿಳಿಸಿಲ್ಲ. ಸಂತಸಕರ ಸಂಗತಿ ಏನೆಂದರೆ, ಪೊಲೀಸ್ ಬಂಧಿಸಿ ಜೈಲಿಗೆ ರವಾನಿಸಿದ್ದ 41 ಕರವೆ ಸೈನಿಕರು ಒಂದೇ ರಾತ್ರಿಯಲ್ಲಿ ಹೊರಗಡೆ ಬಂದಿದ್ದಾರೆ. ಕ್ಯಾಪ್ಟನ್ ನಾರಾಯಣ ಗೌಡರು ಎಲ್ಲರಿಗೂ ಬೇಲ್ ಮಾಡಿಸಿ, ಖುದ್ದು ಸೆಂಟ್ರಲ್ ಜೈಲ್ ಮುಂದೆ ನಿಂತು, ಹೊರಗಡೆ ಬಂದ ಕೂಡಲೇ ಎಲ್ಲರಿಗೂ ಹಾರ ಹಾಕಿ ಅಭಿನಂದಿಸಿ, ಕನ್ನಡ ಹೋರಾಟಕ್ಕೆ ಜೈಕಾರ ಮೊಳಗಿಸಿದ್ದಾರೆ. ಸರ್ಕಾರದ ಹಣ ಲೂಟಿ ಮಾಡುವ ರಾಜಕಾರಣಿಗಳಿಗೇ ಭಯವಿಲ್ಲ, ನಮ್ಮ ಭಾಷೆ, ನಾಡಿಗಾಗಿ ಜೈಲಿಗೆ ಹೋದವರು ಅಂಜಬಾರದು....

ನೀವು (ಸರ್ಕಾರ) ನೂರು ಕೇಸ್ ಹಾಕಿದರು ಕನ್ನಡ ಹೋರಾಟಗಾರರು ಅಂಜುವುದಿಲ್ಲ. ಅರೆಸ್ಟ್ ಆಗಿ ಜೈಲಿಗೆ ಹೋಗಿ ಬಂದಿರೋ 41 ಜನರ ಪೈಕಿ 13 ಮಹಿಳೆಯರೂ ಕೂಡಾ ಇದ್ದಾರೆ. 06 ತಿಂಗಳ ಹಸುಗೂಸನ್ನು ಮನೆಯಲ್ಲಿ ಬಿಟ್ಟು ಬಂದು ಹೋರಾಟಕ್ಕೆ ಬಂದವರು ಇದ್ದಾರೆ. ಕನ್ನಡಿಗರ ಮೇಲೆ ಹಿಂದಿಯನ್ನು ಹೇರುತ್ತಿದ್ದರೆ ಕರ್ನಾಟಕದ ರಾಜಕಾರಣಿಗಳು ರಣಹೇಡಿಗಳ ರೀತಿ ಕುಳಿತುಕೊಂಡಿದ್ದಾರೆ. ತಮಿಳುನಾಡಿನಲ್ಲಿ ಪಕ್ಷಬೇಧ, ಜಾತಿ ಭೇದ ಭಾವ ಮರೆತು ಮಾತೃಭಾಷೆಯ ಪರ ನಿಲ್ಲುತ್ತಾರೆ...ಎಂದು ನಾರಾಯಣ ಗೌಡ ಆಡಳಿತ ಸರ್ಕಾರದ ವಿರುದ್ಧವಾಗ್ದಾಳಿ ನಡೆಸಿದರು. ಕರ್ನಾಟಕ ಜನತೆ ನೆನಪಿಟ್ಟುಕೊಳ್ಳಬೇಕು, ನಾರಾಯಣ ಗೌಡರಾಗಲಿ, ಮೊನ್ನೆ ಜೈಲಿಗೆ ಹೋಗಿ ಬಂದವರಾಗಲಿ, ಅವರ ತೀಟೆಗೆ ಜೈಲಿಗೆ ಹೋದವರಲ್ಲ...

ಕನ್ನಡಿಗರ ಮೇಲೆ ಹಿಂದಿ ಭಾಷೆಯನ್ನು ಹೇರುತ್ತಿರುವ ಉತ್ತರದವರ ವಿರುದ್ಧ ಹೋರಾಡಿ ಜೈಲಿಗೆ ಹೋಗಿ ಬಂದವರು. ಇಂಥ ಸಂದರ್ಭದಲ್ಲಿ ಕನ್ನಡಿಗರು ಅವರ ಬೆನ್ನಿಗೆ ನಿಲ್ಲಬೇಕಲ್ಲವೇ... ಕರ್ನಾಟಕದವರಾಗಿ, ಕನ್ನಡಿಗರಾಗಿ ಮತ್ತು ಪತ್ರಕರ್ತರಾಗಿ ನಾವು ಸರ್ಕಾರದ ಇಬ್ಬಗೆ ನೀತಿಯನ್ನು ಖಂಡಿಸಿ ವರದಿ ಮಾಡಿದ್ದೇವೆ. ನೀವು? ಹಾಗಾದ್ರೆ ನೀವು ಕನ್ನಡಿಗರಲ್ಲವೇ?? ನೀವು ಇಲ್ಲಿನ ಅನ್ನ ನೀರು ಬಳಸುತ್ತ ಬದುಕುತ್ತಿಲ್ಲವೇ???

# ರಾತ್ರೋರಾತ್ರಿ 1,478 ರೌಡಿಗಳ ಮನೆ ಮೇಲೆ ಪೊಲೀಸ್ ರೇಡ್!

**ದಕ್ಷ ಪೊಲೀಸ್ ಕಮೀಷನರ್ ಬಿ. ದಯಾನಂದರು ನಿರ್ಗಮಿಸಿದ ಬಳಿಕ ಪೊಲೀಸ್ ವ್ಯವಸ್ಥೆಯಲ್ಲಿ 'ವ್ಯತ್ಯಾಸವಾಗಿ' ರೌಡಿ ಎಲಿಮೆಂಟ್‌ಗಳು, ಡ್ರಗ್ ಪೆಡ್ಲರ್‌ಗಳು ಮತ್ತೆ ಬಾಲ ಬಿಚ್ಚಿ ನರ್ತಿಸುತ್ತಿದ್ದರು. ಯಾವಾಗ ಸೀಮಂತ್ ಕುಮಾರ್ ಸಿಂಗ್ ಹೊಸ ಪೊಲೀಸ್ ಕಮೀಷನರ್ ಆಗಿ ಆಗಮಿಸಿದರೋ... ಇವರೆಲ್ಲರ ನಿದ್ದೆ ಹಾರಿ ಹೋಯಿತು!**


✍ ಹೆಚ್.ಕೆ. ಮಹದೇವ್



ಬೆಂಗಳೂರು ನಗರದ 11 ಉಪ ವಿಭಾಗಗಳ ವಿವಿಧ ಬಡಾವಣೆಗಳಲ್ಲಿ ನೆಲಸಿರುವ ರೌಡಿಗಳ ಮನೆಗಳ ಮೇಲೆ ಕಳೆದ ಶುಕ್ರವಾರ ಮಧ್ಯ ರಾತ್ರಿ ದಿಢೀರ್ ದಾಳಿ ನಡೆಸಿದ ಪೊಲೀಸರು, ಸರಿ ಸುಮಾರು 1478 ರೌಡಿಗಳಿಗೆ ಬಿಸಿ ಮುಟ್ಟಿಸಿದ್ದಾರೆ! ಮುಂದಿನ ದಿನಗಳಲ್ಲಿ ರೌಡಿ ಚುಟುವಟಿಕೆಗಳಲ್ಲಿ ಭಾಗಿ ಆಗಬಾರದು, ಒಂದೇ ಒಂದು ಪ್ರಕರಣ ದಾಖಲಾದರೂ ಸುಮೊಟೊ ಬುಕ್ ಮಾಡಿ ಜೈಲಿಗೆ ದಬ್ಬಲಾಗುವುದು ಅಥವಾ ಗಡಿಪಾರು ಮಾಡಲಾಗುವುದು ಎಂದು ಖಡಕ್ ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ.

ಮಾಹಿತಿಗಳ ಪ್ರಕಾರ, ಆ ರಾತ್ರಿ 1,478 ರೌಡಿಗಳ ಮನೆಗಳ ಮೇಲೆ ಆಯಾ ಠಾಣೆಗಳ ಡಿಸಿಪಿ, ಎಸಿಪಿ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಸಿಬ್ಬಂದಿ ವರ್ಗ ದಾಳಿ ನಡೆಸಿದ್ದು, ಪದೇ ಪದೇ ಅಪರಾಧಗಳಲ್ಲಿ ತೊಡಗುವ ಎಂಒಬಿ ಗಳ (ಅಪರಾಧ ಹಿನ್ನೆಲೆಯುಳ್ಳವರು) 165 ಮನೆಗಳ ಮೇಲೆ ಕೂಡ ದಾಳಿ ನಡೆಸಿ ಪರಿಶೀಲನೆ ನಡೆಸಿ ಎಚ್ಚರಿಕೆ ನೀಡಲಾಗಿದೆ.

ಈ ಕಾರ್ಯಾಚರಣೆಯ ವೇಳೆ 124 ಹೊಸ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯ ಹಾಗೂ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಕೆಲವು ರೌಡಿಗಳನ್ನು ಗಡಿಪಾರು ಮಾಡಲಾಗಿದ್ದು, ಆ ಪೈಕಿ ಮೂವರು ಕಿಡಿಗೇಡಿಗಳು ನಗರಕ್ಕೆ ವಾಪಸ್ ಬಂದು ನೆಲೆಸಿದ್ದು ಕಂಡುಬಂದಿದ್ದು, ಅವರ









ವಿರುದ್ಧ ಮತ್ತೆ ಪ್ರಕರಣ ದಾಖಲು ಮಾಡಿಕೊಂಡು ಕಾನೂನು ಕ್ರಮ ಜರುಗಿಸಲಾಗಿದೆ.

ಬೆಂಗಳೂರು ಮಹಾನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಸರಗಳ್ಳತನ, ದರೋಡೆ ಸೇರಿ ಸಣ್ಣಪುಟ್ಟ ಅಪರಾಧ ಚಟುವಟಿಕೆಗಳು ಹೆಚ್ಚಾಗಿದ್ದು ನೊಂದ ಜನತೆ ಈ ಬಗ್ಗೆ ಪೊಲೀಸ್ ಕಮಿಷನರ್‌ಗೆ ದೂರಿದ್ದರು. ಈ ಹಿನ್ನಲೆಯಲ್ಲಿ ಸಿಪಿ ಸೀಮಂತ್‌ಕುಮಾರ್ ಸಿಂಗ್ ಅವರು ಆಯಾ ವಿಭಾಗದ ಡಿಸಿಪಿಗಳಿಗೆ ತನಿಖೆ ನಡೆಸಿ ವರದಿ ನೀಡುವಂತೆ ಆದೇಶಿಸಿದ್ದರು. ಕಳ್ಳತನ ದರೋಡೆ ಮುಂತಾದ ಅಪರಾಧ ಚಟುವಟಿಕೆಗಳಲ್ಲಿ ರೌಡಿಗಳು ಸಹ ಭಾಗಿ ಆಗುತ್ತಿರುವ ಬಗ್ಗೆಯೂ ಪೊಲೀಸರಿಗೆ ಮಾಹಿತಿ ಬಂದಿತ್ತು.ಹೀಗಾಗಿ, ರೌಡಿಗಳು ಹಾಗೂ ಇತರೆ ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ವಹಿಸುವಂತೆ ಹಿರಿಯ ಅಧಿಕಾರಿಗಳು ಆಯಾ ಠಾಣಾ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಈ ಸೂಚನೆಯ ಬೆನ್ನಲ್ಲೇ ಶುಕ್ರವಾರ ತಡರಾತ್ರಿ ನಗರದಾದ್ಯಂತ ಹಲವು ರೌಡಿಶೀಟರ್‌ಗಳ ಮನೆಗಳ ಮೇಲೆ ನಗರ ಪೊಲೀಸರು ದಿಢೀರ್ ದಾಳಿ ನಡೆಸಿದ್ದರು ಎಂದು ಗೊತ್ತಾಗಿದೆ...

ಕೆ.ಜಿ. ಹಳ್ಳಿ, ಹಲಸೂರು, ಬಾಣಸವಾಡಿ, ಇಂದಿರಾನಗರ, ಹೆಣ್ಣೂರು, ರಾಮಮೂರ್ತಿನಗರ, ಭಾರತಿನಗರ, ಶಿವಾಜಿನಗರ, ಆಡುಗೋಡಿ, ಕೋಣನ ಕುಂಟೆ, ಕುಮಾರಸ್ವಾಮಿ ಲೇಔಟ್, ತಿಲಕ್ ನಗರ, ಹುಳಿಮಾವು, ಬೇಗೂರು, ಎಲೆಕ್ಟ್ರಾನಿಕ್ ಸಿಟಿ, ಹೆಬ್ಬಗೋಡಿ ಮುಂತಾದ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಗಳ ಮನೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ.


ಈಶಾನ್ಯ, ಉತ್ತರ, ಪೂರ್ವ, ಪಶ್ಚಿಮ, ಎಲೆಕ್ಟ್ರಾನಿಕ್ ಸಿಟಿ, ಆಗ್ನೇಯ, ನೈರುತ್ಯ, ಕೇಂದ್ರ, ವಾಯವ್ಯ, ವೈಟ್‌ಫೀಲ್ಡ್ ಹಾಗೂ ದಕ್ಷಿಣ ಉಪ ವಿಭಾಗಗಳಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ. ಕಾರ್ಯಾಚರಣೆಯಲ್ಲಿ ನಗರದ ಎಲ್ಲಾ ವಿಭಾಗಗಳ ಹಾಗೂ ಉಪ ವಿಭಾಗಗಳ ಡಿಸಿಪಿ, ಎಸಿಪಿಗಳ ನೇತೃತ್ವದಲ್ಲಿ ರೌಡಿಗಳ ಮನೆಗಳು ಹಾಗೂ ಅವರ ಅಡ್ಡಾಗಳ ಮೇಲೆ ದಿಢೀರ್ ದಾಳಿ ನಡೆಸಲಾಗಿದೆ. ರೌಡಿಶೀಟರ್‌ಗಳ ಆದಾಯದ ಮೂಲ ಹಾಗೂ ಪ್ರಸ್ತುತ ಅವರು ಮಾಡುತ್ತಿರೋ ಕೆಲಸ, ಸೇರಿದಂತೆ ಇತರೆ ವಿವರಗಳನ್ನು ಕಲೆ ಹಾಕಲಾಗಿದೆ. ದಾಳಿಯ ಸಂದರ್ಭದಲ್ಲಿ 124 ಪ್ರಕರಣಗಳು ಹಾಗೂ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್ಸ್ ವಿರುದ್ಧ 10 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ, ಮೂವರು ಹೆಚ್ಚುವರಿ









ಪೊಲೀಸ್ ಆಯುಕ್ತರು, 13 ಮಂದಿ ಡಿಸಿಪಿಗಳು, ನಗರದ ಎಲ್ಲಾ ವಿಭಾಗಗಳ ಎಸಿಪಿಗಳು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಹಾಗೂ ಕ್ರೈಂ ಸಿಬ್ಬಂದಿಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ ಎಂಬುದು ವಿಶೇಷ.

ಅಂದಹಾಗೆ, ಯಾವ್ಯಾವ ಭಾಗದಲ್ಲಿ ಎಷ್ಟು ಮಂದಿ ರೌಡಿಗಳಿಗೆ ಬೆವರಿಳಿಸಲಾಗಿದೆ ಎಂಬುದರ ಬಗ್ಗೆ ಹೇಳುವುದಾದರೆ, ಈಶಾನ್ಯ ವಿಭಾಗದಲ್ಲಿ ನಗರ ಪೊಲೀಸರು 169 ರೌಡಿಗಳು, ಉತ್ತರ -179, ಪೂರ್ವ-247, ಪಶ್ಚಿಮ-222, ಎಲೆಕ್ಟ್ರಾನಿಕ್ ಸಿಟಿ -100, ಆಗ್ನೆಯ-120, ಕೇಂದ್ರ ವಿಭಾಗ-20, ವಾಯುವ್ಯ-102, ವೈಟ್‌ಫೀಲ್ಡ್ -140 ರೌಡಿಗಳ ಮನೆಗಳ ಮೇಲೆ ದಾಳಿ ನಡೆಸಲಾಗಿದೆ.




## ಸಿಸಿಬಿ ಕೂಡ ಆಕ್ಟಿವ್

ಇನ್ನೊಂದೆಡೆ,ಸಿಸಿಬಿ ಪೊಲೀಸರು 179 ರೌಡಿಗಳ ಮನೆಗಳ ಮೇಲೆ ಹಾಗೂ ಬಾರ್‌ಗಳ ಮೇಲೆ ದಾಳಿ ನಡೆಸಿ ರೌಡಿಗಳಿಗೆ ಚಳಿಯಲ್ಲೂ ಬೆವರಿಳಿಸಿದ್ದಾರೆ. ನಿರ್ಜನ ಪ್ರದೇಶಗಳಲ್ಲಿ ನಿರಂತರ ನಿಗಾವಹಿಸುವಿಕೆ ಮತ್ತು ಗುಪ್ತಚರ ಇಲಾಖೆ ಮಾಹಿತಿ ಆಧಾರಿತ ಕಾರ್ಯಾಚರಣೆಗಳ ಒಂದು ಭಾಗವಾಗಿ ಈ ದಾಳಿ ನಡೆದಿದೆ.ಇದು ನಿರಂತರ ಕೂಡ. ದಾಳಿ ಸಂದರ್ಭದಲ್ಲಿ ಪತ್ತೆಯಾದ ರೌಡಿಗಳ ಜೀವನ ಶೈಲಿ ಪರಿಶೀಲನೆ ಮತ್ತು ರೌಡಿಸಂ ಮುಂದುವರೆಸಿರುವವರ ವಿರುದ್ಧ ಕಾನೂನು ಪ್ರಕ್ರಿಯೆಗಳು ನಡೆಯುತ್ತಿರುತ್ತವೆ.

ದಾಳಿ ಮುಗಿಸಿ ವಿವರ ನೀಡಲು ಪತ್ರಿಕಾ ಘೋಷ್ಟಿ ನಡೆಸಿದ ಸಿಪಿ ಸೀಮಂತವ ಕುಮಾರ್ ಸಿಂಗ್ ಅವರು, ಸಾರ್ವಜನಿಕರ ಭದ್ರತೆ ಮತ್ತು ನಾಗರಿಕರ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ತಮ್ಮ ಬದ್ದತೆಯನ್ನು ಪುನರುಚ್ಚರಿಸಿದ್ದಾರೆ. ಹಿಂದಿನ ಸಿಪಿ ದಯಾನಂದ ಅವರು ಕೂಡ ಇದೇ ಹಾದಿಯಲ್ಲಿ ಬೆಂಗಳೂರು ಮಹಾನಗರದ ಜನತೆಯನ್ನು ರಕ್ಷಿಸುತ್ತಿದ್ದರು. ಅದನ್ನು ಸೀಮಂತ್ ಸಾಹೇಬ್ರು ಮುಂದುವರೆಸುತ್ತಿದ್ದಾರೆ ಎಂಬುದೇ ಖುಷಿಯ ವಿಚಾರ. ಪೊಲೀಸ್ ಮಾತ್ರವಲ್ಲ, ಸಾರ್ವಜನಿಕರು ಕೂಡ ಇಂತಹ ಉತ್ತಮ ಅಧಿಕಾರಿಗೆ ಸಹಕಾರ ನೀಡಬೇಕು. ಹಾಗಾದಾಗ ಮಾತ್ರ ಪೊಲೀಸ್ ಡ್ಯೂಟಿ ಸರಾಗವಾಗಿ ಸಾಗಿ ಸಾರ್ಥಕತೆ ಲಭ್ಯ....

# ಡ್ರಗ್ಸ್ ದಂಧೆಗೆ ಸಹಕರಿಸಿ ಸಸ್ಪೆಂಡ್ ಆದ ಭ್ರಷ್ಟ ಪೊಲೀಸರು ಇವರೇ ನೋಡ್ರಿ!

✍ ಮಹದೇವ್ ಕೆಂಪಯ್ಯ


**ಯಾವಾಗ ಸಿದ್ದರಾಮಯ್ಯ ಮಾಡಿದ ಒಂದೇ ಒಂದು ಯಡವಟ್ಟಿನಿಂದ ದಕ್ಷ ಪೊಲೀಸ್ ಅಧಿಕಾರಿ ದಯಾನಂದರು ಸಸ್ಪೆಂಡ್ ಆಗಿ ಸಿಪಿ ಕಚೇರಿಯಿಂದ ಹೊರಬಿದ್ದರೋ,ಅಲ್ಲಿಂದ ಮತ್ತೆ ಚಿಗಿತುಕೊಂಡರು ಕೆಲ ಖಾಕಿ ಕೂಳರು! ಸಿಟಿಯಲ್ಲಿ ಮತ್ತೆ ಶುರುವಾಯಿತು ಭ್ರಷ್ಟರ ಆರ್ಭಟ... ರೌಡಿಗಳ ಹೇಶಾರವ! ಅಯ್ಯೋ ಬೆಂಗಳೂರನ್ನು ಮತ್ತೆ ಕತ್ತಲೆ ಆವರಿಸಿಕೊಂಡಿತಲ್ಲ.... ನಮ್ಮ ಮಕ್ಕಳು ಮರಿಯ ಭವಿಷ್ಯದ ಗತಿಯೇನು... ಎಂದು ಚಿಂತಿಸುತ್ತಿರುವಾಗಲೇ, ಸಿಎಂ ಸಿದ್ದರಾಮಯ್ಯ, ಮತ್ತೊಬ್ಬ ದಕ್ಷ ಪೊಲೀಸ್ ಅಧಿಕಾರಿ ಸೀಮಂತ್ ಕುಮಾರ್ ಸಿಂಗ್ ಅವರನ್ನ ಪೊಲೀಸ್ ಕಮಿಷನರ್ ಆಗಿ ನೇಮಿಸಿ ಒಳ್ಳೆ ಕೆಲಸವನ್ನೇ ಮಾಡಿಬಿಟ್ರು!**

ಡ್ರಗ್ಸ್!

ಯುವ ಪೀಳಿಗೆಯನ್ನು ಆಪೋಶನಕ್ಕೆ ತೆಗೆದುಕೊಂಡು ಸದ್ದಿಲ್ಲದೇ ಮುಗಿಸುತ್ತಿರುವ ಮಹಾಮಾರಿ! ಹೀಗಾಗಿ, ಡ್ರಗ್ಸ್ ಮುಕ್ತ ಭಾರತವನ್ನಾಗಿ ಮಾಡಲು ನವ ಭಾರತ ನಿರ್ಮಾಣದ ಕನಸು ಕಂಡು ಹೋರಾಡುತ್ತಿದ್ದಾರೆ ಪ್ರಧಾನಿ ಮೋದಿ!ಅದೇ ರೀತಿ ಈ ಬೆಂಗಳೂರನ್ನು ಡ್ರಗ್ಸ್ ಮುಕ್ತ ನಗರವನ್ನಾಗಿ ಮಾಡಲು ಪಣ ತೊಟ್ಟು ಹೋರಾಟ ಮಾಡುತ್ತಿದ್ದಾರೆ, ಪೊಲೀಸ್ ಕಮೀಷನರ್ ಸೀಮಂತ್ ಕುಮಾರ್ ಸಿಂಗ್. ಹಾಗೆ ನೋಡಿದರೆ, ಈ ಕೆಲಸವನ್ನು ಹಿಂದಿನ ಕಮಿಷನರ್ ದಯಾನಂದ್ ಅವರೇ ಶುರು ಮಾಡಿದ್ದರು.


ಕಮೀಷನರ್ ಸೀಮಂತ್‌ಕುಮಾರ್

ಇತ್ತೀಚೆಗೆ ನಿಜವಾದ 'ಪೊಲೀಸಿಂಗ್' ಶುರುವಾಗಿದ್ದೆ ಅವರಿಂದ! ಡಿಸಿಪಿ ಎಸಿಪಿಗಳು, ಅವರ ಕೈ ಬೆಚ್ಚಗೆ ಮಾಡಿ ಬಾಯಿ ಮುಚ್ಚಿಸುತ್ತಿದ್ದ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಚಳಿಜ್ವರ ಕಾಣಿಸಿಕೊಂಡಿದ್ದೆ ದಯಾನಂದರಿಂದ! ಯಾವಾಗ ಸಿದ್ದರಾಮಯ್ಯ ಮಾಡಿದ ಒಂದೇ ಒಂದು ಯಡವಟ್ಟಿನಿಂದ ದಕ್ಷ ಪೊಲೀಸ್ ಅಧಿಕಾರಿ ದಯಾನಂದರು ಸಸ್ಪೆಂಡ್ ಆಗಿ ಸಿಪಿ ಕಚೇರಿಯಿಂದ ಹೊರಬಿದ್ದರೋ,ಅಲ್ಲಿಂದ ಮತ್ತೆ ಚಿಗಿತುಕೊಂಡರು ಕೆಲ ಖಾಕಿ ಕೂಳರು! ಸಿಟಿಯಲ್ಲಿ ಮತ್ತೆ ಶುರುವಾಯಿತು ಭ್ರಷ್ಟರ ಆರ್ಭಟ...ರೌಡಿಗಳ ಹೇಶಾರವ! ಅಯ್ಯೋ ಬೆಂಗಳೂರನ್ನು ಮತ್ತೆ ಕತ್ತಲೆ ಅವರಿಸಿಕೊಂಡಿತಲ್ಲ.... ನಮ್ಮ ಮಕ್ಕಳು ಮರಿಯ ಭವಿಷ್ಯದ ಗತಿಯೇನು... ಎಂದು ಚಿಂತಿಸುತ್ತಿರುವಾಗಲೇ, ಸಿಎಂ ಸಿದ್ದರಾಮಯ್ಯ,ಮತ್ತೊಬ್ಬ ಧಕ್ಷ ಪೊಲೀಸ್ ಅಧಿಕಾರಿ ಸೀಮಂತ್ ಕುಮಾರ್ ಸಿಂಗ್ ಅವರನ್ನ ಪೊಲೀಸ್ ಕಮೀಷನರ್ ಆಗಿ ನೇಮಿಸಿ ಒಳ್ಳೆ ಕೆಲಸವನ್ನೇ ಮಾಡಿಬಿಟ್ರು! (ದಯಾನಂದ ಐಪಿಎಸ್ ಅವರಿಗೆ ಕರ್ನಾಟಕ ರಾಜ್ಯ ಕಾರಾಗೃಹಗಳ ಮಹಾ ಅಧೀಕ್ಷಕರನ್ನಾಗಿ ಪದೋನ್ನತಿ ನೀಡಿ ಸಸ್ಪೆಂಡ್ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಕೂಡ ಮಾಡಿಕೊಂಡ್ರು ಬಿಡ್ರಿ)


ಇನ್ಸ್‌ಪೆಕ್ಟರ್ ಟಿ. ಮಂಜಣ್ಣ

ಸೀಮಂತ್ ಕುಮಾರ್ ಸಿಂಗ್ ಯಾವಾಗ ಸಿಪಿ ಕುರ್ಚಿ ಅಲಂಕರಿಸಿದರೋ, ಬೆಂಗಳೂರು ಸಿಟಿಯಲ್ಲಿ ಮತ್ತೆ ಆಕ್ಟೀವ್ ಆಗಿದ್ದ ಅಂಡರ್ ವರ್ಲ್ಡ್, ಹೊಗೆ ಉಗುಳುತ್ತಿದ್ದ ಡ್ರಗ್ ಪೆಡ್ಲರ್ಸ್ ಎಲ್ಲರ ತೊಳ್ಳೆಯಲ್ಲಿ ನಡುಕ ಶುರುವಾಯ್ತು! ದುರಂತವೇನು ಅಂದ್ರೆ,ಈ ಸಮಾಜ ಘಾತುಕರಿಗೆಲ್ಲ ನಮ್ಮ ಪೊಲೀಸ್ ಅಧಿಕಾರಿಗಳೇ ಗಾಡ್ ಫಾದರ್ ಮದರ್ ಆಗಿ ಹಾಲು - ಆಲ್ಕೋಹಾಲು ಕುಡಿಸಿ ಪೊರೆಯುತ್ತಿದ್ದದ್ದು! ಸೀಮಂತ್ ಕುಮಾರ್ ಸಿಂಗ್ ಅವರು ಮೊದಲು ಯಾರನ್ನೂ ಸರಿ ಮಾಡಬೇಕೋ ಅವರನ್ನೇ ಸರಿ ಮಾಡಲು ನಿರ್ಧರಿಸಿದರು. ಇದರ ಫಲವೇ ಒಂದೇ ವಾರದಲ್ಲಿ 16 ಖಾಕಿ ಭ್ರಷ್ಟರ ಸಸ್ಪೆಂಡ್!

## ಟಿ. ಮಂಜಣ್ಣ ಅಲ್ಲಲ್ಲ, ಕಳ್ ಮಂಜಣ್ಣ ಟೀಮ್!

ಚಾಮರಾಜಪೇಟೆ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಟಿ. ಮಂಜಣ್ಣ, ಹೆಡ್ ಕಾನ್ಸ್‌ಟೇಬಲ್‌ಗಳಾದ ರಮೇಶ್, ಶಿವರಾಜ್, ಕಾನ್ಸ್‌ಟೇಬಲ್‌ಗಳಾದ ಮಧುಸೂದನ್, ಪ್ರಸನ್ನ, ಶಂಕರ್, ಆನಂದ್, ಜೆ.ಜೆ.ನಗರದ ಠಾಣೆಯ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಕುಮಾರ್, ಹೆಡ್ ಕಾನ್ಸ್‌ಟೇಬಲ್‌ಗಳಾದ ಆನಂದ್, ಮಹೇಶ್, ಕಾನ್ಸ್‌ಟೇಬಲ್ ಬಸವನಗೌಡ ಮುಂತಾದವರು ಫಸ್ಟ್ ರೌಂಡ್ ನಲ್ಲಿ ಸಸ್ಪೆಂಡ್ ಆದರು. ಸಸ್ಪೆಂಡ್ ಆಗಲು ಇವರು ಮಾಡಿದ್ದ ಘನಂದಾರಿ ಕೆಲಸವೇನೆಂದರೆ, ಕೆಲ ದಿನಗಳ ಹಿಂದೆ ಆರ್.ಆರ್. ನಗರದ ಪೊಲೀಸರು ಡ್ರಗ್ಸ್ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ನಾಲ್ವರು ಆರೋಪಿಗಳನ್ನು ಬಂಧಿಸಿ ತನಿಖೆ ನಡೆಸಿದ್ದಾರೆ.



ಅವಾಗ ಇದೇ ಡ್ರಗ್ಸ್ ಪೆಡ್ಲರ್‌ಗಳನ್ನಿಟ್ಟುಕೊಂಡು ಚಾಮರಾಜಪೇಟೆ ಕಳ್ ಮಂಜಣ್ಣ ಮತ್ತು ಜೆ.ಜೆ. ನಗರದ ಖತರ್ನಾಕ್ ಎಎಸ್‌ಐ ಕುಮಾರ್ ಟೀಮ್ ಕೊಳ್ಳೆ ಹೊಡೆಯುತ್ತಿದ್ದ ಗುಟ್ಟು ರಟ್ಟಾಗಿದೆ! ತಿಂಗಳಿಗೆ ಐದಾರು ಲಕ್ಷ ರೂ. ಮಂತ್ಲಿ ಪೀಕಿಕೊಂಡು ಸಮಾಜಘಾತುಕರಿಗೆ ಧೂಮ ವಿತರಿಸಲು ಸಹಕರಿಸಿದ್ದರಂತೆ. ಈ ಕಾರ್ಕೋಟಕ ಸತ್ಯ ಗೊತ್ತಾದ ಕೂಡಲೇ ಎಸಿಪಿ ಭರತ್ ರೆಡ್ಡಿ ಅಲರ್ಟ್ ಆಗಿ, ಮಾಹಿತಿಯನ್ನು ಸಿಪಿ ಸಿಂಗ್ ಸಾಹೇಬರಿಗೆ ತಿಳಿಸಿದ್ದಾರೆ. ಅವರು ಡಿಸಿಪಿ ಎಸ್.ಗಿರೀಶ್ ಅವರಿಗೆ ತಿಳಿಸಿ ಡ್ರಗ್ಸ್ ದಂಧೆಕೋರರನ್ನ ಹಾಗೂ ಅವರಿಗೆ ಸಹಕರಿಸುತ್ತಿರೋ ಖಾಕಿ ಕಳ್ಳರನ್ನ ಸದೆ ಬಡಿಯೋ ಯಜ್ಞ ಕಾರ್ಯಕ್ಕೆ ಮುಂದಾಗಿದ್ದಾರೆ. ಡಿಸಿಪಿ ಎಸ್. ಗಿರೀಶ್ ಮೊದಲೇ ಅಗ್ನಿಕುಂಡ! ಅವರು ದರ್ಶನ್ ನಂಥ ಚಾಲೆಂಜಿಂಗ್ ಸ್ಟಾರ್ ಅನ್ನೇ ಬಿಡದೆ ಗುಮ್ಮಿ ಗೂದೆ ಕಡೆಸಿ ಜೈಲಿಗೆ ದಬ್ಬಿದವರು!


ಡಿಸಿಪಿ ಎಸ್. ಗಿರೀಶ್


ಎಸಿಪಿ ಚಂದನ್‌ಕುಮಾರ್


ಎಸಿಪಿ ಭರತ್ ರೆಡ್ಡಿ

ಆರ್ ಆರ್ ನಗರದ ಶೆಡ್ ಅನ್ನು ಜಾಲಾಡಿದ್ದ ಎಸಿಪಿ ಭರತ್ ಹಾಗೂ ದರ್ಶನ್ ನನ್ನು ಮೈಸೂರಿಂದ ಎತ್ಕೊಂಡು ಬಂದು ರುಬ್ಬಿ ಬಾಯಿಬಿಡಿಸಿದ್ದ ಎಸಿಪಿ ಚಂದನ್ ಇಬ್ಬರಿಗೂ ಈ ಡ್ರಗ್ಸ್ ಜಾಲವನ್ನು ಭೇದಿಸುವ ಜವಾಬ್ದಾರಿ ನೀಡಿದ್ದರು! ಎಸಿಪಿ ಭರತ್, ಎಸಿಪಿ ಚಂದನ್ ಚಾಮರಾಜಪೇಟೆ ಹಾಗೂ ಜೆಜೆ ನಗರದತ್ತ 'ಪ್ರವಾಸ' ಹೊರಟು ಆರಾಮ್ ಸೇ ತನಿಖೆ ನಡೆಯಿಸಿದಾಗ, ಡ್ರಗ್ಸ್ ಪೆಡ್ಲರ್ಸ್ ಜೊತೆ ಕೈ ಜೋಡಿಸಿ ದುಡ್ಡು ತಿನ್ನುತ್ತಿದ್ದ ಚಾಮರಾಜಪೇಟೆ ಇನ್ಸ್‌ಪೆಕ್ಟರ್ ಟಿ.ಮಂಜಣ್ಣ ಮತ್ತು ಟೀಮ್, ಜೆಜೆ ನಗರದ ಎಎಸ್‌ಐ ಕುಮಾರ್ ಮತ್ತು ಮಿತ್ರ ವೃಂದ ಸಿಕ್ಕಿ ಬಿದ್ದಿತ್ತು!


ಕಳೆದ ಆಗಸ್ಟ್ 22ರಂದು ಖಾಸಗಿ ಕಾಲೇಜ್ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಸಲ್ಮಾನ್, ನಯಾಜ್ ಉಲ್ಲಾ, ನಯಾಜ್ ಖಾನ್, ಸಲ್ಮಾನ್ ಖಾನ್, ನಯಾಜ್ ಹಾಗೂ ತಾಹೇರ್ ಪಟೇಲ್ ಮುಂತಾದ ಆರು ಮಂದಿ ಅದಾಗಲೇ ಪೊಲೀಸ್ ವಶದಲ್ಲಿದ್ದರಲ್ಲ, ಅವರಿಗೆ ಇನ್ನೊಂದು ರೌಂಡ್ ಬಿರಿಯಾನಿ ಮುಕ್ಕಿಸಿದಾಗ ತಮ್ಮ ಡ್ರಗ್ಸ್ ದಂಧೆಗೆ ಸಹಕಾರ ನೀಡುತ್ತಿದ್ದ ಖಾಕಿಗಳ ಹೆಸರು ಬಾಯಿ ಬಿಟ್ಟಿದ್ರು. ಅವರ ವಿಚಾರಣೆ ನಡೆಸುವಾಗಲೇ ಜಪ್ತಿ ಮಾಡಿ ಇಟ್ಟಿದ್ದ


☞ 15

## ಹಲಸೂರು ಭಜಂತ್ರಿ... ಕೋರಮಂಗಲ ರೆಡ್ಡಿಗಾರು!

ಡ್ರಗ್ಸ್ ದಂಧೆಯ ಬೆಂಗಾವಲಿಗೆ ನಿಂತು ಸಸ್ಪೆಂಡ್ ಆಗಿತಲೆ ಬಿಸಿ ಮಾಡಿಕೊಂಡಿರೋ ಮಂಜಣ್ಣ ಅದೇನು ಕೋರಮಂಗಲದ ಕಡೆಗೆ ಮಸಾಜ್ ಮಾಡಿಸಿಕೊಳ್ಳಲು ಹೋಗಿದ್ದರೋ ಏನೋ! ಅವರ ನೆರಳು ಕೋರಮಂಗಲ ಠಾಣೆ ಮೇಲೆ ಬಿದ್ದಿರಬೇಕು... ಮೂರೇ ಮೂರು ದಿವಸಕ್ಕೆ ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಎಲ್. ರಾಮರೆಡ್ಡಿ ಸಸ್ಪೆಂಡ್ ಆಗಿದ್ದಾರೆ! ಕೋರಮಂಗಲ ವ್ಯಾಪ್ತಿಯಲ್ಲಿರೋ ಕ್ಲಬ್ಬು ಪಬ್ಬು ಡಿಸ್ಕೋತೆಕ್, ಮಸಾಜ್ ಪಾರ್ಲರ್‌ಗಳಿಗೆ ಕಡಿವಾಣ ಹಾಕದೆ, ಮಂತ್ಲಿ ವಸೂಲಿ ಮಾಡಿಕೊಂಡು ಕುಂತಿದ್ದರು ಅನ್ನೋದು ಅವರ ಮೇಲಿರೋ ಆರೋಪ! ಡಿಸಿಪಿ ಸಾ.ರಾ. ಫಾತಿಮಾ ಅವರ ದೂರಿನ ಮೇರೆಗೆ ಸಿಪಿ ಸಿಂಗ್ ಸಾಹೇಬ್ರು ರೆಡ್ಡಿಯನ್ನು ಸಸ್ಪೆಂಡ್ ಮಾಡಿ ಇಲಾಖಾ ವಿಚಾರಣೆಗೆ ಒಳಪಡಿಸಿದ್ದಾರೆ.

ಇನ್ನೂ, ಹಲಸೂರು ಗೇಟ್ ಇನ್ಸ್‌ಪೆಕ್ಟರ್ ಹನುಮಂತ ಭಜಂತ್ರಿ ಕತೆ. ಈ ಪುಣ್ಯಾತ್ಮ ಯಾವನೋ ಸೇಠು ಒಬ್ಬನಿಗೆ ಹೆದರಿಸಿ 10ಲಕ್ಷ ರೂ ವಸೂಲಿ ಮಾಡಿದ್ದು ಆ ಸೇಠು ಸಿಪಿ ಸಾಹೇಬರಿಗೆ ಮಾಹಿತಿ ನೀಡಲಾಗಿ, ಎಸಿಪಿ ರಾಮಚಂದ್ರ ತನಿಖೆ ನಡೆಸಿ ಭಜಂತ್ರಿ ಸಸ್ಪೆಂಡ್ ಆಗಿದೆ! ಕೆಲ ಮೂಲಗಳ ಪ್ರಕಾರ, ಈ ಭಜಂತ್ರಿ ಚಿನ್ನದ ಉದ್ಯಮಿ ಒಬ್ಬರ ಕಚೇರಿ ಮೇಲೆ ದಾಳಿ ಮಾಡಿದ್ದು, ಅಲ್ಲಿ ಎರಡು ಕೋಟಿ ಹವಾಲ ಹಣ ಸಿಕ್ಕಿದ್ದು, ಕೇಸ್ ಹಾಕಿ ಜೈಲಿಗೆ ಕಳಿಸ್ತೇನೆ ಅಂತ ಹೆದರಿಸಿ ಆ ಸೇಠುಯಿಂದ ಒಂದು ಕೋಟಿ ಕಿತ್ತಿದ್ದನಂತೆ! ಆದರೆ,ಕೆಲ ಮಧ್ಯಮಗಳಲ್ಲಿ 10 ಲಕ್ಷ ಲಂಚದ ಆರೋಪ ಪ್ರಕಟವಾಗಿದೆ. ಇರಲಿ, ಭಜಂತ್ರಿ ಮಾಡಿರೋ ಈ ಸಾಹಸಕ್ಕೆ ಎಎಸ್‌ಐ ಪ್ರಸನ್ನ, ಹೆಚ್‌ಸಿ ಶ್ರೀನಿವಾಸ್, ಕಾನ್ಸ್‌ಟೇಬಲ್ ನಾಗರಾಜ್ ಸಾಥ್ ಕೊಟ್ಟಿದ್ದು ಅವರ ತಲೆದಂಡವೂ ಆಗಿದೆ! ☯


ಇನ್ಸ್‌ಪೆಕ್ಟರ್ ಹನುಮಂತ ಭಜಂತ್ರಿ


ಇನ್ಸ್‌ಪೆಕ್ಟರ್ ಎಸ್.ಎಲ್. ರಾಮರೆಡ್ಡಿ



ಕೊಲೆಯಾದ ಅರ್ಬಾಜ್

**ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಹುಡುಗಾಟದ ಹುಡುಗರ ನಡುವೆ ತಮಾಷೆಗಾಗಿ ನಡೆದ ಜಗಳ, ಮಾತಿಗೆ ಮಾತು ಬೆಳೆದು, ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು, ಅವರಲ್ಲಿ ಒಬ್ಬ ಮತ್ತೊಬ್ಬನ ಗಂಟಲಿಗೆ ಕತ್ತರಿಯಿಂದ ತಿವಿದು ರಕ್ತಗಾಯಗೊಳಿಸಿ ಪರಾರಿಯಾಗಿದ್ದ ಆರೋಪಿ ಕೆಲಸಗಾರನನ್ನು ಚಿಂತಾಮಣಿ ನಗರ ಠಾಣೆಯ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**



ಅರ್ಬಾಜ್ ಕೆಲಸ ಮಾಡುತ್ತಿದ್ದ ಹಣ್ಣಿನ ಅಂಗಡಿ



ಈ ಕತ್ತರಿಯಿಂದಲೇ ಗಂಟಲಿಗೆ ಚುಚ್ಚಿ ಸಾಯಿಸಿರುವುದು

# ಚಿಂತಾಮಣಿ: ತಮಾಷೆಗೆ ಶುರುವಾದ ಜಗಳ ಅರ್ಬಾಜ್‌ನ ಬಲಿ ತೆಗೆದುಕೊಂಡಿತೆ...

**ಚಿಕ್ಕಬಳ್ಳಾಪುರ**

✍ ಕೋಲಾರ ಮಂಜು




ಹುಡುಗಾಟದ ಹುಡುಗರು ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ನಗರದ ನಾರಸಿಂಹಪೇಟೆ ಎನ್.ಎನ್.ಟಿ. ರಸ್ತೆಯಲ್ಲಿ ವಾಸವಿರುವ ಜಮಾಲ್ ಷರೀಫ್‌ರವರ ಮಗ ರೇಷ್ಮೆ ಕೂಲಿ ಕೆಲಸ ಮಾಡುವ ನಿಜಾಮುದ್ದೀನ್, ಇವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಶಬೀನ್‌ತಾಜ್ ಈಕೆಗೆ ಇಬ್ಬರು ಮಕ್ಕಳು. ಎರಡನೇ ಹೆಂಡತಿ ಶಾಹೀನ್‌ತಾಜ್ ಇವರಿಗೆ ಅಷಿಯತಾಜ್ ಮತ್ತು ಅರ್ಬಾಜ್ (24) ಎಂಬ ಇಬ್ಬರು ಮಕ್ಕಳಿರುತ್ತಾರೆ. ದೊಡ್ಡ ಮಗಳು ಅಷಿಯತಾಜ್‌ಗೆ ಮದುವೆಯಾಗಿದ್ದು, ಶಿಡ್ಲಘಟ್ಟದ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ಎರಡನೇ ಮಗ ಅರ್ಬಾಜ್ ತಂದೆ ಜೊತೆ ರೇಷ್ಮೆ ನೂಲು ತೆಗೆಯುವ ಜಾಗದಲ್ಲಿ ಕೆಲಸಕ್ಕೆ ಹೋಗುತ್ತಿದ್ದು, ಕಳೆದ ಆರು ತಿಂಗಳ ಹಿಂದೆ ರೇಷ್ಮೆ ಕೂಲಿ ಕೆಲಸ ಬಿಟ್ಟು ಚಿಂತಾಮಣಿ ನಗರದ ಸರ್ಕಾರಿ ಆಸ್ಪತ್ರೆ ಮುಂಭಾಗ ಇರುವ ರಿಜಾಜ್‌ರವರ ಮಗ ವಸೀಂ ಪಾಷರವರ ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ಮಗ ಅರ್ಬಾಜ್‌ಗೆ ಹಣ್ಣಿನ ಅಂಗಡಿಯಿಂದ ಬರುತ್ತಿದ್ದ ಸಂಬಳವನ್ನು ತಂದೆ ಕೈಗೆ ಕೊಟ್ಟುಬಿಡುತ್ತಿದ್ದನು. ನಿಜಾಮುದ್ದೀನ್ ತಾನು ಮಾಡುತ್ತಿದ್ದ ಕೂಲಿ ಕೆಲಸದ ಹಣದ ಜೊತೆಗೆ ಮಗ ಕೊಡುತ್ತಿದ್ದ ಹಣದಿಂದ ಹೆಂಡತಿ, ಮಕ್ಕಳೊಂದಿಗೆ ಸುಖವಾಗಿ ಜೀವನ ಸಾಗಿಸಿಕೊಂಡು ಹೋಗುತ್ತಿದ್ದನು.

ಚಿಂತಾಮಣಿ ತಾಲ್ಲೂಕಿನ ಚಿನ್ನಸಂದ್ರ ಗ್ರಾಮದ ವಾಸಿ ಲೇಟ್ ಅಜೀಂಸಾಬ್ ಅಲಿಯಾಸ್ ಖಾಸಿಂಸಾಬ್‌ರವರ ಮಗ ಹಣ್ಣಿನ ವ್ಯಾಪಾರಿ ಅಲ್ಲಾಭಕಾಶ್ ಇವರು ಈಗ ನಗರದ ಟ್ಯಾಂಕ್ ಬಂಡ್ ರಸ್ತೆಯಲ್ಲಿ ವಾಸವಾಗಿರುತ್ತಾರೆ. ಇವರ ಮಗ ಫಹಾದ್ (22) ನಿಜಾಮುದ್ದೀನ್‌ರವರ ಮಗ ಅರ್ಬಾಜ್‌ರವರು ಕೆಲಸ ಮಾಡುತ್ತಿದ್ದ ಅಂಗಡಿ ಪಕ್ಕದಲ್ಲಿನ ಸಾದಿಕ್‌ಪಾಷ ಎನ್ನುವವರಿಗೆ ಸೇರಿದ ಹಣ್ಣಿನ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. ಇಬ್ಬರು ಹುಡುಗರು ಅಕ್ಕಪಕ್ಕದ ಅಂಗಡಿಗಳಲ್ಲಿ ಕೆಲಸ ಮಾಡುತ್ತಾ ಇರುವಾಗ ಪರಿಚಯವಾಗಿ ದಿನಗಳು ಕಳೆದಂತೆ ಇಬ್ಬರು ದೋಸ್ತಿಗಳಾಗಿದ್ದರು. ಅಂಗಡಿಗಳಲ್ಲಿ ಕಸ್ಟಮರ್ಸ್ ಇಲ್ಲದಿರುವಾಗ ಇಬ್ಬರು ಒಂದು ಅಂಗಡಿಯಲ್ಲಿ ಸೇರಿ ಮಾತನಾಡುವುದು, ಜೋಕ್ ಮಾಡುವುದು, ಕೀಟಲೆ ಮಾಡುವುದು, ತಮಾಷೆಗಾಗಿ ಪರಸ್ಪರ ಚಿವುಟುವುದು, ತಲೆ ಮೇಲೆ ಹೊಡೆಯುವುದು, ರಾತ್ರಿ ಅಂಗಡಿಯಿಂದ ಮನೆಗೆ ಹೋಗುವಾಗ ಚಿವುಟುವ ನೆಪದಲ್ಲಿ ಇಬ್ಬರು ಕಿತ್ತಾಡಿಕೊಂಡು ಮತ್ತೆ ಸ್ವಲ್ಪ ಹೊತ್ತಿಗೆ ಒಂದಾಗಿ ಚಬ್ಬಿ ಹೋಟೆಲ್‌ನಲ್ಲಿ ಟೀ ಕುಡಿದುಕೊಂಡು ನಾಳೆ ಬೆಳಿಗ್ಗೆ ಬೇಗ ಅಂಗಡಿಗೆ ಬಂದು ಬಿಡು ನಾನು ಬೇಗ ಬರುತ್ತೇನೆ ಹಾಯ್, ಬಾಯ್ ಎಂದು ಹೇಳಿ ಮನೆ ಕಡೆಗೆ ಹೋಗುತ್ತಿದ್ದ ಇಂತಹ ಹುಡುಗಾಟದ ಹುಡುಗರ ನಡುವೆ ತಮಾಷೆಗಾಗಿ ನಡೆಯಬಾರದ ಘಟನೆಯೊಂದು ನಡೆದು ಹೋಯಿತು.



ಎಸ್ಪಿ ಕುಶಾಲ್ ಚೌಕ್ಸೆ



ಡಿವೈಎಸ್ಪಿ ಮುರುಳೀಧರ



ಪಿಐ ವಿಜಯ್‌ಕುಮಾರ್



ಆರೋಪಿ ಪಹಾದ್

### ಅರ್ಬಾಜ್ ಕೊಲೆ ಬಗ್ಗೆ ದೂರು


ಚಿಂತಾಮಣಿ ನಗರದ ನಾರಸಿಂಹಪೇಟೆಯ ವಾಸಿ ರೇಷ್ಮೆ ಕೂಲಿ ಕೆಲಸ ಮಾಡುವ ನಿಜಾಮುದ್ದೀನ್ (55) ರವರು ಸೆಪ್ಟೆಂಬರ್ 9ರಂದು ರಾತ್ರಿ 11 ಗಂಟೆಗೆ ನಗರ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ಮಗ ಅರ್ಬಾಜ್ (24)ರವರು ಕಳೆದ ಆರು ತಿಂಗಳಿಂದ ನಗರದ ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿನ ವಸೀಂಪಾಷ ಎನ್ನುವವರಿಗೆ ಸೇರಿದ ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದನು. ಈ ದಿನ ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ರೇಷ್ಮೆ ಕೂಲಿ ಕೆಲಸ ಆಡಿಕೊಂಡು ಮನೆಗೆ ಹೋಗುವ ಮುನ್ನ ಟೀ ಕುಡಿಯಲು ಚಬ್ಬಿ ಹೋಟೆಲ್ ಬಳಿ ಇದ್ದಾಗ ಹಣ್ಣಿನ ಅಂಗಡಿ ಮಾಲೀಕ ವಸೀಂಪಾಷರವರು ನನಗೆ ಫೋನ್ ಮಾಡಿ ಅರ್ಜೆಂಟಾಗಿ ನಮ್ಮ ಹಣ್ಣುಗಳ ಅಂಗಡಿ ಬಳಿಗೆ ಬರುವಂತೆ ತಿಳಿಸುತ್ತಾರೆ. ತಕ್ಷಣ ನಾನು ಅಲ್ಲಿಗೆ ಹೋದಾಗ ನನ್ನ ಮಗ ಅರ್ಬಾಜ್‌ನನ್ನು ಆಂಬುಲೆನ್ಸ್‌ನಲ್ಲಿ ಹಾಕಿಕೊಂಡು ಕೋಲಾರಕ್ಕೆ ಹೋಗುತ್ತಿದ್ದರು. ಆಗ ನನ್ನನ್ನು ವಸೀಂಪಾಷರವರು ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಕೋಲಾರಕ್ಕೆ ಹೋದಾಗ ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಯ ಬಳಿ ನನ್ನ ಮಗನನ್ನು ನೋಡಿದಾಗ ನನ್ನ ಮಗನಿಗೆ ಕತ್ತಿನ ಗಂಟಲು ಭಾಗದಲ್ಲಿ ರಕ್ತಗಾಯವಾಗಿದ್ದು ಆಸ್ಪತ್ರೆಯ ವೈದ್ಯಾಧಿಕಾರಿಗಳು ನನ್ನ ಮಗನನ್ನು ಪರೀಕ್ಷಿಸಿ ಚಿಂತಾಮಣಿಯಿಂದ ಕೋಲಾರಕ್ಕೆ ಬರುವ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ನನ್ನ ಮಗನ ಸಾವಿನ ಬಗ್ಗೆ ವಿಚಾರ ಮಾಡಲಾಗಿ ಸೆಪ್ಟೆಂಬರ್ 9ರಂದು ಸಂಜೆ ಸುಮಾರು 4.45 ಗಂಟೆಯ ಸಮಯದಲ್ಲಿ ನನ್ನ ಮಗ ಅರ್ಬಾಜ್ ಹಾಗೂ ನನ್ನ ಮಗ ಕೆಲಸ ಮಾಡುವ ಅಂಗಡಿಯ ಪಕ್ಕದ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಪಹಾದ್ ನಡುವೆ ತಮಾಷೆಗಾಗಿ ಬೈದಾಡಿಕೊಂಡ ವಿಚಾರಕ್ಕೆ ಗಲಾಟೆ ನಡೆದಿದ್ದು, ಈ ಸಮಯದಲ್ಲಿ ನನ್ನ ಮಗ ಅರ್ಬಾಜ್‌ನನ್ನು ಪಹಾದ್ ಎಂಬುವವನು ಕೊಲೆ ಮಾಡುವ ಉದ್ದೇಶದಿಂದ ಚೂಪಾದ ಕತ್ತರಿಯಿಂದ ಕುತ್ತಿಗೆಯ ಭಾಗದ ಗಂಟಲಿಗೆ ಚುಚ್ಚಿ ತೀವ್ರತರದ ರಕ್ತಗಾಯವನ್ನು ಉಂಟುಮಾಡಿರುತ್ತಾನೆ. ಜ್ಞಾನ ತಪ್ಪಿ ನೆಲದ ಮೇಲೆ ಬಿದ್ದಿದ್ದ ನನ್ನ ಮಗನನ್ನು ಹಣ್ಣಿನ ಅಂಗಡಿ ಮಾಲೀಕ ವಸೀಂಪಾಷ ಮತ್ತು ಇತರರು ಸೇರಿಕೊಂಡು ಮೊದಲಿಗೆ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ್ದು, ನಂತರ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರಕ್ಕೆ ಕರೆದುಕೊಂಡು ಹೋಗುವಂತೆ ತಿಳಿಸಿದಾಗ ಆಂಬುಲೆನ್ಸ್ ವಾಹನದಲ್ಲಿ ನನ್ನ ಮಗ ಅರ್ಬಾಜ್‌ನನ್ನು ಕೋಲಾರಕ್ಕೆ ಕರೆದುಕೊಂಡು ಬಂದಿರುವುದಾಗಿ ನನ್ನ ಮಗನ ಮೃತದೇಹವನ್ನು ಎಸ್‌ಎನ್‌ಆರ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿದ್ದು, ನಂತರ ನಾನು ವಾಪಸ್ಸು ಬಂದು ನನ್ನ ಮಗ ಅರ್ಬಾಜ್‌ನನ್ನು ಯಾವುದೋ ಉದ್ದೇಶದಿಂದ ಕೊಲೆ ಮಾಡಿ ಪರಾರಿಯಾಗಿರುವ ಪಹಾದ್‌ನ ಮೇಲೆ ಕಾನೂನುರೀತ್ಯ ಕ್ರಮ ಜರುಗಿಸಲು ಕೋರಿರುವ ದೂರಿನ ಮೇರೆಗೆ ಠಾಣೆಯ ಮೊ.ಸಂ. 174/2025 ಕಲಂ 103(1) ಬಿಎನ್‌ಎಸ್ 2023ರಂತೆ ಪ್ರಕರಣವನ್ನು ಠಾಣಾಧಿಕಾರಿಗಳು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದರು.

ಕೊಲೆ ಪ್ರಕರಣದ ಬಗ್ಗೆ ವಿಷಯ ತಿಳಿಯುತ್ತಲೇ ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ಜಗನ್ನಾಥ್ ರೈ, ಡಿವೈಎಸ್ಪಿ ಮುರುಳೀಧರ್, ಪಿಐ ವಿಜಯಕುಮಾರ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ ನಂತರ ಪಂಚರಾದ ಸಾದಿಕ್ ಪಾಷ ಮತ್ತು ದಾದಾಪೀರ್‌ರವರನ್ನು ಬರ ಮಾಡಿಕೊಂಡು ಪ್ರತ್ಯಕ್ಷ ಸಾಕ್ಷಿ ಹಣ್ಣಿನ ಅಂಗಡಿ ಮಾಲೀಕ ವಸೀಂಪಾಷರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ನಡೆಸಲಾಯಿತು. ಕೋಲಾರ ನಗರದ ಎಸ್‌ಎನ್‌ಆರ್ ಆಸ್ಪತ್ರೆಯ ಶವಾಗಾರದಲ್ಲಿದ್ದ ಅರ್ಬಾಜ್‌ನ ಮೃತದೇಹದ ಪರೀಕ್ಷೆಯನ್ನು ಮರುದಿನ ಮಧ್ಯಾಹ್ನ ವಾರಸುದಾರರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ಅರ್ಬಾಜ್‌ನನ್ನು ಕೊಲೆ ಮಾಡಿ ತಲೆಮರೆಸಿಕೊಂಡಿರುವ ಆರೋಪಿ ಪಹಾದ್‌ನನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳಲು ಎಸ್ಪಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಮುರುಳೀಧರ್‌ರವರ ಮಾರ್ಗದರ್ಶನದಲ್ಲಿ ನಗರ ಠಾಣೆಯ ಪಿಐ ವಿಜಯಕುಮಾರ್‌ರವರ ನೇತೃತ್ವದಲ್ಲಿ ತನಿಖಾ ಸಹಾಯಕರಾದ ಎಎಸ್ಪಿ ಶಂಕರ್‌ಗೌಡ, ಪೊಲೀಸ್ ಕಾನ್‌ಸ್ಟೇಬಲ್‌ಗಳಾದ ಅಂಬರೀಶ್, ಲೋಕೇಶ್, ಶ್ರೀನಿವಾಸಮೂರ್ತಿ, ಅನಿಲ್‌ಕುಮಾರ್, ಸಿದ್ದರೂಡ ಮುಂತಾದವರ ತಂಡವನ್ನು ರಚಿಸಲಾಗಿದ್ದು ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಸೆಪ್ಟೆಂಬರ್ 10ರಂದು ಬೆಳಗಿನ ಜಾವ 1.45 ಗಂಟೆಯಲ್ಲಿ ಆರೋಪಿ ಪಹಾದ್ (22)ನನ್ನು ಚಿಂತಾಮಣಿ ನಗರದ ಬಾಗೇಪಲ್ಲಿ ಕ್ರಾಸ್ ಬಳಿ ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ನಾನು ಅರ್ಬಾಜ್ ಅಕ್ಕ ಪಕ್ಕದ ಹಣ್ಣಿ ಅಂಗಡಿಗಳಲ್ಲಿ ಕೆಲಸ ಮಾಡುತ್ತಾ ಒಳ್ಳೆಯ ದೋಸ್ತುಗಳಾಗಿದ್ದೆವು. ನಾನು ಅವನು ಎಷ್ಟೋ ಸಾರಿ ಕಿಚಾಯಿಸಿಕೊಂಡು ಜಗಳವಾಡಿ ಮತ್ತು ಸ್ವಲ್ಪ ಹೊತ್ತಿಗೆ ಒಂದಾಗಿ ಟೀ ಕುಡಿಯಲು ಹೋಗಿ ಬರುತ್ತಿದ್ದೆವು.



ಗಂಟಲಲ್ಲಿ ಕತ್ತರಿ ಇಳಿದಿರುವುದು

ಸೆಪ್ಟೆಂಬರ್ 9ರಂದು ಸಂಜೆ 4.45ರ ಸಮಯದಲ್ಲಿ ಯಾವುದೋ ವಿಷಯಕ್ಕೆ ನಾವಿಬ್ಬರು ಬೈದಾಡಿಕೊಂಡಿದ್ದೆವು. ತಮಾಷೆಗಾಗಿ ನಾನು ಕೊಳೆತಿರುವ ಹಣ್ಣನ್ನು ತೆಗೆದುಕೊಂಡು ಅವನ ಬಳಿಗೆ ಬಿಸಾಡಿದರೆ ಅವನೂ ಸಹ ವೇಸ್ಟ್ ಆಗಿ ಕಸದ ಬುಟ್ಟಿಗೆ ಹಾಕಿದ್ದ ಹಣ್ಣನ್ನು ತೆಗೆದು ನನ್ನ ಕಡೆ ಬೀಸಾಡುತ್ತಿದ್ದನು. ಇಬ್ಬರ ನಡುವೆ ಈ ವಿಷಯಕ್ಕೆ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು ಅವನು ತೂಕದ ಬಟ್ಟಿನಿಂದ ಹೊಡೆಯಲು ಬಂದನು. ಆಗ ನಾನು ದ್ರಾಕ್ಷಿ ಗೊಂಚಲನ್ನು ಕತ್ತರಿಸಲು ಇಟ್ಟಿದ್ದ ಕತ್ತರಿಯನ್ನು ತೆಗೆದುಕೊಂಡು ಅವನ ಕತ್ತಿನ ಕೆಳಭಾಗದ ಗಂಟಲಿಗೆ ತಿವಿದು ರಕ್ತಗಾಯಗೊಳಿಸಿದ್ದೆನು. ಅರ್ಬಾಜ್ ನೆಲದ ಮೇಲೆ ಬಿದ್ದು ಒದ್ದಾಡುತ್ತಿದ್ದರಿಂದ ಭಯವಾಗಿ ಅಲ್ಲಿಂದ ಪರಾರಿಯಾಗಿ ಮನೆಗೆ ಹೋಗಿ ವಿಷಯವನ್ನು ತಿಳಿಸಿದ್ದೆನು. ನಂತರ ರಾತ್ರಿ ಅಲ್ಲಿಂದ ಬೆಂಗಳೂರಿಗೆ ಹೋಗಿ ತಲೆಮರೆಸಿಕೊಳ್ಳಲು ಪ್ಲಾನ್ ಮಾಡಿಕೊಂಡು ಬಾಗೇಪಲ್ಲಿ ಕ್ರಾಸ್ ಬಳಿ ಬಸ್ಸಿಗಾಗಿ ಕಾದಿದ್ದಾಗ ನಿಮ್ಮಗಳ ಕೈಗೆ ಸಿಕ್ಕಿಹಾಕಿಕೊಂಡ ಬಗ್ಗೆ ಹೇಳಿದರು. ಕೊಲೆ ಆರೋಪಿ ಪಹಾದ್‌ನನ್ನು ಕೃತ್ಯ ನಡೆದಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಶೀಲಿಸಿದ ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹುಡುಗಾಟದ ಹುಡುಗರ ನಡುವೆ ತಮಾಷೆಗಾಗಿ ನಡೆದ ಜಗಳದಲ್ಲಿ ಒಬ್ಬ ಕೊಲೆಯಾಗಿ ಮಸಣ ಸೇರಿದರೆ ಮತ್ತೊಬ್ಬ ಜೈಲು ಸೇರುವಂತಾಯಿತು.



ತನಿಖಾ ಸಹಾಯಕ ಶಂಕರ್ ಗೌಡ, ಪಿಸಿಗಳಾದ ಶ್ರೀನಿವಾಸಮೂರ್ತಿ, ಲೋಕೇಶ್, ಅಂಬರೀಶ್



ಹಣ್ಣಿನ ಅಂಗಡಿ ಮಾಲೀಕ ವಸೀಂಪಾಷಾರನ್ನು ವಿಚಾರಣೆ ಮಾಡುತ್ತಿರುವ ಪೊಲೀಸರು



ಕೃತ್ಯ ನಡೆದ ಸ್ಥಳವನ್ನು ತೋರಿಸುತ್ತಿರುವ ಆರೋಪಿ ಪಹಾದ್



ಸ್ಥಳದ ಮಹಜರ್ ನಡೆಸುತ್ತಿರುವ ಪೊಲೀಸರು



ಸರ್ಕಾರಿ ಆಸ್ಪತ್ರೆ ಮುಂದೆ ಇರುವ ಹಣ್ಣಿನ ಅಂಗಡಿಗಳ ಸಾಲು



# ಮುಧೋಳದಲ್ಲಿ ಗಾಂಜಾ ಮಾರಾಟ ! 26 ಕೆ ಜಿ ಗಾಂಜಾವಶ ಇಬ್ಬರ ಬಂಧನ !!

**ಬಾಗಲಕೋಟೆ**

✍ ಮಂಜುನಾಥ ಈ. ಕರೋಳಿ


ಇತ್ತಿಚಿನ ದಿನಗಳಲ್ಲಿ ಗಾಂಜಾ, ಕೊಕ್ ಡ್ರಗ್ಸ್ ಅಂತ ಮಹಾಮಾರಿ ಚಟಗಳಲ್ಲಿ ಯುವಪಿಳಿಗೆ ನಾಶವಾಗುತ್ತಿದ್ದು, ಅವರಿಂದ ಅದೆಷ್ಟೊ ಕುಟುಂಬಗಳು ಬಲಿಯಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ ಅದರಲ್ಲೂ ಈ ಗಾಂಜಾ ಎಂಬ ಸಸ್ಯವನ್ನ ಹಿಂದಿನ ಕಾಲದಿಂದಲೂ ಋಷಿಮುನಿಗಳು ಸಿದ್ದಿಪುರುಷರು ಬಳಸುತ್ತಿದ್ದರಂತೆ ಇದು ಅಮಲೇರಿಸುವ ಪದಾರ್ಥ ಇದರಿಂದ ಮನುಷ್ಯನಿಗೆ ತುಂಬಾ ಮಾರಕವಾಗಿ ಪರಿಣಮಿಸುವುದಂತೂ ಕಟ್ಟಿಟ್ಟ ಬುತ್ತಿ ವೆದ್ಯಕೀಯ ಭಾಷೆಯಲ್ಲಿ ಹೇಳಬೇಕಾದರೆ ಇದೊಂದು ಮನುಷ್ಯನನ್ನು ಬೇರೊಂದು ಲೋಕಾವಸ್ಥೆಯಲ್ಲಿ ಎಳೆದೊಯ್ದು ಹುಚ್ಚನಂತೆ ವರ್ತಿಸುತ್ತದೆ. ಇದರಿಂದ ಯುವ ಪಿಳಿಗೆಯಂತು ಕೇಳಲೇಬೇಡಿ ದಿನ ಬೆಳಗಾದರೆ ಸಾಕು ಮಾದ್ಯಮಗಳಲ್ಲಿ ದಿನಕ್ಕೊಂದು ಸುದ್ದಿ ಆದರೆ ಈ ಗಾಂಜಾ ಜಾಲವನ್ನು ಮಟ್ಟ ಹಾಕಿದರೇ ಮಾತ್ರ ಸಾಧ್ಯ ಕೆಲವರು ದಿಢೀರನೇ ಶ್ರೀಮಂತರಾಗುವ ಸಲುವಾಗಿ ಇಂತ ಕೆಲಸಗಳಿಗೆ ಕೈಗೂಡಿಸಿಕೊಂಡು ಕೋನಿಗೆ ಪೊಲೀಸರ ಅತಿಥಿಯಾಗುವದಂತೂ ಖಚಿತ ಅದೇ ರೀತಿಯಲ್ಲಿ ಇಲ್ಲೊಬ್ಬರಲ್ಲ ಇಬ್ಬರೂ ವೃದ್ದ ವಯಸ್ಕರು ಗಾಂಜಾ ಮಾರುವ ಸಲುವಾಗಿ ಹೋಗಿ ಈಗ ಪೊಲೀಸರ ಅತಿಥಿಯಾದ ಘಟನೆ ಬಾಗಲಕೋಟೆ ಜಿಲ್ಲೆ ಮುದೊಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಂಧಿತ ಆರೋಪಿಗಳಾದ ಯಮನಪ್ಪ, ಪರಮಾನಂದ ಹಾಗೂ ವಶಪಡಿಸಿಕೊಂಡಿರುವ ಗಾಂಜಾದೊಂದಿಗೆ ತನಿಖಾ ತಂಡದವರು



ಎಸ್ಪಿ ಸಿದ್ದಾರ್ಥ ಗೋಯಲ್



ಡಿವೈಎಸ್ಪಿ ರೋಷನ್ ಜಮೀರ್

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಜಮಖಂಡಿ ಬೈಪಾಸ್ ರಸ್ತೆಗೆ ಹೊಂದಿಕೊಂಡಂತೆ ಪಕ್ಕದಲ್ಲಿರುವ ಒಬ್ಬ ವ್ಯಕ್ತಿ ಗಾಂಜಾ ಮಾದಕ ಪದಾರ್ಥವನ್ನು ಮಾರಾಟ ಮಾಡುತ್ತಿದ್ದಾನೆ ಅಂತ ನಿಖರವಾದ ಮಾಹಿತಿಮೇರೆಗೆ ದಿನಂಕ 15/09/2025 ರಂದು ಬಾಗಲಕೋಟ ಎಸ್.ಪಿ.ಸಿದ್ದಾರ್ಥ ಗೊಯಲ್ ಹೆಚ್ಚುವರಿ ಎಸ್.ಪಿ ಮಹಾಂತೇಶ ಜಿದ್ದಿ, ಜಮಖಂಡಿ ಡಿವೈಎಸ್ಪಿ ಜಿ.ಎಚ್, ಭೊಜಣ್ಣವರ (ಪ್ರಭಾರ) ಮುಧೋಳ ಸಿಪಿಐ ಎಮ್.ಎನ್. ಶಿರಹಟ್ಟಿರವರ ಮಾರ್ಗದರ್ಶನ ಮೇರೆಗೆ ಮುಧೋಳ ಪಿಎಸ್‌ಐ ಅಜಿತ ಕುಮಾರ ಹೊಸಮನಿ ಸಿಬ್ಬಂದಿ ಜನರೊಂದಿಗೆದಾಳಿ ನಡೆಸಿದ್ದು ಹಾಜಾ ಮಾರುತ್ತಿದ್ದ ಯಮನಪ್ಪ ಲಕ್ಷ್ಮಣ ಜೋಗಿ ವಯಾ(55) ಸಾ||ಬುದ್ನಿ ಮುಧೋಳ ತಾಲ್ಲೂಕು ಇವನ್ನು ಸ್ವಂತ ಲಾಭಕ್ಕಾಗಿ ಅನಧಿಕೃತವಾಗಿ ಸುಮಾರು 300/- ಸಾವಿರ ಕಿಮ್ಮತ್ತಿನ 237 ಗ್ರಾಂ ತೂಕದ ಗಾಂಜಾ ಮಾರಾಟ ಮಾಡುತ್ತಿದ್ದು ಕೂಡಲ್ಲೆ ಆತನನ್ನು ವಶಕ್ಕೆ ಪಡೆದು ಸಿಕ್ಕ ಗಾಂಜಾ ವಸ್ತುವನ್ನು ವಶಪಡೆಸಿಕೊಂಡು ಸದರಿ ಆರೋಪಿತನಾದ ಯಮನಪ್ಪ ಲಕ್ಷ್ಮಣ ಜೋಗಿ ಈತನ ಮೇಲೆ ತಮ್ಮ ಠಾಣಾ ಕ್ರೈಂ ನಂ. /266/2025 ಕಲಂ(ಬಿ) ಎನ್‌ಡಿಪಿಎಸ್ ಆಕ್ಟ್ 1985 ನೆದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ

### ಮತ್ತೊಬ್ಬ ಗಾಂಜಾ ಮರಾಟ ಮಾಡುತ್ತಿದ್ದ ವ್ಯಕ್ತಿ ಸೆರೆ !

ಬಾಗಲಕೋಟ ಜಿಲ್ಲೆಯ ಮುಧೊಳ ತಾಲೂಕಿನ ಗ್ರಾಮದಲ್ಲಿ ವ್ಯಕ್ತಿಯೋರ್ವ ಗಾಂಜಾ ಮಾರಾಟ ಮಾಡುವ ಖಚಿತ ಮಾಹಿತಿ ಮೇರೆಗೆ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದು ಮಾರಾಟ ಮಾಡುವ ಉದ್ದೇಶದಿಂದ ಅದನ್ನು ಕಿತ್ತು ಮಾರಾಟಕ್ಕೆ ಸಾಗಿಸುತಿದ್ದಾಗ ವಜ್ರಮಟ್ಟಿ ಗ್ರಾಮದ ಅಡಿವೆಪ್ಪ ಕುರಿ ಎಂಬ ವ್ಯಕ್ತಿ 26 ಕೆ.ಜಿ ತೂಕದ ಸುಮಾರು 2 ಲಕ್ಷ 60 ಸಾವಿರ ಬೆಲೆ ಬಾಳುವ ಹಸಿ ಗಾಂಜಾ ಗಿಡಗಳನ್ನು ವಶಪಸಿಕೊಂಡು ಆತನ ಮೇಲೆ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿಕೊಂಡಿದ್ದಾರೆ

ಈ ಸದರಿ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಕಾರ್ಯನಿರ್ವಹಿಸಿದ ಮುಧೋಳ ಪಿಎಸ್‌ಐ ಅಜಿತ ಕುಮಾರ ಹೊಸಮನಿ ಮತ್ತು ಸಿಬ್ಬಂದಿಯವರಾದ ಪಿ.ಕೆ. ಬಳಿಗಾರ, ಎ.ಎಸ್. ಖಾನಾಪೂರ, ಎಮ್.ಎಸ್. ಕೂಡಗಿ, ಎಮ್.ಬಿ. ದಲವಾಯಿ, ಎಮ್.ಸಿ. ಕೂಡಗಿ, ಎಸ್.ಬಿ. ಕಡಪಟ್ಟಿ ಇವರಿಗೆಲ್ಲ ಬಾಗಲಕೋಟ ಜಿಲ್ಲಾವರಿಷ್ಠಾಧಿಗಳಾದ ಸಿದ್ದಾರ್ಥ ಗೊಯಲ್‌ರವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ



ಸಿಪಿಐ ಎಂ.ಎನ್. ಶಿರಹಟ್ಟಿ



ಪಿಎಸ್‌ಐ ಅಜಿತ್‌ಕುಮಾರ್ ಹೊಸಮನಿ

**ಭಾರತ ಮತ್ತು ಪಾಕಿಸ್ತಾನ ತಂಡಗಳು ಅದೆಷ್ಟೋ ಬಾರಿ ಮುಖಾಮುಖಿಯಾಗಿವೆ. ಆದರೆ ಪಾಕಿಸ್ತಾನ ತಂಡಕ್ಕೆ ಇಂತಹ ಮುಖಭಂಗ ಯಾವತ್ತೂ ಆಗಿರಲಿಲ್ಲ. ಪಹಲ್ಗಾಮ್ ಉಗ್ರ ದಾಳಿಗೆ ಪ್ರತಿಯಾಗಿ ಭಾರತ ತಂಡ ಪಾಕಿಸ್ತಾನವನ್ನು ಎಲ್ಲಿಡಬೇಕೋ ಅಲ್ಲಿಟ್ಟಿದೆ. ಔಪಚಾರಿಕವಾಗಿ ಹಸ್ತಲಾಘವ ಮಾಡದೆ ತನ್ನ ಅಸಮಾಮಾಧಾನವನ್ನು ಬಹಿರಂಗಗೊಳಿಸಿದೆ. ಇದರಿಂದ ಅವಮಾನಕ್ಕೀಡಾದ ಪಾಕಿಸ್ತಾನ ತಂಡದ ಮ್ಯಾನೇಜ್‌ಮೆಂಟ್ ಕೊನೆಗೆ ಏನು ಮಾಡಬೇಕೆಂದು ತಿಳಿಯದೆ ತಂಡದ ನಾಯಕ ಸಲ್ಮಾನ್ ಆಘಾ ಅವರನ್ನು ಬಹುಮಾನ ವಿತರಣೆ ಸಮಾರಂಭಕ್ಕೆ ಕಳುಹಿಸಲಿಲ್ಲ!**

# ಪಂದ್ಯ ಗೆದ್ದ ಟೀಮ್ ಇಂಡಿಯಾ
# ಹಸ್ತಲಾಘವ ನೀಡದೆ ಪಾಕ್‌ಗೆ ಎತ್ತಿತ್ತು ಜಾಕ್!

✍ ಮಹದೇವ್ ಕೆಂಪಯ್ಯ

ಪಹಲ್ಗಾವ್ ಉಗ್ರ ದಾಳಿಯುನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ತಂಡ ಭಾನುವಾರ ಪಾಕಿಸ್ತಾನದ ಆಟಗಾರರೊಂದಿಗೆ ಹಸ್ತಲಾಘವ ಮಾಡದೇ ಇದ್ದಿದ್ದು ಪಾಕಿಸ್ತಾನಕ್ಕೆ ಸಂಪೂರ್ಣ ಮುಜುಗರಕ್ಕೆ ಕಾರಣವಾಗಿದೆ. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ತಂಡದ ಮ್ಯಾನೇಜ್‌ಮೆಂಟ್ ನಾಯಕ ಸಲ್ಮಾನ್ ಆಘಾ ಅವರನ್ನು ಪಂದ್ಯದ ಬಳಿಕ ನಡೆದ ಬಹುಮಾನ ವಿತರಣೆ ಸಮಾರಂಭಕ್ಕೆ ಕಳುಹಿಸದೆ ಅಸಮಾಧಾನ ಹೊರಹಾಕಿದೆ.




ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಎ ಬಣದ ಪಂದ್ಯದುದ್ದಕ್ಕೂ ಭಾರತ ನಾಯಕ ಸೂರ್ಯಕುಮಾರ್ ಯಾದವ್ ಆಗಲಿ, ಇತರ ಆಟಗಾರರಾಗಲಿ ಪಾಕಿಸ್ತಾನ ತಂಡದ ಆಟಗಾರರ ತಂಟೆಗೆ ಹೋಗಲಿಲ್ಲ, ಹಸ್ತ ಲಾಘವ ಮಾಡಲಿಲ್ಲ, ಮಾತೂ ಆಡಲಿಲ್ಲ, ಮುಖವನ್ನೂ ನೋಡಲಿಲ್ಲ, ಟಾಸ್ ನಿಂದ ಹಿಡಿದು ಪಂದ್ಯ ಗೆಲ್ಲುವವರೆಗೂ ಭಾರತದ ಆಟಗಾರರ ವರ್ತನೆ ಒಂದೇ ತೆರನಾಗಿತ್ತು. ಪಂದ್ಯ ಮುಗಿದೊಡನೆ ಕ್ರೀಸಿನಲ್ಲಿದ್ದ ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರು ಪಾಕಿಸ್ತಾನದ ಆಟಗಾರರೊಂದಿಗೆ ಔಪಚಾರಿಕವಾಗಿ ಹಸ್ತಲಾಘವ ಮಾಡದೆ ಡಗೌಟ್ ನತ್ತ ತೆರಳಿದರು.

### ಮೈದಾನದಲ್ಲಿ ಕಾದ ಆಟಗಾರರು

ಪಾಕಿಸ್ತಾನದ ಆಟಗಾರರು ಭಾರತೀಯ ಆಟಗಾರರು ಬರಬಹುದು ಎಂದು ಕೆಲವು ನಿಮಿಷಗಳ ಕಾಲ ಮೈದಾನದಲ್ಲಿ ಕಾದು ನಂತರ ವಾಪಸ್ಸು ಹೋದರು. ಪಾಕಿಸ್ತಾನದ ಕೋಚ್ ಮೈಕೆ ಹಸ್ಸನ್ ಸಿಟ್ಟಿನಿಂದ ಭಾರತದ ಡ್ರೆಸ್ಸಿಂಗ್ ರೂಮ್ ಕಡೆಗೆ ಹೋದರೆ ಅಲ್ಲೂ ಬಾಗಿಲು ಲಾಕ್ ಆಗಿತ್ತು. ನಂತರ ಅವರು ಪಂದ್ಯದ ರೆಫರಿ ಆಂಡಿ ಪೈಕ್ರಾಫ್ಟ್ ಅವರೊಂದಿಗೆ ಮಾತನಾಡುತ್ತಿರುವುದು ಕಂಡುಬಂತು. ಬಳಿಕ ನಡೆದ ವಿದ್ಯಮಾನದಲ್ಲಿ ನಾಯಕ ಸಲ್ಮಾನ್ ಅಲಿ ಆಘಾ ಅವರು ತಂಡದ ಮ್ಯಾನೇಜ್‌ಮೆಂಟ್‌ನ ಸೂಚನೆಯಂತೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲಿಲ್ಲ, ಇದರಿಂದ ಪ್ರಸಾರಕರಿಗೆ ತೊಂದರೆಯಾಯಿತು.






ಈ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಪಾಕಿಸ್ತಾನದ ಕೋಚ್ ಮೈಕ್ ಹೆಸ್ಸನ್ ಪಂದ್ಯ ಮುಗಿದ ಬಳಿಕ ನಾವು ಕೈ ಕುಲುಕಲು ಸಿದ್ಧರಿದ್ದೆವು. ಆದರೆ ಎದುರಾಳಿಗಳು ಸಿದ್ಧರಿರಲಿಲ್ಲ, ನಾವು ಡ್ರೆಸ್ಸಿಂಗ್ ರೂಂಗೆ ಹೋದರೆ ಅಲ್ಲೂ ಬಾಗಿಲು ಹಾಕಲಾಗಿತ್ತು. ಇದೊಂದು ನಿರಾಶಾದಾಯಕ ಬೆಳವಣಿಗೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಇನ್ನು ಪಾಕಿಸ್ತಾನ ತಂಡದ ಮ್ಯಾನೇಜ್‌ಮೆಂಟ್ ಸಹ ಭಾರತೀಯ ಆಟಗಾರರ ವರ್ತನೆ ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿದೆ. ಅದಕ್ಕಾಗಿಯೇ ನಾಯಕ ಸಲ್ಮಾನ್ ಆಘಾ ಅವರನ್ನು ಪಂದ್ಯದ ನಂತರದ ಸಮಾರಂಭಕ್ಕೆ ಕಳುಹಿಸಲಿಲ್ಲ ಎಂದು ಅವರು ಸ್ಪಷ್ಟನೆ ನೀಡಿತ್ತು.

### ಭಾರತದ ನಾಯಕನ ಸ್ಪಷ್ಟನೆ

ಏತನ್ಮಧ್ಯೆ ಭಾರತ ತಂಡ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ. ಸೂರ್ಯಕುಮಾರ್ ಯಾದವ್ ಅವರು ನಾವು ಪಹಲ್ಗಾವ್ ಭಯೋತ್ಪಾದಕ ದಾಳಿಯಲ್ಲಿ ಮಡಿದವರು ಮತ್ತು ಅವರ ಕುಟುಂಬಗಳೊಂದಿಗೆ ನಿಲ್ಲುತ್ತೇವೆ. ಇಂದಿನ ಗೆಲುವನ್ನು ಸಶಸ್ತ್ರ ಪಡೆಗಳಿಗೆ ಅರ್ಪಿಸುತ್ತೇವೆ ಎಂದು ಹೇಳುವ ಮೂಲಕ ಭಾರತ ತಂಡದ ಇರಾದೆಯನ್ನು ಸ್ಪಷ್ಟಪಡಿಸಿದ್ದಾರೆ. ಇದೀಗ ತೀವ್ರ ಮುಖಭಂಗಕ್ಕೊಳಗಾಗಿರುವ ಪಾಕಿಸ್ತಾನ ತಂಡ ಭಾರತ ತಂಡದ ಈ ವರ್ತನೆಯನ್ನು ವಿರೋಧಿಸಿ ಐಸಿಸಿಗೆ ದೂರು ಸಲ್ಲಿಸಿದೆಯಂತೆ! ಇದರ ಬಗ್ಗೆ ಬಿಸಿಸಿಐ ಅಧ್ಯಕ್ಷ ಜೈಶಾ ಹಾಗೂ ಫಾದರ್ ಅಮಿತ್ ಶಾ ಏನು ಹೇಳಿದ್ದಾರೆ ಎಂಬುದನ್ನ ಮುಂದೆ ನೋಡೋಣ ಬನ್ನಿ.

ಯುಎಇನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ 2025 ಕ್ರೀಡಾಕೂಟದಲ್ಲಿ ಭಾರತ, ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಸುಲಭವಾಗಿ ಸೋಲಿಸಿದೆ ನಿಜ. ಆದರೆ ಈ ಪಂದ್ಯ ಆರಂಭಕ್ಕೂ ಮುನ್ನ ಮತ್ತು ಪಂದ್ಯ ಗೆದ್ದ ನಂತರ ನಡೆದ ವಿದ್ಯಮಾನಗಳು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗುತ್ತಿದೆ.

ಶತ್ರು ರಾಷ್ಟ್ರ ಪಾಕಿಸ್ತಾನದ ವಿರುದ್ಧ ಪಂದ್ಯ ಆಡಲೇ ಬಾರದು ಎನ್ನುವ ಜನಾಕ್ರೋಶದ ನಡುವೆ, ಮೊದಲ ಪಂದ್ಯ ನಡೆದು ಹೋಗಿದೆ. ಈ ನಡುವೆ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಖಾಸಗಿ ವಾಹಿನಿಯೊಂದಿಗಿನ ಸಂವಾದದಲ್ಲಿ ಆಡಿದ ಮಾತು, ಸದ್ಯ ಟ್ರೆಂಡಿಂಗ್‌ನಲ್ಲಿದೆ. ಅವರ ಪುತ್ರ ಜಯ್ ಶಾ, ಐಸಿಸಿ ಅಧ್ಯಕ್ಷರಾಗಿದ್ದಾರೆ.

ಅಮಿತ್ ಶಾ ಅವರ ಪುತ್ರ ಜಯ್ ಶಾ, ಕೇಂದ್ರ ಸಚಿವ ಅನುರಾಗ್ ಠಾಕೂರ್ ಮತ್ತು ಪಾಕಿಸ್ತಾನದ ಮಾಜಿ ಕ್ರಿಕೆಟ್ ತಂಡದ ನಾಯಕ ಶಹೀದ್ ಅಫ್ರಿದಿ, ಜೊತೆಯಾಗಿ ಭಾರತ - ಪಾಕ್ ಪಂದ್ಯ ನೋಡುತ್ತಿರುವ ವಿಡಿಯೋ ಕೂಡಾ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಭಾರತ ಮತ್ತು ಪಾಕಿಸ್ತಾನ್ ನಡುವಿನ ಕ್ರೀಡಾ ಸಂಬಂಧದ ಬಗ್ಗೆ ಮಾತನಾಡುತ್ತಿದ್ದ ಅಮಿತ್ ಶಾ ಅವರು- ಇನ್ನೊಂದು ದಾರಿಯಿದೆ, ಐಸಿಸಿಯೇ ಪಾಕಿಸ್ತಾನ ತಂಡವನ್ನು ನಿಷೇಧಿಸಲಿಎನ್ನುವ ಮಾತನ್ನು ಆಡಿದ್ದರು! ಇದು ಹಳೆಯ ವಿಡಿಯೋ ಆಗಿದ್ದು, ಇದೀಗ ಸಾಂದರ್ಭಿಕವಾಗಿ ವೈರಲ್ ಮಾಡಲಾಗುತ್ತಿದೆ.

ಕಾಶ್ಮೀರದ ಪಹಲ್ಗಾವ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆ ಪಾಕಿಸ್ತಾನದ ಉಗ್ರರು ದಾಳಿಯನ್ನು ನಡೆಸಿ, 26 ಜನರ ಸಾವಿಗೆ ಕಾರಣರಾಗಿದ್ದರು. ಇದಕ್ಕೆ ಸೇಡನ್ನು ತೀರಿಸಿಕೊಂಡಿದ್ದ, ಭಾರತದ ಮಿಲಿಟರಿ, ಅವರ ನೆಲಕ್ಕೇ ನುಗ್ಗಿ, ಸುಮಾರು ನೂರಕ್ಕೂ ಹೆಚ್ಚು ಉಗ್ರರನ್ನು ಸಾಯಿಸಿ, ಉಗ್ರ ನೆಲೆಗಳನ್ನು ಧ್ವಂಸಗೊಳಿಸಿತ್ತು.

ಈ ವಿದ್ಯಮಾನದ ನಂತರ, ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಹದೆಗೆಟ್ಟಿದೆ, ಅಂತರರಾಷ್ಟ್ರೀಯ ನದಿನೀರು ಒಪ್ಪಂದವನ್ನು ಭಾರತ ರದ್ದುಗೊಳಿಸಿದೆ. ಪಾಕಿಸ್ತಾನದ ಜೊತೆಗೆ, ಯಾವುದೇ ಸಂಬಂಧ ಇಟ್ಟುಕೊಳ್ಳಬಾರದು ಎನ್ನುವ ಕೂಗಿನ ನಡುವೆ, ಇಂಗ್ಲೆಂಡ್‌ನಲ್ಲಿ ನಡೆದ ಸೀನಿಯರ್ಸ್ ಕ್ರೀಡಾಕೂಟದಲ್ಲಿ, ಭಾರತ ತಂಡ, ಪಾಕಿಸ್ತಾನದ ವಿರುದ್ಧ ಎರಡೂ ಪಂದ್ಯವನ್ನು ಬಹಿಷ್ಕರಿಸಿತ್ತು.

ಇಂತಹ ಘಟನೆಗಳಿಂದ ಹೊರಬರಲು, ಇದೂ ಒಂದು ರೀತಿಯಲ್ಲಿ ದಾರಿಯಾಗಬಹುದು. ಐಸಿಸಿಯೇ ಪಾಕಿಸ್ತಾನ ತಂಡವನ್ನು ಹೊರಗಿಡಲಿ. ನಾವು ಅವರ ಜೊತೆಗೆ ಆಡುತ್ತೇವೋ, ಇಲ್ಲವೋ, ಪಾಕಿಸ್ತಾನವನ್ನು ಆಡಿಸದೇ ಹೊರಗಿಡುವುದೂ ಇಂತಹ ಸಮಸ್ಯೆಗಳಿಗೆ ಒಂದು ದಾರಿಯಾಗಬಹುದು ಎಂದು ಅಮಿತ್ ಶಾ ಹೇಳಿದ್ದರು.

ಏಷ್ಯಾ ಕಪ್ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆಯೇ, ಪಾಕಿಸ್ತಾನದ ವಿರುದ್ಧ ಕ್ರಿಕೆಟ್ ಪಂದ್ಯ ಆಡಬಾರದು ಎನ್ನುವ ಕೂಗು ಜೋರಾಗಿತ್ತು. ಆದರೂ, ದ್ವಿಪಕ್ಷೀಯ ಪಂದ್ಯಾವಳಿ ಅಲ್ಲದ ಹಿನ್ನಲೆಯಲ್ಲಿ, ಭಾರತ ಸರ್ಕಾರ ಮತ್ತು ಬಿಸಿಸಿಐ, ಟೀಂ ಇಂಡಿಯಾದ ಪಾಲ್ಗೊಳ್ಳುವಿಕೆಗೆ ಗ್ರೀನ್ ಸಿಗ್ನಲ್ ನೀಡಿತ್ತು. ಈ ನಡುವೆ ಅಮಿತ್ ಶಾ ಆಡಿದ ಮಾತು ವೈರಲ್ ಆಗುತ್ತಿದೆ. ನಿಮ್ಮ ಮಗನೇ, ಐಸಿಸಿ ಚೇರ್‌ಮನ್. ನೀವು ನಿಮ್ಮ ಮನೆಯಲ್ಲಿ ಈ ಮಾತನ್ನು ಆಡಿಕೊಳ್ಳಿ ಎನ್ನುವ ಪ್ರತಿಕ್ರಿಯೆ ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾಗುತ್ತಿದೆ. ಪಾಕಿಸ್ತಾನದಲ್ಲಿರುವ ಉಗ್ರರಿಗೆ ಭಾರತದ ವಿರುದ್ಧ ಪಂದ್ಯ ಮ್ಯಾಚ್ ಫಿಕ್ಸಿಂಗ್‌ಗೆ ಬೇಕಾಗುತ್ತದೆ ಎನ್ನುವ ಕಾಮೆಂಟೂ ದಂಡಿ ದಂಡಿಯಾಗಿ ಬರುತ್ತಿವೆ.

### ಸೂಪರ್ 4ನಲ್ಲಿ ಮತ್ತೆ ಇಂಡೋ ಪಾಕ್ ಸೆಣಸಾಟ!

ಯುಎಇ ತಂಡವನ್ನು ಸುಲಭವಾಗಿ ಸೋಲಿಸಿದ್ದ ಪಾಕಿಸ್ತಾನ ತಂಡ ಎ ಬಣದಿಂದ ಎರಡನೇ ಸ್ಥಾನಿಯಾಗಿ ಏಷ್ಯಾ ಕಪ್ 2025 ಟೂರ್ನಿಯ ಸೂಪರ್ 04 ಹಂತ ಪ್ರವೇಶಿಸಿದೆ! ಹೀಗಾಗಿ, ಎ ಬಣದಿಂದ ಮೊದಲ ಸ್ಥಾನಿಯಾಗಿ ಆಯ್ಕೆಯಾಗಿರೋ ಭಾರತ ಮತ್ತು ಪಾಕಿಸ್ತಾನ ನಡುವೆ ಸೆಪ್ಟೆಂಬರ್ 21 ಭಾನುವಾರದಂದು ಮತ್ತೊಮ್ಮೆ ಯುದ್ಧ! ಪಾಕ್ ನಾಯಕ ಸಲ್ಮಾನ್ ಆಘಾ ಅಂತೂ ಯುದ್ಧಕ್ಕೆ ಸನ್ನದರಾಗಿ ನಿಂತಿದ್ದು, ನಾವು ಯಾವುದೇ



ಸವಾಲನ್ನು ಸ್ವೀಕರಿಸಲು ಸಿದ್ಧರಿದ್ದೇವೆ ಎನ್ನುವ ಮೂಲಕ ಭಾರತ ತಂಡಕ್ಕೆ ಸೇಡು ತೀರಿಸಿಕೊಳ್ಳೋ ಎಚ್ಚರಿಕೆ ನೀಡಿತ್ತು! ಸಲ್ಮಾನ್ ಆಘಾ ಎಚ್ಚರಿಕೆಯನ್ನು ನಮ್ಮ ಆಟಗಾರರು ಹಗುರವಾಗಿ ಪರಿಗಣಿಸಿದರೆ ಅಷ್ಟೇ.

ಮೊದಲೇ ಅವಮಾನದಿಂದಕುಡಿಯುತ್ತಿರೋ ಅವರು ಇರೋ ಬರೋ ಸಿಟ್ಟನ್ನೆಲ್ಲ ಬಿಟ್ಟು ಬ್ಯಾಟ್ ಬೀಸಿದರೆ... ಸೋಲುಣ್ಣಬೇಕಾಗಬಹುದು! ಎಂದು ಎಚ್ಚರಿಕೆಯಿಂದ ಯುದ್ಧಕ್ಕೆ ಸಜ್ಜಾದರು. ಅದಾಗಲೇ ರನ್ ರೇಟ್‌ನಲ್ಲಿ ಬಹಳ ಎಲ್ಲರಿಗಿಂತ ಮುಂದಿರುವ ಭಾರತ ತಂಡ ಪ್ರಥಮ ಸ್ಥಾನಿಯಾಗಿಯೇ ಸೂಪರ್ ಸಿಕ್ಸ್ ಹಂತ ಏರುವುದು ಖಚಿತವಾಗಿತ್ತು. ಇದೀಗ ಎ ಬಣದ ಮೊದಲೆರಡು ಸ್ಥಾನಗಳಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ವಿರಾಜಮಾನವಾಗಿದ್ದು ಸೂಪರ್ ಫೋರ್ ಹಂತದಲ್ಲಿ ಸೆಪ್ಟೆಂಬರ್ 21ರಂದು (ಭಾನುವಾರ) ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾದವು.

ಸೆಪ್ಟೆಂಬರ್ 14ರಂದು ನಡೆದ ಪಂದ್ಯದಲ್ಲಿ ಭಾರತ ತಂಡ ಪಾಕಿಸ್ತಾನವನ್ನು 7 ವಿಕೆಟ್ ನಿಂದ ಸೋಲಿಸಿದ ಬಳಿಕ, ಪಹಲ್ಗಾಮ್ ಉಗ್ರ ದಾಳಿಯ ಉರಿಯಲ್ಲಿ ಟೀಮ್

☞ 14

# ಬುರುಡೆ ಸೂತ್ರಧಾರಿ ತಿಮರೋಡಿ ಗಡಿಪಾರು!

ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಗುರಿಯಾಗಿಸಿಕೊಂಡು ಬುರುಡೆ ಕಥೆ ಹೆಣೆದಿದ್ದ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಸ್ಥಾಪಕಾಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿಗೆ


ಬುರುಡೆ ಚಿನ್ನಯ್ಯ

ಕೆಟ್ಟಕಾಲ ಆರಂಭವಾಗಿದೆ. ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಸಿಂದಗಿ ತಾಲೂಕಿನ ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಂದು ವರ್ಷದ ಕಾಲ ಗಡಿಪಾರು ಮಾಡಿ ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಆದೇಶ ಹೊರಡಿಸಿದ್ದಾರೆ. ಆದೇಶ ಪ್ರತಿ ಬಂಟ್ವಾಳ ಪೊಲೀಸ್ ಉಪಾಧೀಕ್ಷಕರ ಕಚೇರಿಗೆ ತಲುಪುತ್ತಿದ್ದಂತೆಯೇ ಮಹೇಶ್ ಶೆಟ್ಟಿ ತಿಮರೋಡಿ ನಾಪತ್ತೆಯಾಗಿದ್ದಾರೆ. ಗಡಿಪಾರು ಆದೇಶ ಜಾರಿ ಮಾಡಲು ಎರಡು ಪೊಲೀಸ್ ತಂಡಗಳನ್ನು ರಚಿಸಿ ಜಾಲಾಡಲಾಗುತ್ತಿದೆ. ಈ ಮಧ್ಯೆ ಮಹೇಶ್ ಶೆಟ್ಟಿ ತಿಮರೋಡಿ ಕಾನೂನಿನ ಮೊರೆ ಹೋಗಿದ್ದಾರೆ.

### ಗಡಿಪಾರು ಯಾಕೆ?

ಮಹೇಶ್ ಶೆಟ್ಟಿ ತಿಮರೋಡಿ ಬೆಳ್ತಂಗಡಿ ಠಾಣೆಯ ರೌಡಿಶೀಟರ್. ಅವರ ಮೇಲೆ ಈ ಹಿಂದೆ 34 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದವು. ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಎಂಬ ಸಂಘಟನೆ ಕಟ್ಟಿಕೊಂಡಿದ್ದರು. ಕಳೆದ 13 ವರ್ಷಗಳಿಂದ ಧರ್ಮಸ್ಥಳ ಗ್ರಾಮದ ಮಣ್ಣಸಂಕ ಎಂಬಲ್ಲಿ ಸೌಜನ್ಯ ಹತ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋರಾಟ ನಡೆಸುತ್ತಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿ ಷಡ್ಯಂತ್ರ ರೂಪಿಸಿದ್ದರು. ಸ್ಥಳೀಯವಾಗಿ ಅವರ ಚಟುವಟಿಕೆಗಳ ಮೇಲೆ ಪೊಲೀಸರು ನಿಗಾ ಇರಿಸಿದ್ದರು. ಕೆಲವು ತಿಂಗಳ ಹಿಂದೆ ಬಜಪೆ ಬಳಿ ಹಿಂದೂ ಸಂಘಟನೆಯ ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರನ್ನು ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆ ಮಾಡಿದ್ದರು. ಇದರ ಬೆನ್ನಲ್ಲೇ


ಕುಸುಮಾವತಿ

ಪೊಳಲಿ ಸಮೀಪ ಕೊಳ್ತಮಜಲುವಿನ ಅಬ್ದುಲ್ ರಹಿಮಾನ್ ಎಂಬ ಟೆಂಪೋ ಚಾಲಕನನ್ನು ಹಾಡುಹಗಲೇ ಇಶಾಕೋಡಿ ಎಂಬಲ್ಲಿ ಹತ್ಯೆ ಮಾಡಲಾಗಿತ್ತು. ಈ ಎರಡೂ ಹತ್ಯೆಗಳು ಕೋಮು ದ್ವೇಷದ ಹಿನ್ನೆಲೆಯಲ್ಲಿ ನಡೆದಿದ್ದರಿಂದ ಸರಕಾರ ಜಿಲ್ಲಾ ಎಸ್ಪಿ ಮತ್ತು ನಗರ ಪೊಲೀಸ್ ಆಯುಕ್ತರನ್ನು ವರ್ಗಾವಣೆಗೊಳಿಸಿ ಉಡುಪಿ ಎಸ್ಪಿಯಾಗಿದ್ದ ಕೆ. ಅರುಣ್ ಅವರನ್ನು ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿಯೂ ಸುಧೀರ್ ಕುಮಾರ್ ರೆಡ್ಡಿಯವರನ್ನು ಮಂಗಳೂರು ನಗರ ಪೊಲೀಸ್ ಆಯುಕ್ತರನ್ನಾಗಿ ನಿಯುಕ್ತಿಗೊಳಿಸಿತ್ತು.

ಜಿಲ್ಲೆಯಲ್ಲಿ ವಿಷಮಿಸಿದ್ದ ಪರಿಸ್ಥಿತಿಯನ್ನು ತಹಬಂದಿಗೆ ತರಲು ಜಿಲ್ಲಾ ಎಸ್ಪಿ ಕೆ. ಅರುಣ್ ಅವರು ಕೋಮು ದಂಗೆಗಳಲ್ಲಿ ಭಾಗಿಗಳಾಗಿದ್ದಂತಹ 36 ಮಂದಿಯನ್ನು ಪಟ್ಟಿಮಾಡಿ ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಶಿಫಾರಸು ಮಾಡಿದ್ದಾರೆ. ಹಿಂದೂ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದ 22 ಮಂದಿ ಹಾಗೂ ಮುಸ್ಲಿಂ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದ 14 ಮಂದಿಗೆ ನೋಟೀಸು ಜಾರಿಯಾಗಿತ್ತು. ಈ 36 ಮಂದಿಯಲ್ಲಿ ಮಹೇಶ್ ಶೆಟ್ಟಿ ತಿಮರೋಡಿಯವರ ಹೆಸರೂ ಇತ್ತು. ಗಡಿಪಾರು ಪ್ರಕ್ರಿಯೆಗಳು ನಡೆಯುತ್ತಿರುವಂತೆಯೇ ಮಹೇಶ್ ಶೆಟ್ಟಿ ತಿಮರೋಡಿಯವರು ಜಿಲ್ಲಾ ನ್ಯಾಯಾಲಯಕ್ಕೆ ಗಡಿಪಾರು ನೋಟೀಸಿನ ವಿರುದ್ಧ ಪುನರ್ ವಿಮರ್ಶಾ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿ ತಿರಸ್ಕೃತಗೊಂಡಿತ್ತು. ಅದನ್ನು ಮತ್ತೇ ಪ್ರಶ್ನಿಸಲಾಗಿತ್ತು. ಈ ಪ್ರಕ್ರಿಯೆ ಜಾರಿಯಲ್ಲಿರುವಾಗಲೇ ಮಹೇಶ್ ತಿಮರೋಡಿಯವರ ಮೇಲೆ ಮತ್ತೇ 5 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳ ಪೈಕಿ ಬ್ರಹ್ಮಾವರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದಕ್ಕೆ ಸಂಬಂಧಿಸಿ ಬ್ರಹ್ಮಾವರ ಪೊಲೀಸರು ಅವರ ಮನೆಗೆ ದಾಳಿ ನಡೆಸಿದ್ದರು. ಈ ಸಂದರ್ಭದಲ್ಲಿ ಅವರು ಸಹಿತ ಅವರ ಬೆಂಬಲಿಗರು ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದರು ಎಂದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ಈ ಸಂಬಂಧ ಬೆಳ್ತಂಗಡಿ ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ನೋಟೀಸು ಕೊಟ್ಟಿದ್ದರೂ ತಿಮರೋಡಿಯವರು ಹಾಜರಾಗಿರಲಿಲ್ಲ. ಬ್ರಹ್ಮಾವರ ಪೊಲೀಸರು ತಿಮರೋಡಿಯವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಅವರು 3 ದಿನಗಳ ಜೈಲು ವಾಸದ ಬಳಿಕ ಜಾಮೀನಿನ ಮೇರೆಗೆ ಬಿಡುಗಡೆಗೊಂಡಿದ್ದರು. ಈ ಘಟನೆಗಳ ತರುವಾಯ ಧರ್ಮಸ್ಥಳ ಸುತ್ತಮುತ್ತ ನಡೆದಿದೆ ಎನ್ನಲಾದಂತಹ ಅಸಹಜ ಸಾವುಗಳ ಮೃತದೇಹಗಳನ್ನು ಕಾನೂನು ಪ್ರಕ್ರಿಯೆ ನಡೆಸದೆ ಹೂತು ಹಾಕಲಾಗಿದೆ ಎಂಬ ಆರೋಪದನ್ವಯ ರಾಜ್ಯ ಸರಕಾರ ಹಿರಿಯ ಪೊಲೀಸ್ ಅಧಿಕಾರಿ ಪ್ರಣಮ್ ಮೊಹಂತಿ ಅವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿತ್ತು. ಈ ತಂಡವು ಬುರುಡೆ ಪ್ರಕರಣದ ರೂವಾರಿಯಾಗಿದ್ದ ಮಹೇಶ್ ಶೆಟ್ಟಿ ತಿಮರೋಡಿಯವರ ಮನೆಗೆ ಧಾಳಿ ನಡೆಸಿತ್ತು. ಅವರು ಬುರುಡೆ ತಂದಿದ್ದ ಚಿನ್ನ ಯಾನೆ ಚಿನ್ನಯ್ಯನಿಗೆ ತನ್ನ ಮನೆಯಲ್ಲಿಯೇ ಆಶ್ರಯ ಕೊಟ್ಟಿದ್ದರು ಎಂಬ ಕಾರಣಕ್ಕಾಗಿ ಸ್ಥಳ ಮಹಜರು ನಡೆಸಲು ಎಸ್ಐಟಿ ತಂಡ ಮನೆಗೆ


ಸೌಜನ್ಯ

**ದಕ್ಷಿಣ ಕನ್ನಡ**

**ಮೋಹನ್ ಬೋಳಂಗಡಿ**

ಹೋಗಿತ್ತು. ಈ ಸಂದರ್ಭದಲ್ಲಿ ಆ ಮನೆಯಲ್ಲಿ ಪರವಾನಗಿ ರಹಿತ ಬಂದೂಕು ಮತ್ತು ಎರಡು ತಲವಾರುಗಳು ಪತ್ತೆಯಾಗಿತ್ತು. ಈ ಸಂಬಂಧ ಎಸ್ಐಟಿ ಎಸ್ಪಿ ಸೈಮನ್ ಅವರು ನೀಡಿದ ದೂರಿನಂತೆ ಬೆಳ್ತಂಗಡಿ ಠಾಣೆಯಲ್ಲಿ ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿಯಲ್ಲಿ ಕೇಸು ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಿಮರೋಡಿಯವರು ಜಿಲ್ಲಾ ಸೆಶನ್ಸ್ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ಇದರ ವಿಚಾರಣೆ ನಡೆದು ಆಕ್ಷೇಪಣೆಗೆ ದಿನಾಂಕ ನಿಗದಿಯಾಗಿದೆ.


ಗಿರೀಶ್ ಮಟ್ಟಣ್ಣನವರ್

ಈ ಘಟನೆಗೆ ಮುನ್ನ ಮಹೇಶ್ ಶೆಟ್ಟಿ ತಿಮರೋಡಿಯವರ ಮೇಲೆ ಎರಡು ಪ್ರಕರಣಗಳು ದಾಖಲಾಗಿದ್ದವು. ಧರ್ಮಸ್ಥಳದ ಸ್ನಾನಘಟ್ಟದ ಬಳಿ ಹೂತಿಡಲಾಗಿದ್ದಂತಹ ಮೃತದೇಹಗಳ ಉತ್ಖನನ ಕಾರ್ಯಗಳು ನಡೆಯುತ್ತಿದ್ದವು. ಎಸ್ಐಟಿ ಅಧಿಕಾರಿಗಳು ದೂರುದಾರ ಚಿನ್ನಯ್ಯನನ್ನು ಕರೆದುಕೊಂಡು ಬಂದು ಆತ ತೋರಿಸಿಕೊಟ್ಟ ಸ್ಥಳಗಳಲ್ಲಿ ಮೃತದೇಹಗಳಿಗಾಗಿ ಶೋಧ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಯೂಟ್ಯೂಬರ್‌ಗಳಾದ ಅಜಯ್ ಅಂಚನ್, ಅಭಿಷೇಕ್ ಮತ್ತು ಸಂತೋಷ್ ಶೆಟ್ಟಿ ಅವರು ಉತ್ಪ್ರೇಕ್ಷಿತ ವರದಿಗಳನ್ನು ಯೂಟ್ಯೂಬ್‌ನ ಮೂಲಕ ಹರಿಯಬಿಟ್ಟು ಗೊಂದಲವನ್ನು ಸೃಷ್ಟಿಸಿದ್ದರು ಅಲ್ಲದೇ ಸ್ಥಳೀಯ ರಿಕ್ಷಾಚಾಲಕರ ಮೇಲೆ ಹಲವು ಗುರುತರವಾದ ಆರೋಪಗಳನ್ನು ಮಾಡುತ್ತಿದ್ದರು. ಇದರಿಂದ ರೋಷಗೊಂಡಿದ್ದ ರಿಕ್ಷಾ ಚಾಲಕರು ಅವಕಾಶ ಸಿಕ್ಕ ಸಂದರ್ಭದಲ್ಲಿ ಮೂವರು ಯೂ ಟ್ಯೂಬರ್‌ಗಳ ಮೇಲೆ ಹಲ್ಲೆ ನಡೆಸಿದ್ದರು. ಗಾಯಗೊಂಡಿದ್ದ ಅವರನ್ನು ಉಜಿರೆಯ ಬೆನಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಪ್ರತಿಕ್ರಿಯೆಗಾಗಿ ಸುವರ್ಣವಾಹಿನಿಯ ವರದಿಗಾರರು ಮತ್ತು ಕೆಮರಾಮೆನ್ ಹೋಗಿದ್ದರು. ಈ ಸಂದರ್ಭದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್ ಹಾಗೂ ಇತರರು ಅವರ ಮೇಲೆ ಹಲ್ಲೆ ನಡೆಸಿದ್ದರು. ಈ ಬಗ್ಗೆ ಬೆಳ್ತಂಗಡಿ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ಈ ಪ್ರಕರಣದ ತನಿಖೆಗಾಗಿ ಪೊಲೀಸರು ನೋಟೀಸು ನೀಡಿದ್ದರೂ ತಿಮರೋಡಿ ಹಾಜರಾಗಿರಲಿಲ್ಲ.


ಮಹೇಶ್ ಶೆಟ್ಟಿ ತಿಮರೋಡಿ

ತಿಮರೋಡಿಯವರ ಗಡಿಪಾರು ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಅವರ ಮೇಲೆ 5 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಈ ಹಿಂದೆ ದಾಖಲಾಗಿದ್ದ ಪ್ರಕರಣಗಳೂ ಸೇರಿದಂತೆ ಒಟ್ಟು 34 ಪ್ರಕರಣಗಳು ಅವರ ಮೇಲೆ ದಾಖಲಾಗಿದ್ದವು. ಈ ಎಲ್ಲಾ

☞ 14

# ಸುಪ್ರೀಂ ಆದೇಶ ಮುಚ್ಚಿಟ್ಟ ಬುರುಡೆ ಗ್ಯಾಂಗ್

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿದ್ದಂತಹ ಬುರುಡೆ ಗ್ಯಾಂಗ್ ಈ ಹಿಂದೆಯೇ ಸುಪ್ರೀಂ ಕೋರ್ಟ್‌ನ ಕದ ತಟ್ಟಿತ್ತು. ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಕೆ.ವಿ. ಧನಂಜಯ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕಳೆದ ಮೇ ತಿಂಗಳಲ್ಲೇ ಸಲ್ಲಿಸಿದ್ದರು. ಇದನ್ನು ನ್ಯಾಯಮೂರ್ತಿ ಬಿ.ವಿ. ನಾಗರತ್ನ ನೇತೃತ್ವದ ದ್ವಿಸದಸ್ಯಪೀಠ ವಜಾ ಮಾಡಿತ್ತು. ಅಲ್ಲದೇ ಈ ಅರ್ಜಿಯ ಸಂಬಂಧ ಪ್ರತಿವಾದಿಗಳಿಗೆ ಯಾವುದೇ ನೋಟೀಸು ನೀಡದೆ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಇಲ್ಲ, ಕೇವಲ ಹಣ ಮಾಡುವ, ರಾಜಕೀಯಗೊಳಿಸುವಂತಹ ಹುನ್ನಾರ ಇದೆ ಅಭಿಪ್ರಾಯಪಟ್ಟು ವಜಾಮಾಡಿತ್ತು.

ನ್ಯಾಯವಾದಿ ಕೆ.ವಿ. ಧನಂಜಯ ಸಲ್ಲಿಸಿದ್ದಂತಹ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ದೂರುದಾರ ಆಗಿದ್ದದ್ದು ಈಗ ಬುರುಡೆ ಪ್ರಕರಣದಲ್ಲಿ ಆರೋಪಿಯಾಗಿರುವ ಚಿನ್ನ ಯಾನೆ ಚಿನ್ನಯ್ಯ. ಆ ಸಂದರ್ಭದಲ್ಲಿ ಚಿನ್ನಯ್ಯ ಬೆಳ್ತಂಗಡಿ ನ್ಯಾಯಾಲಯಕ್ಕೆ ಜೂನ್ ತಿಂಗಳಲ್ಲಿ ಹಾಜರು ಪಡಿಸಿದಂತಹ ಮಾನವ ಬುರುಡೆಯ ಛಾಯಾಚಿತ್ರವನ್ನು ಲಗತ್ತೀಕರಿಸಲಾಗಿತ್ತು. ಈ ಅರ್ಜಿಯಲ್ಲಿ ಧರ್ಮಸ್ಥಳದ ಸುತ್ತಮುತ್ತ ನೂರಾರು ಮೃತದೇಹಗಳನ್ನು ಹೂಳಲಾಗಿತ್ತು. ಅವರೆಲ್ಲರನ್ನೂ ಅತ್ಯಾಚಾರಗೈದು ಕೊಲೆಗೈಯಲ್ಲಾಗಿತ್ತು ಎಂದು ಆರೋಪ ಹೊರಿಸಲಾಗಿತ್ತು. ಅದಕ್ಕೆ ಸಾಕ್ಷಿಯಾಗಿ ತಲೆಬುರುಡೆಯ ಛಾಯಾಚಿತ್ರವನ್ನು ನೀಡಲಾಗಿತ್ತು. ಈ ಅರ್ಜಿಯನ್ನು ಗಮನಿಸಿದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಪ್ರಕರಣ ಬೆಳಕಿಗೆ ಬಂದು ಎರಡು ದಶಕಗಳೇ ಕಳೆದಿವೆ. ಈ ಸಂದರ್ಭದಲ್ಲಿ ಇದರ ವಿಚಾರಣೆಗೆ ಅರ್ಜಿಯಲ್ಲಿ ಕೋರಲಾದಂತೆ ಸಿಬಿಐ, ರಾಷ್ಟ್ರೀಯ ತನಿಖಾ ದಳ ಅಥವಾ ವಿಶೇಷ ತನಿಖಾದಳ ರಚಿಸುವಂತಹ ಅಗತ್ಯತೆ ಇಲ್ಲ, ಬದಲಾಗಿ ಸ್ಥಳೀಯ ಪೊಲೀಸ್ ಠಾಣೆಗೆ ದೂರು ಸಲ್ಲಿಸುವಂತೆ ಸೂಚಿಸಿ ಅರ್ಜಿಯನ್ನು ಇತ್ಯರ್ಥಗೊಳಿಸಿತ್ತು. ಈ ಬೆಳವಣಿಗೆಯ ನಂತರ ಬುರುಡೆ ಗ್ಯಾಂಗ್ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿಯಾಗಿ ವಿಶೇಷ ತನಿಖಾದಳ ರಚಿಸುವಂತೆ ಕೋರಿಕೆ ಸಲ್ಲಿಸಿತ್ತು. ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದಂತಹ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಂಡ ವಿಚಾರವನ್ನು ಮುಚ್ಚಿಡಲಾಗಿತ್ತು.




ನ್ಯಾ. ನಾಗರತ್ನ

ಮನವಿ ಸಲ್ಲಿಸಲು ಬಂದಿದ್ದಂತಹ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಮತ್ತು ಇತರ ಪ್ರಮುಖರ ಮನವಿಯನ್ನು ಆಲಿಸಿ ಮುಖ್ಯಮಂತ್ರಿಗಳು ದೂರಿನಲ್ಲಿ ದುರುದ್ದೇಶ ಇರಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬಂದು ಎಸ್ಐಟಿ ರಚಿಸಿದ್ದರು ಮಾತ್ರವಲ್ಲದೇ ಮನವಿ ಸಲ್ಲಿಸಲು ಬಂದಿದ್ದವರ ಕೋರಿಕೆಯಂತೆಯೇ ಐಜಿಪಿ ಪ್ರಣವ್ ಮೊಹಂತಿಯವರ ನೇತೃತ್ವದಲ್ಲಿಯೇ ತನಿಖೆ ನಡೆಸುವಂತೆ ಸೂಚನೆ ನೀಡಿದ್ದರು. ಈ ಎಸ್ಐಟಿ ತನಿಖೆ ನಡೆಸುತ್ತಿದ್ದು ಬುರುಡೆ ಗ್ಯಾಂಗ್‌ನ ಎಲ್ಲಾ ಷಡ್ಯಂತ್ರಗಳು ಬೆಳಕಿಗೆ ಬರುತ್ತಿದೆ. ಯಾರೆಲ್ಲ ಈ ಷಡ್ಯಂತ್ರದಲ್ಲಿ ಭಾಗಿಗಳಾಗಿದ್ದಾರೋ ಅವರೆಲ್ಲರ ಮೇಲೂ ಕಾನೂನು ಕ್ರಮ ನಿಶ್ಚಿತ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.






# ಕರೂರು ದುರಂತ: ವಿಜಯ್ ಮುಗಿಸುವ ತಂತ್ರವೇ...?!




ತಮಿಳುನಾಡಿನ ಟಿವಿಕೆ ಪಕ್ಷದ ಅಧ್ಯಕ್ಷ ಹಾಗೂ ನಟ 'ದಳಪತಿ' ವಿಜಯ್ ಮೊನ್ನೆ ಶನಿವಾರ ಕರೂರ್‌ನಲ್ಲಿ ಚುನಾವಣಾ ಪೂರ್ವ ಪ್ರಚಾರದ ಹಿನ್ನಲೆಯಲ್ಲಿ ಏರ್ಪಡಿಸಿದ್ದ ರ‍್ಯಾಲಿಯಲ್ಲಿ ಭಾರಿ ಜನ ಸೇರಿದ್ದು, ನೂಕು ನುಗ್ಗಲು ಉಂಟಾಗಿ 39 ಮಂದಿ ಸಾವನ್ನಪ್ಪಿದ್ದು, 68 ಜನ ಆಸ್ಪತ್ರೆ ಸೇರಿದ್ದು, ಈ ದುರಂತ ಘಟನೆ ತಮಿಳುನಾಡನ್ನೇ ಕಣ್ಣೀರಲ್ಲಿ ಮುಳುಗಿಸಿದೆ! ತಮಿಳುನಾಡು ರಾಜಕೀಯ ಇತಿಹಾಸವೇ ಕಂಡು ಕೇಳರಿಯದ ದುರ್ಘಟನೆ ಇದಾಗಿದ್ದು, ಈ ದೊಡ್ಡ ದುರಂತಕ್ಕೆ ಕರೂರು ಟಿವಿಕೆ ಮುಖಂಡರು ಹಾಗೂ ಅಲ್ಲಿನ ಪೊಲೀಸರೇ ಕಾರಣರಾಗಿದ್ದಾರೆ! ನಿಗಧಿಯಾಗಿದ್ದ ಸಮಯಕ್ಕೆ ಬಾರದೆ 6 ಗಂಟೆ ತಡವಾಗಿ ಬಂದ ವಿಜಯ್ ಕೂಡ ಕಾರಣ ಎನ್ನಲಾಗುತ್ತಿದೆ.



ತೆರೆ ಮೇಲೆ ಹೀರೋ ಆಗಿ ಜನರನ್ನು ಕಾಪಾಡುವ ನಟ ವಿಜಯ್, ಇಂದು 39 ಅಭಿಮಾನಿಗಳ ಪಾಲಿಗೆ ಯಮನಂತಾಗಿದ್ದು ದುರ್ದೈವ . ಲೇಟ್ ಆಗಿದ್ದರಿಂದ ಅವರು ಸ್ಟೇಜ್ ಹತ್ತದೆ ಬಂದ ಬಸ್ (ಕ್ಯಾರವನ್) ಮೇಲೆಯೇ ನಿಂತು ಭಾಷಣ ಮಾಡಲು ಶುರು ಮಾಡಿದಾಗ, ಹುಚ್ಚು ಅಭಿಮಾನಿಗಳು ಅವರನ್ನ ಹತ್ತಿರದಿಂದ ನೋಡುವ ಉಮ್ಮೇದಿಯಿಂದ ಸುತ್ತುವರೆದ ಪರಿಣಾಮ, ನೂಕು ನುಗ್ಗಲು ಕಾಲ್ತುಳಿತ ಉಂಟಾಗಿದೆ.ಜನರು ಕೆಳಗೆ ಬಿದ್ದು ಉಸಿರುಗಟ್ಟಿ ಪ್ರಾಣ ಬಿಟ್ಟಿದ್ದಾರೆ. ಆ ದೃಶ್ಯವನ್ನು ಗಮನಿಸಿದರೆ ಕಾರ್ಯಕರ್ತರು ಭಾಷಣ ನಿಲ್ಲಿಸುವಂತೆ ವಿಜಯ್ ಅವರಿಗೆ ಕೂಗಿ ತಿಳಿಸಿದ್ದು, ಭಾಷಣ ನಿಲ್ಲಿಸಿ ನೀರು ಹಂಚಲು ಆರಂಭಿಸಲಾಗಿದೆ. ಆದರೆ ಅಷ್ಟೊತ್ತಿಗಾಗಲೇ ಪರಿಸ್ಥಿತಿ ಕೈ ಮೀರಿ ಹೋಗಿದ್ದು, ಕಾಲ್ತುಳಿತಕ್ಕೆ ಸಿಕ್ಕ ಅಮಾಯಕರು ಅಸು ನೀಗಿದ್ದಾರೆ. ಆ ದೃಶ್ಯ ನೋಡಿ ತಲೆ ತಲೆ ಚಚ್ಚಿಕೊಂಡಿರೋ ನಟ ವಿಜಯ್, ಪೊಲೀಸ್ ಹಾಗೂ ಕಾರ್ಯಕರ್ತರ ವಿನಂತಿ ಮೇರೆಗೆ ಅಲ್ಲಿಂದ ಜಾಗ ಖಾಲಿ ಮಾಡಿದ್ದಾರೆ. ಇದನ್ನು ಗಮನಿಸಿರುವ ವಿಜಯ್ ತೆರೆ ಮೇಲೆ ಹುಲಿ, ನಿಜ ಜೀವನದಲ್ಲಿ ಇಲಿ... ಎಂದು ಕೆಲವರು ಲೇವಡಿ ಮಾಡುತ್ತಿದ್ದಾರೆ.

**ವಿಜಯ್ ರಿಯಾಕ್ಷನ್!**

ರ‍್ಯಾಲಿ ಹೇಗೆ ಯೋಜಿಸಲಾಗಿತ್ತು ಎಂಬುದರ ಕುರಿತು ಡಿಜಿಪಿ ಜಿ. ವೆಂಕಟರಾಮನ್ ಮಾಹಿತಿ ನೀಡಿದ್ದಾರೆ. ಆಯೋಜಕರು ಸುಮಾರು 10,000 ಜನರ ಜನಸಂದಣಿಯನ್ನು ನಿರೀಕ್ಷಿಸಿ ಮೈದಾನವನ್ನು ಕೇಳಿದ್ದರು. ಆದರೆ ಸುಮಾರು ಮೂರು ಪಟ್ಟು ಹೆಚ್ಚು ಜನರು ಆಗಮಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.




10 ಸಾವಿರ ಜನರಿರೋ ಕಡೆ 30 ಸಾವಿರ ಜನ ಟಿವಿಕೆ ಯ ಹಿಂದಿನ ರ‍್ಯಾಲಿಗಳಲ್ಲಿ ಜನಸಂದಣಿ ಕಡಿಮೆ ಇತ್ತು, ಆದರೆ ಈ ಬಾರಿ ನಿರೀಕ್ಷೆಗಿಂತ ಹೆಚ್ಚಿನ ಮತದಾನವಾಗಿತ್ತು. ಸುಮಾರು 10,000 ಜನರ ನಿರೀಕ್ಷೆಯೊಂದಿಗೆ ಆಯೋಜಕರು ಕರೂರಿನಲ್ಲಿ ದೊಡ್ಡ ಮೈದಾನವನ್ನು ವಿನಂತಿಸಿದ್ದರೂ, ಸುಮಾರು 27,000 ಜನರು ಸೇರಿದ್ದರು ಎಂದು ತಮಿಳುನಾಡು ಉಸ್ತುವಾರಿ ಡಿಜಿಪಿ ಜಿ. ವೆಂಕಟರಾಮನ್ ಎ.ಎನ್.ಐ. ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಈ ಮಧ್ಯೆ ದುರಂತ ಕುರಿತು ಟಿವಿಕೆ ಮುಖ್ಯಸ್ಥ ನಟ ನಟ ವಿಜಯ್ ಹೇಳಿದ್ದಾರೆ. ಈ ದುರಂತದಿಂದ ಹೃದಯ ಚೂರಾಗಿದೆ.. ಅಸಹನೀಯ.. ವಿವರಿಸಲಾಗದ ನೋವು.. ತುಂಬಾ ದುಃಖದಲ್ಲಿದ್ದೇನೆ.. ಎಂದು ಹೇಳಿದ್ದಾರೆ.

ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿರುವ ವಿಜಯ್, ಗಾಯಗೊಂಡು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲಿ ಎಂದು ಚಿಕಿತ್ಸೆಯ ವೆಚ್ಚ ನೀಡುವುದಾಗಿ ತಿಳಿಸಿ, ತಮ್ಮ ಪಕ್ಷದಿಂದ ಮೃತರ ಕುಟುಂಬಗಳಿಗೆ ತಲಾ ಇಪ್ಪತ್ತು ಲಕ್ಷ ರೂ ಪರಿಹಾರ ಘೋಷಣೆ ಮಾಡಿದ್ದಾರೆ.

**ಸರ್ಕಾರದಿಂದ 10 ಲಕ್ಷ ಘೋಷಣೆ**

ಕರೂರು ದುರಂತಕ್ಕೆ ವಿಜಯ್ ಅವರನ್ನೇ ನೇರ ಹೊಣೆ ಮಾಡಿರುವ ಆಡಳಿತ ಡಿಎಂಕೆ ಪಕ್ಷದ ಸಿಎಂ ಸ್ಟಾಲಿನ್ ಅವರು, ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ ಪರಿಹಾರ ಘೋಷಿಸಿದ್ದಾರೆ. (ಇದನ್ನು ನೋಡಿಕೊಂಡೆ ವಿಜಯ್ ತಲಾ 20 ಲಕ್ಷ ರೂ ಘೋಷಿಸಿದ್ದು) ಈ ಭೀಕರ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಕರೂರ್ ನಗರ ಪೊಲೀಸ್ ಠಾಣೆ ನಾಲ್ಕು ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ನಟ ವಿಜಯ್, ಕರೂರ್ ಪಶ್ಚಿಮ (ತಾವೇಕ) ಜಿಲ್ಲಾ ಕಾರ್ಯದರ್ಶಿ ವಿ.ಪಿ. ಮಥಿಯ ಜಗನ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಿಜಯ್ ನಿಂತಿದ್ದ ಬಸ್ ಕೆಳಗೆಯೇ ಕೆಲವರು ಪ್ರಾಣ ಬಿಟ್ರು ಎನ್ನಲಾಗಿದೆ! ಈ ಮಧ್ಯೆ, ಕರೂರ್ ಘಟನೆಗೆ ಸಂಬಂಧಿಸಿದಂತೆ ಆಘಾತಕಾರಿ ವಿಡಿಯೋಗಳು ಬಿಡುಗಡೆಯಾಗುತ್ತಿವೆ.

ಒಂದು ವಿಡಿಯೋದಲ್ಲಿ, ವಿಜಯ್ ತಮ್ಮ ವಾಹನದಲ್ಲಿ ನಿಂತು ಮಾತಾಡುತ್ತಿದ್ದು, ಪಕ್ಕದಲ್ಲೇ ಜನರು ಮಾತನಾಡಲು ಆಗದೇ, ಉಸಿರಾಡಲು ಅವರ ವಾಹನದ ಬಳಿಯೇ ನೆಲಕ್ಕೆ ಕುಸಿದು ಬಿದ್ದು ಪ್ರಾಣಕಳೆದುಕೊಂಡಿದ್ದಾರೆ. ಈ ದೃಶ್ಯಗಳು ಬೆಚ್ಚಿಬೀಳಿಸುವಂತಿವೆ. ಕಡೆಯದಾಗಿ, ಇನ್ನೊಂದು ವಿಚಾರ ಚರ್ಚೆಯಾಗುತ್ತಿದೆ. ಅದೇನೆಂದರೆ, ನಾಳಿನ ಅಸೆಂಬ್ಲಿ ಚುನಾವಣೆಯ ಹಿನ್ನಲೆಯಲ್ಲಿ ಟಿವಿಕೆ ಪಕ್ಷದ 'ಮುಖ್ಯ ಮಂತ್ರಿ' ಅಭ್ಯರ್ಥಿ ವಿಜಯ್ ತಮಿಳುನಾಡಿನ ತುಂಬಾ ರ‍್ಯಾಲಿಗಳನ್ನು ನಡೆಸುತ್ತಿದ್ದು, ಕರೂರು ಮೂರನೇ ರ‍್ಯಾಲಿ ಪ್ರದೇಶವಾಗಿತ್ತು. ಎಲ್ಲಿ ಹೋದರು ಜನವೋ ಜನ. ಮುಂದಿನ ಮುಖ್ಯಮಂತ್ರಿ ಘೋಷಣೆ... ತಲೈವಾ.....ಎಂಬ ಕೂಗು...! ಇದನ್ನೆಲ್ಲಾ ಗಮನಿಸಿ ಕಂಗೆಟ್ಟಿರೋ ಒಂದು ಗುಂಪು



ಆರಂಭದಲ್ಲೇ ವಿಜಯ್ ಕತೆ ಮುಗಿಸಿಬಿಡಲು ಇಂಥ ಥರ್ಡ್ ಕ್ಲಾಸ್ ತಂತ್ರ ಅನುಸರಿಸಲು ನಿರ್ಧರಿಸಿ ಮೊದಲ ಯತ್ನದಲ್ಲೇ ಯಶಸ್ಸು ಕಂಡಿದೆ ಎನ್ನಲಾಗುತ್ತಿದೆ!! ಇದು ನಿಜವೇ??!

-ಎಂ.ಕೆ.









## ಬೆಳಗಾವಿ ಮಾರ್ಕೆಟ್ ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ ಮತ್ತು ತಂಡದ ಕಾರ್ಯಾಚರಣೆ

# ಬಸ್ಸಿನಲ್ಲಿ ಪ್ರಯಾಣಿಸುವ ಮಹಿಳೆಯರ ಚಿನ್ನಾಭರಣ ಕದಿಯುತ್ತಿದ್ದ ತಮಿಳುನಾಡಿನ ಚಾಲಾಕಿ ಕಳ್ಳಿ ಅರೆಸ್ಟ್!


ಮಹಾ ಚಾಲಾಕಿ ಕಳ್ಳಿ ಮೋನಿಷಾ ಮಣಿಗಂಡನ್

**ಕುಂದಾ ನಗರಿ ಖ್ಯಾತಿಯ ಬೆಳಗಾವಿ ನೆರೆಯ ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ ರಾಜ್ಯಗಳಿಗೆ ಸಂಪರ್ಕದ ಕೊಂಡಿಯಾಗಿದೆ. ಅದಕ್ಕೆಂಬಂತೆ ಇಲ್ಲಿನ ಕೇಂದ್ರ ಬಸ್ ನಿಲ್ದಾಣದ ಸದಾ ಜನ ಜಂಗುಳಿಯಿಂದ ಗಿಜಿಗುಡುತ್ತದೆ. ಬಸ್ ಹತ್ತುವಾಗ ಮತ್ತು ಇಳಿಯುವಾಗ ಹೆಚ್ಚಾಗಿ ಮಹಿಳೆಯರನ್ನೇ ಗುರಿಯಾಗಿಸಿಕೊಂಡು, ಜನದಟ್ಟಣೆಯ ಲಾಭ ಪಡೆದುಕೊಂಡು ತಮಿಳುನಾಡು ಮೂಲದ ವೆಲ್ಲೂರಿನ 28 ವರ್ಷದ ಮಹಾ ಚಾಲಾಕಿ ಕಳ್ಳಿಯೊಬ್ಬಳು ಸದ್ದಿಲ್ಲದೇ ಚಿನ್ನಾಭರಣ ಕದ್ದು ಪರಾರಿ ಆಗುತ್ತಿದ್ದಳು. ಬಸ್ಸಿನಲ್ಲಿ ನಡೆಯುವ ಚಿನ್ನಾಭರಣ ಕಳ್ಳತನ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಇನ್ಸ್‌ಪೆಕ್ಟರ್ ಮಹಾಂತೇಶ ಅವರ ನೇತೃತ್ವದ ತನಿಖಾ ತಂಡ ತಮಿಳುನಾಡು ಮೂಲದ ಮಹಾ ಚಾಲಾಕಿ ಕಳ್ಳಿಯ ಹೆಡೆಮುರಿಕಟ್ಟಿ ಆಕೆಯಿಂದ ಕದ್ದ 5.65 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.**


ಕಮೀಷನರ್ ಭೂಷಣ ಗುಲಾಬರಾವ್ ಬೋರಸೆ


ಡಿಸಿಪಿ (ಕಾಸು) ನಾರಾಯಣ ಭರಮನಿ


ಡಿಸಿಪಿ (ಕ್ರೈಂ) ನಿರಂಜನ ರಾಜೇ ಅರಸ

**ಬೆಳಗಾವಿ**
ಮನ್ನಾಪೂರ

ನ್ಯಾಯವಾಗಿ ದುಡಿದು ತಿನ್ನುವುದಕ್ಕೆ ಹತ್ತಾರು ದಾರಿಗಳಿದ್ದರೂ ಕೂಡಾ ಇಂದು ಅನೇಕರು ಅದಕ್ಕೆ ಮುಂದಾಗುತ್ತಿಲ್ಲ. ದಿಢೀರನೇ ಹಣ ಅನಾಯಾಸವಾಗಿ ಗಳಿಸಬೇಕೆನ್ನುವ ದುಷ್ಟ ಯೋಜನೆಯನ್ನು ರೂಪಿಸಿಕೊಂಡು ಕಳ್ಳತನ, ವಂಚನೆಗೆ ಇಳಿದು ಬಿಡುತ್ತಾರೆ. ಮೊದ ಮೊದಲು ಆರಂಭದಲ್ಲಿ ಇವರ ಪ್ಲ್ಯಾನ್ ಏನೋ... ಸಕ್ಸಸ್ ಆಗಬಹುದು. ಆದರೆ ಇವರು ಬಹಳಷ್ಟು ದಿನ ಕಾನೂನಿನ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ. ಅದೊಂದು ದಿನ ಮಾಡಿದ ಕರ್ಮಫಲದಿಂದ ಪೊಲೀಸರ ಹದ್ದಿನ ಕಣ್ಣಿಗೆ ಸಿಕ್ಕುಬಿದ್ದು ಅನ್ಯಾಯವಾಗಿ ತಿಂದದ್ದು ಕಕ್ಕುವುದಲ್ಲದೇ ಇದ್ದ-ಬಿದ್ದ ಮರ್ಯಾದೆ ಕಳೆದುಕೊಂಡು ಜೈಲು ಸೇರಿ ತಂಗಳು ಮುರಿಯುತ್ತ ಕಂಬಿ ಎಣಿಸುವುದಂತೂ ನಿಶ್ಚಿತ. ತಮಿಳುನಾಡು ಮೂಲದ ವೆಲ್ಲೂರಿನ 28 ವರ್ಷದ ಸ್ಪುರದ್ರೂಪಿ ಚಾಲಾಕಿ ಕಳ್ಳಿಯೊಬ್ಬಳು ಇದಕ್ಕೆ ಉದಾಹರಣೆ ಆಗಿದ್ದಾಳೆ.

**ಮಹಾ ಚಾಲಾಕಿ ಕಳ್ಳಿ ಮೋನಿಷಾ...**


ಎಲ್ಲರಂತೆ ಮೈ ಮುರಿದು ನಡು ಬಗ್ಗಿಸಿ ನ್ಯಾಯವಾಗಿ ದುಡಿದು ತಿಂದಿದ್ದರೆ ಮೋನಿಷಾ ಮಣಿಗಂಡನ್ (28 ವ) ಸಾ: ಮನೆ ನಂ. 32, ಎಮ್.ಎಮ್. ರೆಡ್ಡಿ ಸ್ಟ್ರೀಟ್, ತಿರುಪಟ್ಟೂರ, ಜೋಲರಪಟ್ಟಿ ವೆಲ್ಲೂರ, ತಮಿಳುನಾಡು ಇವಳು ಮರ್ಯಾದೆಯಿಂದ ಬದುಕು ನಡೆಸುತ್ತಿದ್ದಳು. ಹುಟ್ಟಿನಿಂದಲೇ ವಂಚನೆಯನ್ನೇ ಒಂದು ಕಲೆಯಾಗಿರಿಸಿಕೊಂಡ ಈಕೆಗೆ ತಂದೆ-ತಾಯಿಗಳಿಲ್ಲ... ತೀರಿ ಹೋಗಿದ್ದಾರೆ. ಇನ್ನು ಗಂಡನಾದ ಮಣಿಗಂಡನ್‌ನೊಂದಿಗೆ ಮರ್ಯಾದೆಯಿಂದ ಸಂಸಾರ ನಡೆಸದೇ ಆತನೊಂದಿಗೆ ಜಗಳ ಕಾಯ್ದು ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ ಲಗ್ಗೇರಿ ಪರಿಸರದಲ್ಲಿ ವಾಸವಾಗಿದ್ದಾಳೆ. ಮೋಜು-ಮಸ್ತಿಗಾಗಿ ಇವಳಿಗೆ ಹಣ ಬೇಕಾದಾಗ ಈಕೆ ಸುಲಭವಾಗಿ ಹಣ ಗಳಿಸುವ ಮಾರ್ಗವೆಂದರೆ ಅದು ಕಳ್ಳತನವೆಂದು ತಿಳಿದುಕೊಂಡು ದಂಧೆಗೆ ಶುರುವಿಟ್ಟುಕೊಂಡಳು. ಬೆಂಗಳೂರು ಮತ್ತಿತರ ಕಡೆಗಳಲ್ಲಿ ಬಸ್ಸಿನಲ್ಲಿ ಜನದಟ್ಟಣೆಯ ಲಾಭ ಪಡೆದುಕೊಂಡು ಕಳ್ಳತನ ಮಾಡಿಕೊಂಡು ಪೊಲೀಸರಿಗೆ ಸಿಗದೇ ಜೂಟ್ ಹೇಳುತ್ತಲಿದ್ದಳು. ಆದರೆ ಇದೀಗ ಬೆಳಗಾವಿ ಮಾರ್ಕೆಟ್‌ನ ಡೈನಾಮಿಕ್ ಎಸಿಪಿ ಸಂತೋಷ ಸತ್ಯನಾಯಿಕ ನಿರ್ದೇಶನದಲ್ಲಿ ಚತುರ ಮತ್ತು ಧಾಡಸಿ ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ ಮತ್ತು ಅವರ ವಿಶೇಷ ತನಿಖಾ ತಂಡದವರ ಕೈಯಲ್ಲಿ ಸಿಕ್ಕುಬಿದ್ದು ಪಾಪದ ಲೆಕ್ಕ ಮಾಡುತ್ತಿದ್ದಾಳೆ. ಚಾಲಾಕಿ ಕಳ್ಳಿ ಬೆಳಗಾವಿ ಮಾರ್ಕೆಟ್ ಪೊಲೀಸರ ಕೈಗೆ ತಗುಲಿ ಹಾಕಿಕೊಂಡದ್ದೇ ಒಂದು ತರಹ ವಿಚಿತ್ರ ಮತ್ತು ರೋಚಕವಾಗಿದೆ.

**ಒಂದೂವರೆ ವರ್ಷದ ಹಿಂದೆ ಕಳ್ಳತನ...**

ಈಗ ಸುಮಾರು ಒಂದೂವರೆ ವರ್ಷದ ಹಿಂದಿನ ಘಟನೆಯದಾಗಿದೆ. ನಿಪ್ಪಾಣಿ ತಾಲ್ಲೂಕಿನ ಭೋಜವಾಡಿ ಗ್ರಾಮದ ನಿವಾಸಿಯಾಗಿದ್ದ ಶ್ರೀಮತಿ ಜ್ಯೋತಿ ರಾಮಗೌಡ ಪಾಟೀಲ ಅವರು ದಿನಾಂಕ 18-02-2024ರಂದು ಬೆಳಗಾವಿಗೆ ಬಂದಿದ್ದರು. ಅವರು ಬಸ್ ನಿಲ್ದಾಣದಲ್ಲಿದ್ದಾಗ ಅವರ ಚಿನ್ನಾಭರಣಗಳು ಅವರಿಗೆ ಅರಿವಿಲ್ಲದಂತೆ ಕಳ್ಳತನವಾಗಿದ್ದವು. ಈ ಕುರಿತು ಜ್ಯೋತಿ ಪಾಟೀಲ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು. ಇದೇ ದೂರನ್ನು ಆಧರಿಸಿ ತನಿಖೆಗಿಳಿದಿದ್ದ ಪೊಲೀಸರಿಗೆ ಇಂತಹ ಕಳ್ಳತನದ ಮತ್ತಷ್ಟು ಪ್ರಕರಣಗಳು ದಾಖಲಾಗಿರುವುದು ಕಂಡು ಬಂದಿತ್ತು.

**ಸವಾಲಾಗಿ ಸ್ವೀಕರಿಸಿದ ಪ್ರಕರಣ...**

ಬೆಳಗಾವಿ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಹಲವು ಕಳ್ಳತನದ ಪ್ರಕರಣಗಳು ದಾಖಲಾದ ಕಾರಣ ಎಸಿಪಿ ಸಂತೋಷ ಸತ್ಯನಾಯಿಕ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಬದಲಾಗಿ ಮಾರ್ಕೆಟ್ ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ ಮತ್ತು ಕ್ರೈಂ ವಿಭಾಗದ ಸಿಬ್ಬಂದಿಗಳನ್ನು ಕರೆಯಿಸಿಕೊಂಡು ಪ್ರಕರಣದ ಗಂಭೀರತೆ ಬಗ್ಗೆ ಹೇಳುವುದಲ್ಲದೇ ಆದಷ್ಟು ಬೇಗನೇ ತನಿಖೆ ಚುರುಕುಗೊಳಿಸಬೇಕು. ಬಸ್ ನಿಲ್ದಾಣದಲ್ಲಿನ ಸಿಸಿಟಿವಿಗಳ ದೃಶ್ಯಾವಳಿ ಪರಿಶೀಲಿಸಿ ಆದಷ್ಟು ಬೇಗನೆ ಚಿನ್ನಾಭರಣ ಕಳ್ಳರನ್ನು ಬಂಧಿಸಲು ನಿರ್ದೇಶನ ನೀಡುವುದರ ಜತೆಗೆ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಲು ಇನ್ಸ್‌ಪೆಕ್ಟರ್ ಮಹಾಂತೇಶರಿಗೆ ಹೇಳಿದರು. ಸದರಿ ಕಳ್ಳತನ ಪ್ರಕರಣಗಳ ಕುರಿತು ಪೊಲೀಸ್ ಕಮೀಷನರ್ ಭೂಷಣ ಬೋರಸೆ, ಡಿಸಿಪಿ (ಕಾ.ಸು) ನಾರಾಯಣ ಭರಮನಿ, ಡಿಸಿಪಿ (ಕ್ರೈಂ) ನಿರಂಜನ ರಾಜೇ ಅರಸ ಅವರೊಂದಿಗೆ ಎಸಿಪಿ ಸಂತೋಷ ಸತ್ಯನಾಯಿಕ ಸಮಾಲೋಚನೆ ನಡೆಸಿ ಇದಕ್ಕಾಗಿ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿ ಕಾರ್ಯಾಚರಣೆ ನಡೆಸಲು ಸೂಚಿಸಿದರು.


ಎಸಿಪಿ ಸಂತೋಷ ಸತ್ಯನಾಯಿಕ


ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ

**ವಿಶೇಷ ತನಿಖಾ ತಂಡದ ಕಾರ್ಯಾಚರಣೆ...**

ಅಂದುಕೊಂಡಂತೆ ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ ನೇತೃತ್ವದಲ್ಲಿ ಕ್ರೈಂ ಪಿಎಸ್‌ಐ ಹೆಚ್.ಎಲ್. ಕೆರೂರ, ಚತುರ ಮತ್ತು ಧಾಡಸಿ ಸಿಬ್ಬಂದಿಗಳಾದ ನವೀನ ಕುಮಾರ ಎ.ಬಿ., ಎಲ್.ಎಸ್. ಕಡೋಲ್ಕರ, ಆಸೀರ್ ಜಮಾದಾರ, ಎಸ್.ಎಂ. ಕಾಂಬಳೆ, ಕಾರ್ತಿಕ್ ಜಿ.ಎಂ., ಎಂ.ಬಿ. ವಡೇಯರ್, ಮಲ್ಲಿಕಾರ್ಜುನ ಗುದಗೊಪ್ಪ ಮತ್ತು ತಾಂತ್ರಿಕ ವಿಭಾಗದ ಸಿಬ್ಬಂದಿಗಳಾದ ರಮೇಶ ಅಕ್ಕಿ, ಮಹಾದೇವ ಕಾಶೀದ್ ಅವರನ್ನೊಳಗೊಂಡ ವಿಶೇಷ ತನಿಖಾ ತಂಡ ಕಾರ್ಯಾಚರಣೆಗೆ ಇಳಿಯಿತು.

**ಸಿಕ್ಕುಬಿದ್ದ ಚಾಲಾಕಿ ಕಳ್ಳಿ...**

ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ವಿಶೇಷ ತನಿಖಾ ತಂಡ ಪರಿಶೀಲಿಸಿದಾಗ ಮಹಾ ಚಾಲಾಕಿ ಮೋನಿಷಾಳ ಚಲನವಲನಗಳು ಅಪಾಯಕಾರಿಯಾಗಿ ಪತ್ತೆಯಾಗಿವೆ. ಇದೇ ಆಧಾರದಲ್ಲಿ ಸಂಶಯಾಸ್ಪದವಾಗಿ ಓಡಾಡಿಕೊಂಡಿದ್ದ ಮನಿಷಾ ಮಣಿಗಂಡನ್ ಅವಳನ್ನು ದಿನಾಂಕ 12-09-2025ರಂದು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಆಕೆಯ ಕಳ್ಳತನಗಳು ಬಯಲಾಗಿವೆ. ವಂಚಕಿ ಮೋನಿಷಾ ಬೆಂಗಳೂರು ಮತ್ತಿತರ ಕಡೆ ಬಸ್ ನಿಲ್ದಾಣಗಳಲ್ಲಿ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಈಕೆಯ ಬಂಧನದಿಂದ ಕಳ್ಳತನ ಪ್ರಕರಣಗಳಿಗೆ ಬ್ರೆಕ್ ಬಿದ್ದಿದೆ. ಪ್ರಯಾಣಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

**ಹಿರಿಯ ಅಧಿಕಾರಿಗಳಿಂದ ಶ್ಲಾಘನೆ...**

ಮಹಿಳಾ ಪ್ರಯಾಣಿಕರಿಗೆ ಕಂಟಕಪ್ರಾಯವಾಗಿದ್ದ ತಮಿಳುನಾಡು ಮೂಲದ ಚಾಲಾಕಿ ಕಳ್ಳಿಯ ಮೋನಿಷಾಳನ್ನು ಬಂಧಿಸುವಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ ಮಾರ್ಕೆಟ್ ಇನ್ಸ್‌ಪೆಕ್ಟರ್ ಮಹಾಂತೇಶ ಧಾಮಣ್ಣವರ, ಕ್ರೈಂ ಪಿಎಸ್‌ಐ ಹೆಚ್.ಎಲ್. ಕೆರೂರ ಮತ್ತು ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಪೊಲೀಸ್ ಕಮೀಷನರ್ ಭೂಷಣ ಬೋರಸೆ, ಡಿಸಿಪಿ (ಕಾ.ಸು) ನಾರಾಯಣ ಭರಮಿ, ಡಿಸಿಪಿ (ಕ್ರೈಂ) ನಿರಂಜನ ರಾಜೇ ಅರಸ, ಎಸಿಪಿ ಸಂತೋಷ ಸತ್ಯನಾಯಿಕ ಅವರುಗಳು ಶ್ಲಾಘಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.


ಮಹಾ ಚಾಲಾಕಿ ಕಳ್ಳಿಯಿಂದ ಕದ್ದ 5.65 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡ ಮಾರ್ಕೆಟ್ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು




# ವೇಶ್ಯೆಯ ಪಾದಗಳಿಗೆರಗಿದ ಚಕ್ರವತಿ....

ಒಂದು ಸಂಜೆ, ಮಳೆಗಾಲದಲ್ಲಿ, ಅಶೋಕನು ಪಾಟ್ನಾದ ಪಾಟಲಿಪುತ್ರದಲ್ಲಿ ಗಂಗಾನದಿಯ ದಡದಲ್ಲಿ ನಿಂತಿದ್ದಾನೆ. ಗಂಗೆಯಲ್ಲಿ ಭೀಕರ ಪ್ರವಾಹ. ಗಂಗೆ ತನ್ನ ಗಡಿಗಳನ್ನು ಮುರಿದು ಹರಿಯುತ್ತಿದ್ದಾಳೆ. ಅದರ ರೂಪ ತುಂಬಾ ದೊಡ್ಡದಾಗಿದೆ; ಅದರ ರೂಪವು ವಿನಾಶದ ಭಯಾನಕ ನೃತ್ಯವಾಗಿದೆ. ಅದು ಎಷ್ಟು ಹಳ್ಳಿಗಳನ್ನು ಕೊಚ್ಚಿ ಹಾಕಿದೆ ಎಂದು ದೇವರಿಗೆ ತಿಳಿದಿದೆ. ಅದು ಎಷ್ಟು ಹೊಲಗಳನ್ನು ನಾಶಮಾಡಿದೆ, ಎಷ್ಟು ಪ್ರಾಣಿಗಳು ಮತ್ತು ಪಕ್ಷಿಗಳು ಹರಿಯುತ್ತಿವೆ ಎಂದು ದೇವರಿಗೆ ತಿಳಿದಿದೆ. ಅಶೋಕನು ತನ್ನ ಮಂತ್ರಿಗಳೊಂದಿಗೆ ನಿಂತಿದ್ದಾನೆ. ಮತ್ತು ಅದು ಸಾಧ್ಯವೇ, ಗಂಗೆ ವಿರುದ್ಧ ದಿಕ್ಕಿನಲ್ಲಿ ಹರಿಯಲು ಯಾವುದೇ ಮಾರ್ಗವಿದೆಯೇ ಎಂದು ಅವನು ಕೇಳಿದನು? ಇದ್ದಕ್ಕಿದ್ದಂತೆ ಅವನ ಮನಸ್ಸಿಗೆ ಬಂದ ಆಲೋಚನೆ ಅದು ಗಂಗೆ ತನ್ನ ಮೂಲದ ಕಡೆಗೆ ವಿರುದ್ಧ ದಿಕ್ಕಿನಲ್ಲಿ ಹರಿಯಲು ಯಾವುದೇ ಮಾರ್ಗವಿದೆಯೇ? ಮಂತ್ರಿಗಳು ಹೇಳಿದರು, ಅಸಾಧ್ಯ. ಮತ್ತು ಒಂದು ಪ್ರಯತ್ನ ಮಾಡಿದರೂ ಅದು ತುಂಬಾ ಕಷ್ಟ. ಅಶೋಕನೊಂದಿಗೆ ಒಬ್ಬ ವೇಶ್ಯೆಯೂ ಗಂಗಾನದಿಯ ದಡಕ್ಕೆ ಬಂದಿದ್ದಾಳೆ. ಅವಳು ನಗರದ ಅತಿದೊಡ್ಡ ವೇಶ್ಯೆ. ಆ ದಿನಗಳಲ್ಲಿ, ವೇಶ್ಯೆಯರನ್ನು ಸಹ ಬಹಳ ಗೌರವಿಸಲಾಗುತ್ತಿತ್ತು. ಅವಳು ವೇಶ್ಯೆ. ಆ ವೇಶ್ಯೆಯ ಹೆಸರು ಬಿಂದುಮತಿ. ಅವಳು ನಗಲು ಪ್ರಾರಂಭಿಸಿದಳು ಮತ್ತು ನೀವು ನನಗೆ ಅವಕಾಶ ನೀಡಿದರೆ, ನಾನು ಅದನ್ನು ಹಿಂದಕ್ಕೆ ಹರಿಯುವಂತೆ ಮಾಡಬಲ್ಲೆ ಎಂದು ಹೇಳಿದಳು.

ಅಶೋಕ ಆಘಾತಕ್ಕೊಳಗಾದನು. ಅವನು, ದಾರಿ ಏನು? ಅದನ್ನು ಹಿಂದಕ್ಕೆ ಹರಿಯುವಂತೆ ಮಾಡುವ ಮಾರ್ಗ ಯಾವುದು? ನಿಮ್ಮಲ್ಲಿ ಯಾವ ರೀತಿಯ ಕಲೆ ಇದೆ? ಆದ್ದರಿಂದ ಆ ವೇಶ್ಯೆ, ನನ್ನ ಗೌಪ್ಯತೆಯ ಸತ್ಯ ಎಂದು ಹೇಳಿದಳು.

ಇದು ಬಹಳ ವಿಶಿಷ್ಟವಾದ ಕಥೆ. ಅವಳು ಹೇಳಿದಳು, ನನ್ನ ಗೌಪ್ಯತೆಯ ಸತ್ಯ, ನನ್ನ ಜೀವನದ ಸತ್ಯ ನನ್ನ ಶಕ್ತಿ. ನಾನು ಅದನ್ನು ಎಂದಿಗೂ ಬಳಸಿಲ್ಲ, ನನ್ನೊಳಗೆ ನನ್ನ ಜೀವನದ ಸತ್ಯದ ಬಹಳಷ್ಟು ಶಕ್ತಿ ಇದೆ. ನೀವು ಹೇಳಿದರೆ, ಈ ಗಂಗೆ ಹಿಂದಕ್ಕೆ ಹರಿಯುತ್ತದೆ, ಅದು ನನ್ನ ಮಾತಿನ ಮೇಲೆ ಹರಿಯುತ್ತದೆ. ನನಗೆ ಇದರಲ್ಲಿ ಪೂರ್ಣ ನಂಬಿಕೆ ಇದೆ. ಏಕೆಂದರೆ ನಾನು ನನ್ನ ಸತ್ಯದಿಂದ ಎಂದಿಗೂ ವಿಚಲಿತನಾಗಿಲ್ಲ, ಚಕ್ರವರ್ತಿ ಅದನ್ನು ನಂಬಲಿಲ್ಲ, ಆದರೆ ಅವನು, ನೋಡೋಣ ಎಂದು ಹೇಳಿದನು. ವೇಶ್ಯೆ ತನ್ನ ಕಣ್ಣುಗಳನ್ನು ಮುಚ್ಚಿದ್ದಳು; ಮತ್ತು ಕಥೆಯು ಗಂಗೆ ಹಿಂದಕ್ಕೆ ಹರಿಯಲು ಪ್ರಾರಂಭಿಸಿದಳು ಎಂದು ಹೇಳುತ್ತದೆ. ಚಕ್ರವರ್ತಿ ವೇಶ್ಯೆಯ ಪಾದಗಳಿಗೆ ಬಿದ್ದು ಹೇಳಿದನು,

ಬಿಂದುಮತಿ... ನೀನು ವೇಶ್ಯೆಯಲ್ಲದೆ ಬೇರೆ ಯವರೆಂದು ನಮಗೆ ಎಂದಿಗೂ ತಿಳಿದಿರಲಿಲ್ಲ, ಈ ರಹಸ್ಯ, ಈ ರಹಸ್ಯವನ್ನು ನೀನು ಎಲ್ಲಿ ಕಲಿತೆ? ಮಹಾನ್ ಸಾಧನೆ ಮಾಡಿದ ಪುರುಷರು ಸಹ ಇದನ್ನು ಮಾಡಲು ಸಾಧ್ಯವಿಲ್ಲ,

ಆ ವೇಶ್ಯೆ ಹೇಳಿದಳು, ನನಗೆ ಯಾವುದೇ ಪರಿಪೂರ್ಣ ಪುರುಷರ ಪರಿಚಯವಿಲ್ಲ, ನಾನು ಪರಿಪೂರ್ಣ ವೇಶ್ಯೆ. ಮತ್ತು ಅದು ನನ್ನ ಜೀವನದ ಸತ್ಯ.

ನಿಮ್ಮ ಜೀವನದ ಸತ್ಯವೇನು, ನನಗೆ ಮುಕ್ತವಾಗಿ ಹೇಳಿ, ಅಶೋಕ್ ಹೇಳಿದರು. ಅವಳು ಹೇಳಿದಳು, ನನ್ನ ಜೀವನದ ಸತ್ಯವೆಂದರೆ ನನಗೆ ತಿಳಿದಿದೆ, ವೇಶ್ಯೆಯಾಗುವುದು ನನ್ನ ಜೀವನ ವಿಧಾನ, ಅದು ನನ್ನ ಹಣೆಬರಹ. ಇಲ್ಲದಿದ್ದರೆ ನಾನು ಎಂದಿಗೂ ಬೇರೇನೂ ಆಗಲು ಬಯಸಲಿಲ್ಲ, ನನ್ನೊಳಗೆ ಬೇರೆ ಯಾವುದರ ಆಸೆಯೂ ಬರಲು ನಾನು ಎಂದಿಗೂ ಬಿಡಲಿಲ್ಲ, ನಾನು ಸಂಪೂರ್ಣ, ನಾನು ತಲೆಯಿಂದ ಕಾಲಿನವರೆಗೆ ವೇಶ್ಯೆ. ನನ್ನ ಅಸ್ತಿತ್ವದ ಪ್ರತಿಯೊಂದು ನಾರು ವೇಶ್ಯೆ. ಮತ್ತು ನಾನು ಎಂದಿಗೂ ವೇಶ್ಯೆಯ ಧರ್ಮದಿಂದ ವಿಮುಖನಾಗಿಲ್ಲ,

ಅಶೋಕ ಕೇಳಿದನು, ವೇಶ್ಯೆಯ ಧರ್ಮ ಯಾವುದು? ಮೂರ್ಖ, ವೇಶ್ಯೆಗೆ ಯಾವುದೇ ಧರ್ಮವಿದೆ ಎಂದು ನಾನು ಎಂದಿಗೂ ಕೇಳಿಲ್ಲ, ನಾವು ವೇಶ್ಯೆಯನ್ನು ಧರ್ಮವಿರೋಧಿ ಎಂದು ಪರಿಗಣಿಸುತ್ತೇವೆ. ಮತ್ತು ನೀವು ಎಷ್ಟೇ ಸುಂದರವಾಗಿದ್ದರೂ, ನಿಮ್ಮೊಳಗೆ ಆಳವಾದ ಕೊಳಕು ಇರುತ್ತದೆ ಎಂದು ನಾನು ನಂಬುತ್ತಿದ್ದೆ, ಏಕೆಂದರೆ ನೀವು ನಿಮ್ಮ ದೇಹವನ್ನು ಮಾರುತ್ತಿದ್ದೀರಿ, ನಿಮ್ಮ ಸೌಂದರ್ಯವನ್ನು ಮಾರುತ್ತಿದ್ದೀರಿ. ಇದಕ್ಕಿಂತ ಸಣ್ಣ ವೃತ್ತಿ ಇನ್ನೊಂದಿಲ್ಲ!

ಆ ವೇಶ್ಯೆ ಹೇಳಿದಳು, ವ್ಯವಹಾರಗಳು ಚಿಕ್ಕದಲ್ಲ ಅಥವಾ ದೊಡ್ಡದಲ್ಲ, ಎಲ್ಲವೂ ಉದ್ಯಮಿಯ ಮೇಲೆ ಅವಲಂಬಿತವಾಗಿರುತ್ತದೆ. ನನ್ನ ಜೀವನದ ಸತ್ಯವೆಂದರೆ, ನನ್ನನ್ನು ವೇಶ್ಯೆಯನ್ನಾಗಿ ಮಾಡಲು ಕಲಿಸಿ ದೀಕ್ಷೆ ನೀಡಿದ ನನ್ನ ಗುರುಗಳು, ನೀವು ಒಂದೇ ಒಂದು ತತ್ವವನ್ನು ಅನುಸರಿಸಿದರೆ, ನಿಮ್ಮ ಮೋಕ್ಷವನ್ನು ಎಂದಿಗೂ ನಿಮ್ಮಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದರು. ಮತ್ತು ಆ ತತ್ವವೆಂದರೆ ಶ್ರೀಮಂತ ವ್ಯಕ್ತಿ ಬಂದರೂ ಅಥವಾ ಬಡವ ಬಂದರೂ; ಶೂದ್ರ ಬಂದರೂ ಅಥವಾ ಬ್ರಾಹ್ಮಣ ಬಂದರೂ; ಸುಂದರ ವ್ಯಕ್ತಿ ಬಂದರೂ ಅಥವಾ ಕೊಳಕು ಬಂದರೂ; ಯುವಕ ಬಂದರೂ ಅಥವಾ ಕುಷ್ಠರೋಗಿ ಬಂದರೂ ಅಥವಾ ರೋಗಿಯು ಬಂದರೂ; ಯಾರು ನಿಮಗೆ ಹಣ ನೀಡುತ್ತಾರೋ, ನೀವು ಹಣದ ಮೇಲೆ ಗಮನಹರಿಸಬೇಕು ಮತ್ತು ಜನರನ್ನು ಸಮಾನವಾಗಿ ನಡೆಸಿಕೊಳ್ಳಬೇಕು. ನೀವು ಕುಷ್ಠರೋಗಿ ಅಥವಾ ರೋಗಿಗಳನ್ನು ದ್ವೇಷಿಸಬಾರದು, ಅಥವಾ ಸುಂದರಿಯನ್ನು ಪ್ರೀತಿಸಬಾರದು. ಅದು ವೇಶ್ಯೆಯ ಕೆಲಸವಲ್ಲ, ನೀವು ತಟಸ್ಥರಾಗಿರಬೇಕು. ನಿಮ್ಮ ಕೆಲಸ ಹಣವನ್ನು ತೆಗೆದುಕೊಳ್ಳುವುದು. ಅಷ್ಟೆ, ವಿಷಯ ಮುಗಿದಿದೆ. ನಿಮ್ಮ ಗಮನ ಹಣದ ಮೇಲೆ ಇರಬೇಕು. ಬ್ರಾಹ್ಮಣ ಬಂದರೆ, ಅತಿಯಾದ ಭಾವನೆಯಿಂದ ಅವನ ಪಾದಗಳನ್ನು ಮುಟ್ಟಬೇಡಿ. ಮತ್ತು ಶೂದ್ರ ಬಂದರೆ, ಅವನನ್ನು ನಿರಾಕರಿಸಬೇಡಿ. ನಿಮ್ಮ ಕೆಲಸ ಹಣ. ವೇಶ್ಯೆಯ ಗಮನ ಹಣದ ಮೇಲೆ. ಬೇರೆ ಯಾರೇ ಬಂದರೂ, ನೀವು ಸಮಚಿತ್ತರಾಗಿರಬೇಕು. ಅದು ನಿಮ್ಮ ಸಮ್ಯಕ್ತ್ವ

ಅದು ನಿಮ್ಮ ಸತ್ಯ.

ಮತ್ತು ನಾನು ಅದನ್ನು ನೋಡಿಕೊಂಡಿದ್ದೇನೆ. ನಾನು ಯಾರನ್ನೂ ಪ್ರೀತಿಸಿಲ್ಲ, ವಾತ್ಸಲ್ಯ ತೋರಿಸಿಲ್ಲ, ಯಾರ ಬಗ್ಗೆಯೂ ಬಾಂಧವ್ಯ ಅಥವಾ ಬಾಂಧವ್ಯವನ್ನು ಬೆಳೆಸಿಕೊಂಡಿಲ್ಲ, ನಾನು ಯಾರನ್ನೂ ದ್ವೇಷಿಸಿಲ್ಲ, ಯಾರ ಬಗ್ಗೆಯೂ ಅಸಹ್ಯಪಟ್ಟಿಲ್ಲ, ನಾನು ಯಾವಾಗಲೂ ದೂರ ಮತ್ತು ತಟಸ್ಥನಾಗಿ ನಿಂತಿದ್ದೇನೆ. ☯

10 ☞

ಇಂಡಿಯಾ ಪಾಕಿಸ್ತಾನದ ಆಟಗಾರರ ಕೈ ಕುಲುಕದ್ದು ದೊಡ್ಡ ವಿವಾದವಾಗಿತ್ತಲ್ಲ, ಇದು ಪಾಕಿಸ್ತಾನ ತಂಡಕ್ಕೆ ದೊಡ್ಡ ರೀತಿಯಲ್ಲಿ ಅವಮಾನ ಮಾಡಿದಂತಾಗಿದ್ದು,

**ಪಿಸಿಬಿ ಬೇಡಿಕೆಗೆ ಒಪ್ಪದ ಐಸಿಸಿ**

ಸಿಟ್ಟಿಗೆದ್ದಿದ್ದ ಪಾಕಿಸ್ತಾನ ಕ್ರಿಕಟ್ ಮಂಡಳಿ ಪಂದ್ಯದ ರೆಫ್ರಿ ಆ್ಯಂಡಿ ಪೈಕ್ರಾಫ್ಟ್‌ಟ ಅವರನ್ನು ಏಷ್ಯಾ ಕಪ್ ಟೂರ್ನಿಯಿಂದಲೇ ವಜಾ ಮಾಡಬೇಕು ಎಂದು ಒತ್ತಾಯಿಸಿತ್ತು! ಆದರ ಐಸಿಸಿಯು ಪಾಕ್ ನ ಬೇಡಿಕೆಗೆ ಸೊಪ್ಪು ಹಾಕಲಿಲ್ಲ, ಭಾನುವಾರ ಮತ್ತೆ ಇತ್ತಂಡಗಳು ಮುಖಾಮುಖಿಯಾದಾಗ ಈ ಪಂದ್ಯ ತೀವ್ರ ಕುತೂಹಲ ಕೆರಳಿಸಿತ್ತು. ಪಾಕಿಗಳು ಸೇಡು ತೀರಿಸಿಕೊಳ್ಳೋ ತವಕದಲ್ಲಿ ಫೀಲ್ಡ್ ಗಿಳಿದರು. ನಮ್ಮವರೇನು ಕಮ್ಮಿ? ಹುಲಿಗಳಂತೆ ಗುಟುರು ಹಾಕುತ್ತ ಯುದ್ಧಕ್ಕೆ ನಿಂತರು.

**ಸಂಡೇ ಮ್ಯಾಚ್ ವಿನ್!**

ಪಾಕಿಸ್ತಾನವನ್ನು ಭಾರತ ಮತ್ತೆ ಬಗ್ಗು ಬಡಿದು ನೀರು ಕುಡಿಸಿಬಿಡ್ತಲ್ಲ! ಅಲ್ಲಿಗೆ, ಸೂಪರ್ 4 ಹಂತದ ಪಂದ್ಯದಲ್ಲಿ 6 ವಿಕೆಟ್ ಅಂತರದ ಭರ್ಜರಿ ಜಯ ದಾಖಲಿಸಿದಂತಾಯ್ತು. ದುಬೈ ಇಂಟರ್ ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಹೈವೋಲ್ಟೇಜ್ ಪಂದ್ಯದಲ್ಲಿ ಭಾರತ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಅದರಂತೆ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡ ಸಾಹಿಬ್‌ಜಾದಾ ಫರ್ಹಾನ್ (58 ರನ್) ಅರ್ಧಶತಕದ ನೆರವಿನಿಂದ ನಿಗಧಿತ 20 ಓವರ್ ನಲ್ಲಿ 5 ವಿಕೆಟ್ ನಷ್ಟಕ್ಕೆ 171ರನ್ ಪೇರಿಸಿ ಭಾರತಕ್ಕೆ ಗೆಲ್ಲಲು 172 ರನ್ ಗಳ ಸವಾಲಿನ ಗುರಿ ನೀಡಿತ್ತು.

ಪಾಕಿಸ್ತಾನ ನೀಡಿದ್ದ 172 ರನ್ ಗಳ ಸವಾಲಿನ ಗುರಿಯನ್ನು ಬೆನ್ನು ಹತ್ತಿದ ಭಾರತ ತಂಡ 18.5 ಓವರ್ ನಲ್ಲೇ ಕೇವಲ 4 ವಿಕೆಟ್ ಕಳೆದುಕೊಂಡು 174 ರನ್ ಪೇರಿಸಿ 6 ವಿಕೆಟ್ ಗಳ ಅಂತರದಲ್ಲಿ ಭರ್ಜರಿ ಜಯ ದಾಖಲಿಸಿತು. ಭಾರತದ ಪರ ಆರಂಭಿಕ ಆಟಗಾರರಾದ ಅಭಿಶೇಕ್ ಶರ್ಮಾ ಮತ್ತು ಶುಭ್ ಮನ್ ಗಿಲ್ ಭರ್ಜರಿ ಆರಂಭ ಒದಗಿಸಿದರು.

ಮೊದಲ ವಿಕೆಟ್ ಗೆ ಈ ಜೋಡಿ 105ರನ್ ಪೇರಿಸಿ ಭಾರತದ ಗೆಲುವು ಸ್ಪಷ್ಟಪಡಿಸಿದ್ದರು. ಗಿಲ್ 28 ಎಸೆತಗಳಲ್ಲಿ 8 ಬೌಂಡರಿ ಸಹಿತ 47 ರನ್ ಸಿಡಿಸಿ ಕೇವಲ 3 ರನ್ ಅಂತರದಲ್ಲಿ ಅರ್ಧಶತಕ ಮಿಸ್ ಮಾಡಿಕೊಂಡರು. ಅಂತೆಯೇ ಮತ್ತೊಂದು ಬದಿಯಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದ ಅಭಿಷೇಕ್ ಶರ್ಮಾ 39 ಎಸೆತಗಳಲ್ಲಿ 5 ಸಿಕ್ಸರ್ ಮತ್ತು 6 ಬೌಂಡರಿಗಳ ನೆರವಿನಿಂದ 74 ರನ್ ಸಿಡಿಸಿ ಅಬ್ರಾರ್ ಅಹ್ಮದ್ ಬೌಲಿಂಗ್ ನಲ್ಲಿ ಔಟಾದರು.

ನಾಯಕ ಸೂರ್ಯಕುಮಾರ್ ಗಿಲ್ ಕಳೆದ ಪಂದ್ಯದಲ್ಲಿ ಕೊನೆಯ ಕ್ರಮಾಂಕದಲ್ಲೂ ಬ್ಯಾಟಿಂಗ್ ಗೆ ಬಂದಿರಲಿಲ್ಲ, ಆದರೆ ಇಂದಿನ ಪಂದ್ಯದಲ್ಲಿ 2ನೇ ಕ್ರಮಾಂಕದಲ್ಲೇ ಬ್ಯಾಟಿಂಗ್ ಗೆ ಬಂದರಾದರೂ ಬಂದಷ್ಟೇ ವೇಗವಾಗಿ ಶೂನ್ಯಸುತ್ತಿ ಹ್ಯಾರಿಸ್ ರೌಫ್ ಗೆ ವಿಕೆಟ್ ಒಪ್ಪಿಸಿದರು. ಬಳಿಕ ತಿಲಕ್ ವರ್ಮಾ (ಅಜೇಯ 30), ಸಂಜು ಸ್ಯಾಮ್ಸನ್ (13 ರನ್) ಮತ್ತು ಹಾರ್ದಿಕ್ ಪಾಂಡ್ಯ (7) ಗೆಲುವಿನ ಔಪಚಾರಿಕತೆ ಮುಗಿಸಿದರು.

ಗಮನಿಯ ಸಂಗತಿ ಏನೆಂದರೆ, ಮತ್ತೆ ಪಾಕ್ ಅನ್ನು ಬಗ್ಗು ಬಡಿದ ನಮ್ಮ ಆಟಗಾರರು, ಈಗಲೂ ಕೂಡ ಹಸ್ತ ಲಾಘವ ನೀಡದೆ ಡೋಂಟ್ ಕೇರ್ ನೋಟ ಬೀರಿ ರೂಮ್ಸ್ ಸೇರಿಕೊಂಡರು!! ನಂತರ 28-09-2025 ಭಾನುವಾರ ಇಂಡಿಯಾ-ಪಾಕಿಸ್ತಾನ್ ನಡುವೆ ಫೈನಲ್ ಮ್ಯಾಚ್ ಹಣಾಹಣಿ ನಡೆದು, ಇವತ್ತೂ ಸಹ ನಮ್ಮ ಹುಲಿಗಳೇ ಘರ್ಜಿಸಿ'ಚಾಂಪಿಯನ್ಸ್' ಆಗಿದ್ದಾರೆ. ನಮ್ಮವರು ಸದ್ಯಕ್ಕೆ ಸಮಾಧಾನಗೊಳ್ಳುವಂತೆ ಕಾಣಿಸುತ್ತಿಲ್ಲ....!!! ☯

11 ☞

ಹಿನ್ನೆಲೆಗಳಲ್ಲಿ ತನಿಖೆ ನಡೆಸಿದಂತಹ ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಅವರು ಸೆಪ್ಟಂಬರ್ 17ರಂದು ಮಹೇಶ್ ಶೆಟ್ಟಿ ತಿಮರೋಡಿಯವರನ್ನು ಒಂದು ವರ್ಷದ ಕಾಲ ರಾಯಚೂರು ಜಿಲ್ಲೆಯ ಸಿಂದಗಿ ತಾಲೂಕಿನ ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಿದ್ದಾರೆ.


ಟಿ. ಜಯಂತ್

ಈ ಗಡಿಪಾರು ಆದೇಶಕ್ಕೂ ಸೌಜನ್ಯ ಪ್ರಕರಣದ ಹೋರಾಟಕ್ಕೂ ಯಾವುದೇ ಸಂಬಂಧ ಇಲ್ಲ, ಆದರೂ ತಿಮರೋಡಿ ಬೆಂಬಲಿಗರು ಈ ಗಡಿಪಾರು ಆದೇಶವು ರಾಜ್ಯ ಸರಕಾರದ ಎಸ್ ಐಟಿ ತನಿಖೆ ಮತ್ತು ಸೌಜನ್ಯ ಪ್ರಕರಣವನ್ನು ಹತ್ತಿಕ್ಕಲು ನಡೆಸಿದ ಷಡ್ಯಂತ್ರ ಎಂದೇ ಪ್ರಚಾರ ಮಾಡುತ್ತಿದ್ದಾರೆ.

**ಬುರುಡೆಮ್ಯಾನ್ ವಿಚಾರಣೆ**

ಬುರುಡೆ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದ ತಮಿಳುನಾಡಿನ ಚಿನ್ನಯ್ಯ ಸದ್ಯ ಆರೋಪಿಯಾಗಿ ಶಿವಮೊಗ್ಗ ಜೈಲಿನಲ್ಲಿದ್ದಾನೆ. ಈತ ಈ ಹಿಂದೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಬುರುಡೆ ಸಹಿತ ವಕೀಲರೊಂದಿಗೆ ಹಾಜರಾಗಿದ್ದ ಸಂದರ್ಭದಲ್ಲಿ ನ್ಯಾಯಾಧೀಶರ ಎದುರು ಬಿಎನ್‌ಎಸ್‌ಎಸ್ 183ರ ಅಡಿಯಲ್ಲಿ ಹೇಳಿಕೆಯನ್ನು ದಾಖಲಿಸಿದ್ದ. ಈ ಹೇಳಿಕೆಯ ಆಧಾರದಲ್ಲಿ ರಾಜ್ಯ ಸರಕಾರ ಎಸ್‌ಐಟಿ ರಚಿಸಿತ್ತು. ಬುರುಡೆ ಚಿನ್ನಯ್ಯನ ಹೇಳಿಕೆಯನ್ನೇ ಆಧರಿಸಿ ಎಸ್‌ಐಟಿ 17 ಕಡೆಗಳಲ್ಲಿ ಉತ್ಖನನ ನಡೆಸಿತ್ತು. ಚಿನ್ನಯ್ಯ ಗುರುತಿಸಿದ್ದ 6ನೇ ಸ್ಪಾಟ್ ಮತ್ತು 11ಎ ಸ್ಪಾಟ್ ಗಳಲ್ಲಿ ಗಂಡಸಿನ ಕಳೆಬರದ ಅವಶೇಷಗಳು ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ದೂರುದಾರನಾಗಿದ್ದ ಚಿನ್ನಯ್ಯನನ್ನು ಆರೋಪಿಯಾಗಿ ಪರಿಗಣಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ 15 ದಿನಗಳ ಎಸ್‌ಐಟಿ ಕಸ್ಟಡಿಗೆ ಪಡೆದುಕೊಂಡು ವಿಚಾರಣೆಗೆ ಗುರಿಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಬುರುಡೆಯ ಹಿನ್ನೆಲೆಯನ್ನು ಶೋಧಿಸಲಾಗಿತ್ತು. ಈ ಬುರುಡೆಯನ್ನು ಧರ್ಮಸ್ಥಳ ನೇತ್ರಾವತಿ ಸ್ನಾನಘಟ್ಟದ ಬಳಿಯ ಬಂಗ್ಲಗುಡ್ಡೆಯಿಂದ ಸೌಜನ್ಯ ಮಾವ ವಿಠಲಗೌಡ ಸಂಗ್ರಹಿಸಿದ್ದು, ಅದನ್ನು ಗಿರೀಶ್ ಮಟ್ಟಣ್ಣನವರಿಗೆ ನೀಡಿದ್ದ. ಅವರು ಅದನ್ನು ಟಿ. ಜಯಂತ್‌ಗೆ ಕೊಟ್ಟಿದ್ದರು. ಆತ ತನ್ನ ಬೆಂಗಳೂರಿನ ಮನೆಯಲ್ಲಿ ಇಟ್ಟಿದ್ದ. ಅಲ್ಲಿಗೆ ಬಂದಿದ್ದ ಚಿನ್ನಯ್ಯನಿಗೆ ಈ ಬುರುಡೆಯನ್ನು ಹಸ್ತಾಂತರಿ ಸಲಾಗಿತ್ತು. ಈ ವಿಚಾರ ಬೆಳಕಿಗೆ ಬರುತ್ತಿದ್ದಂತೆಯೇ ಎಸ್‌ಐಟಿ ಅಧಿಕಾರಿಗಳು ಆ ಮೂವರಿಗೂ ನೋಟೀಸು ನೀಡಿ ವಿಚಾರಣೆ ನಡೆಸಿದ್ದಾರೆ. ವಿವಿಧ ಸ್ಥಳಗಳಲ್ಲಿ ಮಹಜರು ಪ್ರಕ್ರಿಯೆಗಳನ್ನು ನಡೆಸಿದ್ದಾರೆ.

ಬುರುಡೆ ಮ್ಯಾನ್ ಚಿನ್ನಯ್ಯ ಈಗಾಗಲೇ ಎರಡು ಬಾರಿ ಬಿಎನ್‌ಎಸ್‌ಎಸ್ 183 ಅಡಿ ಹೇಳಿಕೆ ದಾಖಲಿಸಿದ್ದಾನೆ. ಈ ಹೇಳಿಕೆಯನ್ವಯ ಎಸ್‌ಐಟಿ ಅಧಿಕಾರಿಗಳು ತನಿಖೆ ನಡೆಸಿದ್ದು, ಆತನ ಹೇಳಿಕೆ ಸುಳ್ಳು ಎಂಬ ಅಂಶ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಎಸ್‌ಐಟಿ ಅಧಿಕಾರಿಗಳು ನ್ಯಾಯಾಧೀಶರಿಗೆ ವರದಿ ನೀಡಿದ್ದು, ಚಿನ್ನಯ್ಯನ ಮೂರನೇ ಬಾರಿ ತಪ್ಪೊಪ್ಪಿಗೆ ಹೇಳಿಕೆಯನ್ನು ದಾಖಲಿಸಲಾಗಿದೆ. ಇನ್ನು ಮುಂದಿನ ತನಿಖೆ ಈ ಹೇಳಿಕೆಯನ್ವಯ ನಡೆಯಲಿದ್ದು, ಹಲವು ಮಂದಿ ಎಸ್‌ಐಟಿ ವಿಚಾರಣೆಗೆ ಒಳಗಾಗಲಿದ್ದಾರೆ. ☯


# ಭ್ರಷ್ಟ ಪೊಲೀಸರು ಇವರೇ ನೋಡ್ರಿ!

7 ☞ ಮೊಬೈಲ್ ಪರಿಶೀಲಿಸಿದಾಗ ಆ ಡ್ರಗ್ಸ್ ದಂಧೆಗೆ ಅಂಟಿಕೊಂಡಿದ್ದ ಖಾಕಿ ನಂಟು ಬಯಲಾಗಿತ್ತು! ಕಳ್ ಮಂಜಣ್ಣ ಮತ್ತವರ ಟೀಮ್ ಈ ಡ್ರಗ್ಸ್ ಪೆಡ್ಲರ್‌ಗಳ ಜತೆ ಪಾರ್ಟಿ ನಡೆಸಿರುವ ಫೋಟೋಗಳು ಮೊಬೈಲ್ ತುಂಬಾ ಕುಂತಿದ್ದಾವಂತೆ!

ಇತ್ತ ಜೆ.ಜೆ. ನಗರದ ಎಎಸ್‌ಐ ಕುಮಾರ್ ಮತ್ತು ಮಿತ್ರವೃಂದವನ್ನು ಅಟಕಾಯಿಸಿಕೊಂಡು ಬೆಂಡ್ ಎತ್ತಿದ್ದ ಎಸಿಪಿ ಚಂದನ್ ಅವರಿಗೆ ಎಲ್ಲಾ ಎವಿಡೆನ್ಸ್ ಸಿಕ್ಕಿದ್ದು, ಅವರುಹಾಗೂ ಎಸಿಪಿ ಭರತ್ ರೆಡ್ಡಿ ಡಿಸಿಪಿ ಎಸ್. ಗಿರೀಶ್ ಅವರಿಗೆ ವರದಿ ಸಲ್ಲಿಸಿದ್ದರು. ಈ ವರದಿಗಳನ್ನು ಪರಿಶೀಲಿಸಿದ ಡಿಸಿಪಿ ಎಸ್. ಗಿರಿಶ್ ಅವರು ಸಿಪಿ ಸಿಂಗ್ ಸಾಹೇಬರಿಗೆ ಕಳುಹಿಸಿ, ಡ್ರಗ್ಸ್ ದಂಧೆಯಲ್ಲಿ ಭಾಗಿಯಾಗಿರುವ ಖಾಕಿ ಕುಳರನ್ನು ಸಸ್ಪೆಂಡ್ ಮಾಡಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ಕೋರಿದ್ದರು. ವರದಿ ಪರಿಶೀಲಿಸಿದ ಸಿಪಿ ಸಿಂಗ್ ಅವರುಕೂಡಲೇ ಚಾಮರಾಜಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಟಿ.ಮಂಜಣ್ಣನನ್ನು ಸಸ್ಪೆಂಡ್ ಮಾಡಿದ್ದಾರೆ. ಉಳಿದ ಭ್ರಷ್ಟರನ್ನು ಡಿಸಿಪಿ ಎಸ್. ಗಿರೀಶ್‌ರವರು ಅಮಾನತುಗೊಳಿಸಿದ್ದಾರೆ! ಇಲಾಖಾ ವಿಚಾರಣೆ ಇನ್ನೂ ಬಾಕಿ ಇದೆ!!

**ಒಂದು ಟೈಡೆಲ್ ಮಾತ್ರೆ 400 ರೂ. ಅಂತೇ!**

ಬಂಧಿತ ಡ್ರಗ್ಸ್ ಪೆಡ್ಲರ್ಸ್ ಬ್ಯಾಟರಾಯನಪುರ, ಚಾಮರಾಜಪೇಟೆ ಹಾಗೂ ಜೆ.ಜೆ. ನಗರ ಠಾಣಾ ವ್ಯಾಪ್ತಿಯ ಗೋರಿಪಾಳ್ಯ ಮುಂತಾದ ಕಡೆ ತಮ್ಮ ದಂಧೆ ನಡೆಸುತ್ತಿದ್ದರು ಎನ್ನಲಾಗಿದೆ. ಇವರು ಹೆಚ್ಚಾಗಿ ಟೈಡಲ್ ಮಾತ್ರೆ ಮಾರುತ್ತಿದ್ದು, ಒಂದು ಮಾತ್ರೆಯನ್ನು 300 ರಿಂದ 400 ರೂ.ಗೆ ಮಾರುತ್ತಿದ್ದರಂತೆ! ಚಾಮರಾಜಪೇಟೆ ಹಾಗೂ ಮೈಸೂರು ರಸ್ತೆಯಲ್ಲಿರೋ ಕಾಲೇಜುಗಳಿಗೆ ಎಡತಾಕಿ, ಮಾದಕ ವ್ಯಸನಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದರು. ಅಲ್ಲದೆ ಈ ಆರೋಪಿಗಳು ಗಾಂಜಾ ಸಹ ಮಾರುತ್ತಿದ್ದರು. ಈ ಗ್ಯಾಂಗ್‌ಗೆ ಜೆ.ಜೆ. ನಗರದ ಸಲ್ಮಾನ್ ಲೀಡರ್ ಎನ್ನಲಾಗಿದೆ!




**ಎಣ್ಣೆ ಕಿರಿಕ್‌ನಲ್ಲಿ ಸಸ್ಪೆಂಡ್ ಆಗಿದ್ದ ಮಧುಸೂದನ್**

ಡ್ರಗ್ಸ್ ಪೆಡ್ಲರ್ಸ್ ಜೊತೆ ಸ್ನೇಹಮಾಡಿ ಅಮಾನತುಗೊಂಡಿರುವ ಚಾಮರಾಜಪೇಟೆ ಠಾಣೆಯ ಹೆಚ್‌ಸಿ ಮಧುಸೂದನ್ ವಿರುದ್ಧ ಈ ಮೊದಲು ಅಕ್ರಮ ಮದ್ಯ ಮಾರಾಟಕ್ಕೆ ಸಹಕಾರ ನೀಡಿದ್ದ ಆರೋಪ ಕೇಳಿ ಬಂದಿತ್ತು. ಮಾಗಡಿ ರಸ್ತೆಯಲ್ಲಿ ಮಧುಸೂದನ್ ಸೋದರ ಸಂಬಂಧಿಯೊಬ್ಬ ಹೋಟೆಲ್ ನಡೆಸುತ್ತಿದ್ದು ಸದರಿ ಹೋಟೆಲ್‌ನಲ್ಲಿ ಅಕ್ರಮವಾಗಿ ಮದ್ಯ ಮಾರಾಟದ ಬಗ್ಗೆ ಮಾಹಿತಿ ಇದ್ದು, ಕೆ.ಪಿ. ಅಗ್ರಹಾರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಗೋವಿಂದರಾಜ್ ಅಲ್ಲಿಗೆ ತೆರಳಿದ್ದಾಗ, ಹೆಡ್ ಲಾಂಗ್ ಮಧುಸೂದನ್ ದುಂಡಾವರ್ತನೆ ತೋರಿಸಿದ್ದು, ಗೋವಿಂದರಾಜ್ ದೂರಿನ ಮೇರೆಗೆ ಡಿಸಿಪಿ ಎಸ್ ಗಿರೀಶ್ ರವರು ಅವನನ್ನು ಮನೆಗೆ ಕಳುಹಿಸಿದ್ದ ಘಟನೆ ನಡೆದಿತ್ತು. ಅಮಾನತ್ತು ವನವಾಸ ಮುಗಿಸಿ ಮತ್ತೆ ಕರ್ತವ್ಯಪಾಲನೆಗೆ ಹಿಂತಿರುಗಿದ್ದ ಮಧುಸೂದನ್ ಈಗ ಮತ್ತೆ ಗಾಂಜಾ ಘಾಟು ಕುಡಿದು ಮತ್ತೆ ಸಸ್ಪೆಂಡ್ ಆಗಿದ್ದಾನೆ! ಜೆ.ಜೆ. ನಗರ, ಚಾಮರಾಜಪೇಟೆ ಹಾಗೂ ಬ್ಯಾಟರಾಯನಪುರ ಠಾಣೆ ವ್ಯಾಪ್ತಿಗಳಲ್ಲಿ ಡ್ರಗ್ಸ್ ಮಾರಾಟ ಜಾಲ ಅವ್ಯಾಹತವಾಗಿ ನಡೆದಿದೆ.

ದ'ಂಧೆಕೋರ'ರ ಜೊತೆ ಕೆಲ ಪೊಲೀಸರು ಶಾಮೀಲಾಗಿರುವುದು ಕೂಡ ಖಚಿತವಾಗಿದೆ. ಇದನ್ನೆಲ್ಲ ಗಮನಿಸಿರೋ ಖಡಕ್ ಸಿಪಿ ಸೀಮಂತ್ ಕುಮಾರ್ ಸಿಂಗ್ ಅವರು ಒಂದೇ ವಾರದಲ್ಲಿ 16 ಮಂದಿ ಖಾಕಿಗಳ ಬಟ್ಟೆ ಬಿಚ್ಚಿಸಿ ಮನೆಗೆ ಕಳುಹಿಸೋ ಮೂಲಕ ಡ್ರಗ್ಸ್ ಪೆಡ್ಲರ್‌ಗಳ ಜತೆ ಪೊಲೀಸರು ಸ್ನೇಹ ಮಾಡೋದನ್ನು ಸಹಿಸುವುದಿಲ್ಲ... ಎಂಬ ಸಂದೇಶವನ್ನು ಸಮಸ್ತ ಬೆಂಗಳೂರು ಪೊಲೀಸರಿಗೆ ರವಾನಿಸಿದ್ದಾರೆ!

**ಕಡೆಯದಾಗಿ ಒಂದು ಮಾತು**

ನೀವು ಡಾ. ರಾಜ್ ಅಭಿನಯದ 'ಶಬ್ದವೇದಿ'ಚಿತ್ರವನ್ನು ನೋಡಿರಬಹುದು. ಅದರಲ್ಲಿ ಡ್ರಗ್ಸ್ ದಂಧೆಯನ್ನು ಮಟ್ಟ ಹಾಕುವುದೇ ಕಥಾವಸ್ತು. ಖಡಕ್ ಪೊಲೀಸ್ ಆಫೀಸರ್ ಅಣ್ಣಾವ್ರ ಮಗನಿಗೇ ಡ್ರಗ್ಸ್ ದಂಧಾಕೋರರ ವ್ಯಸನ ಅಂಟಿಸಿಬಿಟ್ಟಿರುತ್ತಾನೆ! ಈಗ ಡ್ರಗ್ಸ್ ದಂಧೆಗೆ ಸಹಕರಿಸಿ ಸಸ್ಪೆಂಡ್ ಆಗಿದ್ದರಲ್ಲ ಕಳ್ ಮಂಜಣ್ಣ ಮತ್ತಿತರೇ ಖಾಕಿ ಕೋರರು, ಇವರ ಮಕ್ಕಳಿಗೂ ಯಾರಾದ್ರೂ ವ್ಯಸನ ಅಂಟಿಸಿದ್ದರೆ?! ಇವರು ಇನ್ನಾದರೂ ಬುದ್ದಿ ಕಲಿಯುತರೆ ಒಳ್ಳೆಯದು...

## ಸಮೀಕ್ಷೆ ಏನೋ ಶುರುವಾಯ್ತು, ಆದರೆ....

3 ☞ ಗಣತಿ ನಡೆಯೋದೆ ಕಷ್ಟ ಅನ್ನೋ ಪರಿಸ್ಥಿತಿ ಉದ್ಭವಗೊಂಡಿತೋ, ಸಿದ್ದರಾಮಯ್ಯ ದಿಢೀರ್ ಕ್ರಿಶ್ಚಿಯನ್ ಉಪಜಾತಿಗಳ ಹೆಸರನ್ನು ತೆಗೆಸಿಬಿಟ್ರು! ಆಗ ಆಗದ್ದು ಈಗೇಗೆ ಸಾಧ್ಯವಾಯಿತು ಅಂತ ಕೇಳಿದರು ಜನ. ಲಿಂಗಾಯತ ಸಮಾಜವಂತೂ ತಮ್ಮನ್ನು ಚೂರು ಚೂರು ಮಾಡಲು ಹೊರಟಿದ್ದ ಸಿದ್ದರಾಮಯ್ಯ ಅಂತಲೇ ಸಿದ್ದು ವಿರುದ್ಧ ತಿರುಗಿ ಬಿದ್ದಿದ್ದಾರೆ. ಗೌಡರು ಒಗ್ಗಟ್ಟು ಮೆರೆದು, ಉಪಜಾತಿ ಜಾಗದಲ್ಲಿಯೂ ಒಕ್ಕಲಿಗ ಅಂತಲೇ ಬರೆಸಿರಿ ಎಂದು ಘೋಷಣೆ ಮೊಳಗಿಸಿದ್ದಾರೆ.

ಲಿಂಗಾಯತರು ಕೂಡ ವೀರಶೈವ ಅಂತಲೇ ಬರೆಸಲು ತೀರ್ಮಾನಿಸಿದ್ದಾರೆ. ಅಲ್ಲಿಗೆ, ಎಸ್ಸಿಗಳಿಗೆ ಗೊಂದಲ ಕಾಡುತ್ತಿರುವಂತಿದೆ. ಎಡಗೈ ಬಲಗೈ ವಾರ್ ಮುಂದುವರೆದಿದೆ. ಎಸ್ಟಿಗಳ ವಿಚಾರಕ್ಕೆ ಬಂದರೆ, ಹಿಂದೂ ಧರ್ಮ ಜೊತೆಗೆ ಅವರವರ ಜಾತಿ ಹೆಸರು ಬರೆಸುತ್ತಾರೆ. ಅಲ್ಲಿಗೆ, ಕುರುಬರೇ ಸೇಫ್. ಕುರುಬ, ಕಾಡು ಕುರುಬ ಜೇನು ಕುರುಬ...ಏನು ಬರೆಸಿದರೂ ನಡೆಯುತ್ತದೆ! ನಿಮಗೆ ಗೊತ್ತಲ್ಲ, ಕುರುಬ ಸಮುದಾಯವನ್ನು ಎಸ್ಟಿ ಗುಂಪಿಗೆ ಸೇರಿಸಲು ಸಿದ್ದರಾಮಯ್ಯಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಹೋರಾಡುತ್ತಿದ್ದಾರೆ. ಇದರಿಂದ, ಬ್ಯಾಕ್ ವರ್ಡ್ ಕಮ್ಯುನಿಟಿಯಲ್ಲೇ ಕೆಲವರು ಸಿಟ್ಟು ಮಾಡಿಕೊಂಡಿದ್ದಾರೆ.

ಒಟ್ಟಾರೆ, ಈಗ ಈ ಜಾತಿ ಗಣತಿ ಬೇಡವಾಗಿತ್ತೋ ಏನೋ. ಈ ಮೊದಲು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರಿಂದ ವರದಿ ತಯಾರಿಸಿದ್ದೆ ಸಾಕಾಗಿತ್ತಲ್ಲವೇ. ಅಥವಾ ಕಾಂತರಾಜು ವರದಿಯನ್ನೇ ಜಾರಿಗೊಳಿಸಿದ್ದರೆ ಆಗಿತ್ತು! ಇದ್ಯಾವುದನ್ನು ಮಾಡದ ಸಿದ್ದರಾಮಯ್ಯ ಇದೀಗ ಹಲವರ ವಿರೋಧದ ನಡುವೆ ಹೊಸದಾಗಿ, ಶೈಕ್ಷಣಿಕ ಸಾಮಾಜಿಕ ಸಮೀಕ್ಷೆ ನೆಪದಲ್ಲಿ ಜಾತಿ ಗಣತಿ ಮಾಡಿಸಲು ಹೊರಟಿದ್ದಾರೆ. ಅವರ ಮನಸ್ಸಿನಲ್ಲಿ ಏನಿದೆಯೋ ಯಾರಿಗೆ ಗೊತ್ತು? -ಸಂ.


# ಭೈರಪ್ಪ ದಿವ್ಯಾತ್ಮಕ್ಕೆ ಶಾಂತಿ ಲಭಿಸಲಿ....

ಎಸ್.ಎಲ್. ಭೈರಪ್ಪ ಎಂದೇ ಜನಪ್ರಿಯರಾಗಿರುವ ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ, ಕರ್ನಾಟಕದ ಅತ್ಯಂತ ಪ್ರತಿಭಾನ್ವಿತ ಮತ್ತು ಗೌರವಾನ್ವಿತ ಬರಹಗಾರರಲ್ಲಿ ಒಬ್ಬರು. 60 ವರ್ಷಗಳ ತಮ್ಮ ವೃತ್ತಿಜೀವನದಲ್ಲಿ ಅವರು 27 ಗದ್ಯ ಕೃತಿಗಳನ್ನು ಹಾಗೂ ಕಾದಂಬರಿ ಗಳನ್ನು ರಚಿಸಿದ್ದಾರೆ.

1934ರಲ್ಲಿ ಹಾಸನ ಜಿಲ್ಲೆಯ ಸಂತೇಶಿವರದಲ್ಲಿ ಜನಿಸಿದ ಭೈರಪ್ಪ ಚಿಕ್ಕ ಬಾಲಕನಾಗಿದ್ದಾಗಲೇ ಪ್ಲೇಗ್‌ನಿಂದಾಗಿ ತನ್ನ ತಾಯಿ ಮತ್ತು ಒಡಹುಟ್ಟಿದವರನ್ನು ಕಳೆದುಕೊಂಡರು. ಮನೆಯಲ್ಲಿ ಬಡತನ, ತಮ್ಮ ಶಿಕ್ಷಣಕ್ಕೆ ಹಣಕಾಸು ಒದಗಿಸಲು ಚಿಕ್ಕ ವಯಸ್ಸಿನಲ್ಲಿಯೇ ಉದ್ಯೋಗದ ದಾರಿ ಹಿಡಿಯಬೇಕಾಯಿತು. ಆರಂಭದ ದಿನಗಳಲ್ಲಿ ಮುಂಬೈನಲ್ಲಿ ಆಧ್ಯಾತ್ಮಿಕ ಅಲೆಮಾರಿಯ ಜೀವನವನ್ನು ನಡೆಸಿದ ನಂತರ ಅವರು ಮೈಸೂರಿನಲ್ಲಿ ಶಿಕ್ಷಣವನ್ನು ಮುಗಿಸಿದರು.

ಭೈರಪ್ಪನವರ ಮೊದಲ ಕಾದಂಬರಿ ಗತಜನ್ಮ, ಮತ್ತೆರಡು ಕತೆಗಳು 1955ರಲ್ಲಿ ಪ್ರಕಟವಾಯಿತು. ಅಂದಿನಿಂದ ಅವರು ಸಾಹಿತ್ಯಿಕ ದೈತ್ಯ ಆಗಿ ವಿಕಸನಗೊಂಡ ನಂತರ ಅವರ ಕಾದಂಬರಿಗಳನ್ನು ಕನ್ನಡದಿಂದ ಹಲವಾರು ಭಾರತೀಯ ಪ್ರಾದೇಶಿಕ ಭಾಷೆಗಳಿಗೆ, ಇಂಗ್ಲಿಷ್ ಮತ್ತು ರಷ್ಯನ್‌ನಂತಹ ವಿದೇಶಿ ಭಾಷೆಗಳಿಗೆ ಅನುವಾದಿಸಲಾಗಿದೆ.

ಕೆಲವು ಹಿಂದಿ ಮತ್ತು ಮರಾಠಿ ಅನುವಾದಗಳು ಪ್ರಾದೇಶಿಕವಾಗಿ ಹೆಚ್ಚು ಮಾರಾಟಗೊಂಡ ಪುಸ್ತಕಗಳಾಗಿರುವುದರಿಂದ, ಕರ್ನಾಟಕವನ್ನು ಮೀರಿ ಭೈರಪ್ಪನವರನ್ನು ಸಾಹಿತ್ಯವಲಯದಲ್ಲಿ ಮನೆಮಾತಾಗಿಸಿದೆ. ಅವರ ಕಾದಂಬರಿ 'ಆವರಣ'ವು ಅಧಿಕೃತವಾಗಿ ಬಿಡುಗಡೆಯಾಗುವ ಮೊದಲೇ ಅದರ ಪ್ರತಿಗಳು ಮಾರಾಟವಾದದ್ದು ದಾಖಲೆ. ಅವರು ರಚಿಸಿದ 'ನಿರಾಕಾರಣ'ವನ್ನು ಓದುತ್ತಿದ್ದರೆ ಮೈಮನ ಪುಳಕಗೊಳ್ಳುತ್ತದೆ. ಅವರ ಏಕೈಕ ಸಣ್ಣ ಕಥೆ 'ಅವ್ವ' ಕನ್ನಡ ನಿಯತಕಾಲಿಕೆಯಲ್ಲಿ ಪ್ರಕಟವಾಗಿತ್ತು. ಅವರು ರಚಿಸಿದ 'ವಂಶ ವೃಕ್ಷ', 'ತಬ್ಬಲಿಯು ನೀನಾದೆ ಮಗನೆ', 'ಮತದಾನ' ಮತ್ತು 'ನಾಯಿ ನೆರಳು' ಮುಂತಾದ ಕೃತಿಗಳು ಚಲನಚಿತ್ರಗಳಾಗಿವೆ.



1996ರಲ್ಲಿ ಪ್ರಕಟವಾದ ಅವರ ಆತ್ಮಚರಿತ್ರೆಯ ಕೃತಿಯಾದ 'ಭಿತ್ತಿ ಇಂಗ್ಲಿಷ್' ಕನ್ನಡ ಸೇರಿದಂತೆ ವಿವಿಧ ಅನುವಾದಗಳಲ್ಲಿ ಲಭ್ಯವಿದೆ. ಅವರಿಗೆ ಸಂದ ಪ್ರಶಸ್ತಿಗಳಲ್ಲಿ ಪದ್ಮಭೂಷಣ (2023) ಮತ್ತು ಪದ್ಮಶ್ರೀ (2016) ಸೇರಿವೆ. ಅವರಿಗೆ 1975ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 2015ರಲ್ಲಿ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಮುಂತಾದ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ರಾಜ್ಯ ಸರ್ಕಾರವು 1966ರಲ್ಲಿ ಅವರಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿತು. 2011ರಲ್ಲಿ ಅವರ 'ಮಂದ್ರ' ಕಾದಂಬರಿಗಾಗಿ ಪ್ರತಿಷ್ಠಿತ 'ಸರಸ್ವತಿ ಸಮ್ಮಾನ್' ಪ್ರಶಸ್ತಿಯನ್ನು ಸಹ ಅವರಿಗೆ ನೀಡಲಾಗಿದೆ. ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕದ ಕೇಂದ್ರ ವಿಶ್ವವಿದ್ಯಾಲಯ ಮತ್ತು ಗುಲ್ಬರ್ಗ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ.

ಸಾಹಿತ್ಯಿಕ ವೃತ್ತಿಜೀವನದ ಮೊದಲು, ಭೈರಪ್ಪನವರು ರೈಲ್ವೆ ಪೋರ್ಟರ್ ಆಗಿ ಕೆಲಸ ಮಾಡುತ್ತಿದ್ದರು ಎಂಬುದು ಗಮನೀಯ. ಅವರು ಮುಂಬೈನಲ್ಲಿ ಕೆಲವು ತಪಸ್ವಿಗಳನ್ನು ಭೇಟಿಯಾಗಿ ಅವರಿಂದ ಪ್ರಭಾವಿತರಾಗಿ ಆಧ್ಯಾತ್ಮಿಕ ಅಲೆಮಾರಿಯ ಜೀವನವನ್ನು ನಡೆಸಿದ್ದರು ಕೂಡ.

ಹಲವಾರು ಕಾದಂಬರಿಗಳನ್ನು ಬರೆದಿದ್ದರೂ, ಭೈರಪ್ಪ ಅವರು ಬರೆದ ಒಂದೇ ಒಂದು ಸಣ್ಣಕಥೆ- 'ಅವ್ವ', ಅವರ ಕಾದಂಬರಿಗಳಾದ ದಾಟು ಮತ್ತು ಗೃಹಭಂಗವನ್ನು ಭಾರತದ 14 ನಿರ್ದಿಷ್ಟ ಭಾಷೆಗಳಿಗೆ ಅನುವಾದಿಸಲಾಗಿದೆ. ಅವರು ರಚಿಸಿದ್ದ ಪರ್ವ, ಧರ್ಮಶ್ರೀ... ಕಾದಂಬರಿಗಳು ವಿವಾದ ಹುಟ್ಟು ಹಾಕಿದ್ದರೂ, ಒಂದಷ್ಟು ದ್ವಂದ್ವ ನಿಲುವುಗಳ ಮೂಲಕ ಸತ್ಯ ವನ್ನು ಅನುರಣನಗೊಳಿಸಿದ್ದು ಸುಳ್ಳಲ್ಲ. ಭೈರಪ್ಪನವರ ವೈಯಕ್ತಿಕ ಜೀವನದ ಬಗ್ಗೆ ಹೇಳಬಹುದಾದರೆ, ಅವರು ತಮ್ಮ ಪತ್ನಿ ಹಾಗೂ ಇಬ್ಬರು ಗಂಡು ಮಕ್ಕಳಿಂದ ದೂರವೇ ಇದ್ದರು. ಸಾಹಿತಿ (ಶಿಷ್ಯೆ) ಸಹನಾ ವಿಜಯ್‌ಕುಮಾರ್‌ರನ್ನೇ ಸ್ವಂತ ಮಗಳ ಹಾಗೇ ನೋಡಿದರು. ಇವರೂ ಕೂಡ ಭೈರಪ್ಪನವರನ್ನು ತಂದೆ ಹಾಗೇ ಸಲಹಿದರು. ಹೀಗಾಗಿ, ಭೈರಪ್ಪನವರು ಸಾಯುವ ಮುನ್ನ ವಿಲ್ ಬರೆದಿದ್ದು, ತಮ್ಮ ಅಂತಿಮ ಕಾರ್ಯಗಳನ್ನು ಸಹನಾಳೇ ನೆರವೇರಿಸಬೇಕು, ಅಪ್ಪಿತಪ್ಪಿಯೂ ನನ್ನ ಗಂಡು ಮಕ್ಕಳು ಮಾಡಬಾರದು.... ಎಂಬಿತ್ಯಾದಿಯಾಗಿ ತಿಳಿಸಿದ್ದರು. ಅದರಂತೆಯೇ ಸಹನಾರವರು ಗಂಡು ಮಗನ ಸ್ಥಾನದಲ್ಲಿ ನಿಂತು ಭೈರಪ್ಪನವರ ಅಂತಿಮ ಕಾರ್ಯ ನೆರವೇರಿಸಿದ್ದಾರೆ. ಜೊತೆಗೆ ಭೈರಪ್ಪನವರ ಕುಟುಂಬ ಕೂಡಾ ಇತ್ತೆನ್ನಿ!

ಏನಿವೇ, ಸಾಹಿತ್ಯ ಲೋಕದ ದಿಗ್ಗಜ ಎಸ್.ಎಲ್ ಭೈರಪ್ಪನವರ ದಿವ್ಯಾತ್ಮಕ್ಕೆ ಶಾಂತಿ ದೊರಕಲಿ....

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 28.9.2025

# 75ರ ಹೊಸ್ತಿಲಲ್ಲಿ ಅಶೋಕ ಚಕ್ರವರ್ತಿ ವಿರಾಜಮಾನರು!



ಸಿನಿ ಮಂದಿ ಹುಟ್ಟುಹಬ್ಬ ಎಂದಾಕ್ಷಣ ನಮ್ಮ ಜನರಿಗೆ ನೆನಪಾಗುವುದು ಬರೀ ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್, ಉಪೇಂದ್ರ. ಸುದೀಪ್, ದರ್ಶನ್, ಪುನೀತ್... ಇಷ್ಟೇ ಹೆಸರು. ಸಿಲ್ಕ್ ಸ್ಮಿತಾ, ಡಿಸ್ಕೋ ಶಾಂತಿ, ಅನುರಾಧ ನೆನಪಾಗುವುದೇ ಇಲ್ಲಾ! ಅವರ ಮಾತಿರಲಿ, ನಮ್ಮ ಕ್ರಾಂತಿಯೋಗಿ ಬಸವಣ್ಣ ಅಶೋಕ್ ಕೂಡ ನೆನಪಾಗದೆ ಇರೋದು ನಿಜಕ್ಕೂ ವಿಪರ್ಯಾಸ.

ಅಶೋಕ್ ಒಂದು ಕಾಲದಲ್ಲಿ ಸ್ಫುರದ್ರೂಪಿ ನಟರಾಗಿ ಹತ್ತಾರು ಹಿಟ್ಸ್ ಕೊಟ್ಟಿದ್ದಾರೆ ಗೊತ್ತಾ....ಸೂಪರ್ ಸ್ಟಾರ್ ರಜನಿಕಾಂತ್ ಕ್ಲಾಸ್‌ಮೇಟ್ ಕಣ್ರೀ ಅಶೋಕಣ್ಣ! ನಟನೆ ಮಾತ್ರವಲ್ಲದೆ ಕನ್ನಡ ಚಲನಚಿದ್ಯೋದ್ಯಮದಲ್ಲಿ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾಗಿ ದುಡಿದಿದ್ದಾರೆ ಕೂಡ. ಅಂದಹಾಗೆ, ಅಶೋಕ್ ಆನೇಕಲ್ ಪಟ್ಟಣದವರು. 1951ರ ಸೆಪ್ಟೆಂಬರ್ 22ರಂದು ಆನೇಕಲ್‌ನಲ್ಲಿ ಜನಿಸಿದರು. ತಂದೆ ಲಕ್ಷ್ಮೀನರಸಿಂಹಯ್ಯ ವೃತ್ತಿಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದವರು. ತಾಯಿ ಪುಟ್ಟಮ್ಮ ಗೃಹಿಣಿ.

ಅಶೋಕರಿಗೆ ಚಿಕ್ಕಂದಿನಿಂದಲೂ ಚಿತ್ರ ನಟನಾಗುವ ಹಂಬಲವಿತ್ತು. ಬೆಂಗಳೂರಲ್ಲಿ ತಮ್ಮ ಪದವಿ ಶಿಕ್ಷಣವನ್ನು ಪೂರೈಸಿದ ಕೂಡಲೇ ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್ ಸೇರಿ ನಟನೆಯಲ್ಲಿ ತರಬೇತಿ ಪಡೆದರು. 1975ರಲ್ಲಿ ತೆರೆ ಕಂಡ ಶ್ರೀನಾಥ್ ನಾಯಕರಾಗಿದ್ದ 'ಹೆಣ್ಣು ಸಂಸಾರದ ಕಣ್ಣು' ಚಿತ್ರದಲ್ಲಿ ನಟಿಸುವುದರ ಮೂಲಕ ಅಶೋಕ್ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ನಂತರ 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಡಾ.ರಾಜಕುಮಾರ್ ಮಗನ ಪಾತ್ರವನ್ನು ನಿರ್ವಹಿಸಿದರು. ದ್ವಾರಕೀಶ್ ನಿರ್ಮಿಸಿದ 'ಭಾಗ್ಯವಂತರು' ಚಿತ್ರದಲ್ಲಿ ಮತ್ತೊಮ್ಮೆ ರಾಜ್‌ಕುಮಾರ್ ಪುತ್ರರಾಗಿ ಅದ್ಬುತವಾಗಿ ಅಭಿನಯಿಸಿದರು.

ದೀಪ, ಗೆದ್ದವಳು ನಾನೇ, ಬಯಲು ದಾರಿ, ರಂಗನಾಯಕಿ, ತಾಯಿಯ ಮಡಿಲಲ್ಲಿ, ಗಣೇಶನ ಮಹಿಮೆ, ಕ್ರಾಂತಿಯೋಗಿ ಬಸವಣ್ಣ, ಮುಗಿಲ ಮಲ್ಲಿಗೆ, ತುಂಬಿದ ಮನೆ, ಅರ್ಚನಾ, ರಂಗನಾಯಕಿ, ಚೆಲ್ಲಿದ ರಕ್ತ, ಪಾವನ ಗಂಗಾ, ಎಪ್ಪಿಸಾಂಗ್ಲಿಯಾನ...ಮುಂತಾದ ಚಿತ್ರಗಳಲ್ಲಿ ಹೀರೋ, ಸೋಲೋ ಹೀರೋ ಆಗಿ ನಟಿಸಿದರು. ಪೋಷಕ ನಟರಾಗಿ ಶಿವಣ್ಣ ಜೊತೆ ಜನುಮದ ಜೋಡಿ, ಸುದೀಪ್ ಜೊತೆ ಮಹಾರಾಜಾ, ಕೆಂಪೇಗೌಡ, ಮಾಣಿಕ್ಯ, ಪುನೀತ್‌ರಾಜ್‌ಕುಮಾರ್ ಜೊತೆ ಅಪ್ಪು, ನಮ್ಮ ಬಸವ, ರಾಜಕುಮಾರ, ಉಪ್ಪಿ ಜೊತೆ ಕುಟುಂಬ, ನ್ಯೂಸ್, ದರ್ಶನ್ ಜೊತೆ ಸ್ವಾಮಿ, ಚಕ್ರವರ್ತಿ, ಮುರುಳಿ ಜೊತೆ ಚಂದ್ರ ಚಕೋರಿ.... ಮುಂತಾದ ಚಿತ್ರಗಳಲ್ಲಿ ನಟಿಸಿದ್ದಾರೆ.

ಅಶೋಕ್ ಕರ್ನಾಟಕ ಚಲನಚಿತ್ರ ಕಲಾವಿದರು ಮತ್ತು ಕಾರ್ಮಿಕರ ನಾಯಕರಾಗಿ ಕರ್ತವ್ಯ ನಿರ್ವಹಿಸಿರುವಂತೆಯೇ ಡಾ. ರಾಜ್ ಜೊತೆ ಗೋಕಾಕ್ ಚಳುವಳಿ ಮತ್ತು ರೈತಪರ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಅವರು ಈಗಲೂ ಕಲಾಸೇವೆ ಹಾಗೂ ಕಲಾವಿದರ ಸೇವೆ ಮಾಡುತ್ತಿದ್ದಾರೆ. ಇಂತಹ ಅಪರೂಪದ ಹಿರಿಯ ನಟ ಅಶೋಕ್ ಅವರಿಗೆ ಇದೀಗ 75ರ ಸಂಭ್ರಮ.... ಹ್ಯಾಪಿ ಬರ್ತ್‌ಡೇ ಸರ್... ಅಶೋಕ್ ಅವರು ಇನ್ನಷ್ಟು ವರ್ಷ ಆರೋಗ್ಯವಂತರಾಗಿ ಆಯುಷ್ಯವಂತರಾಗಿ ಬದುಕಿ ಕಲಾಸೇವೆ ಮಾಡಲಿ ಎಂಬುದೇ ನಮ್ಮಾಸೆ...








# ವಾವ್ ಓಜಿ...!

ಹೀರೋ ಭರ್ಜರಿ ಎಂಟ್ರಿ, ಸ್ಲೋಮೋಷನ್ ವಾಕ್, ಕೈಯಲ್ಲಿ ಬಂದೂಕು ಅಥವಾ ಕತ್ತಿ, ಭರ್ಜರಿ ಫೈಟಿಂಗ್, ಹಿನ್ನಲೆಯಲ್ಲಿ ಕಿವಿಗಡಚಿಕ್ಕುವ ಮ್ಯೂಸಿಕ್.... ಸುಂದರವಾದ ಹೀರೋಯಿನ್, ಕಿಕ್ ಏರಿಸೋ ಐಟಂ ಸಾಂಗ್ ಅತ್ಯಂತ ಕ್ರೂರ ಪ್ರವೃತ್ತಿಯ ವಿಲನ್‌ಗಳ ಅಬ್ಬರ... ಇಷ್ಟಿದ್ದರೆ ಸಾಕು! ಸ್ಟಾರ್ ಹೀರೋ ಸಿನಿಮಾ ಸಿದ್ಧವಾದಂತೆ!!

ನೆನಪಿರಲಿ, ಇಷ್ಟಿದ್ದ ಮಾತ್ರಕ್ಕೆ ಸ್ಟಾರ್ ನಟರ ಸಿನಿಮಾ ಗೆದ್ದು ಬಿಡುತ್ತದೆ ಎಂದೇನೂ ಇಲ್ಲ. ಈ ಸಿದ್ಧ ಸೂತ್ರವನ್ನು ಆಧುನಿಕ ತಂತ್ರಜ್ಞಾನಗಳನ್ನೆಲ್ಲ ಬಳಸಿಕೊಂಡು ಅದ್ದೂರಿಯಾಗಿ ನಾಜೂಕಾಗಿ ಅಭಿಮಾನಿಗಳಿಗೆ ಪ್ರಿಯವಾಗುವಂತೆ, ಎಲ್ಲೂ ಬೋರು ಹೊಡೆಯದಂತೆ ಕಟ್ಟಿಕೊಡಬೇಕು! ಅವಾಗ ಆ ಸಿನಿಮಾ ಸೂಪರ್ ಹಿಟ್ಟೋ ಬ್ಲಾಕ್ ಬಸ್ಟರ್ರೋ ಆಗುತ್ತದೆ.

ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಅವರ ನಟನೆಯ ಓಜಿ ಸಿನಿಮಾದಲ್ಲಿ ಈ ಮ್ಯಾಜಿಕ್ ಚೆನ್ನಾಗಿ ಕೆಲಸ ಮಾಡಿದೆ. 'ಸಾಹೋ' ಫೇಮ್ ನಿರ್ದೇಶಕ ಸುಜಿತ್ ಆ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ.

ಚಿತ್ರಮಂದಿರದಲ್ಲಿ ಅಭಿಮಾನಿಗಳು ಶಿಳ್ಳೆ, ಚಪ್ಪಾಳೆ ಹೊಡೆಯುವಂತೆ ಪ್ರತಿ ಹತ್ತು-ಹದಿನೈದು ನಿಮಿಷಗಳಿಗೊಮ್ಮೆ ಎಲಿವೇಶನ್ ಸೀನುಗಳನ್ನು, ಆಕ್ಷನ್ ದೃಶ್ಯಗಳನ್ನು ಪೋಣಿಸಿದ್ದಾರೆ. ಸಿನಿಮಾದಲ್ಲಿ ಪವನ್ ಸೊಂಯ್ಯನೆ ಮೇಲೆ ಹಾರುವುದಿಲ್ಲ ಎಂಬುದನ್ನು ಬಿಟ್ಟರೆ ಬಹುತೇಕ ಸೂಪರ್ ಹೀರೋ ರೀತಿಯೇ ಅವರನ್ನು ವಿಜೃಂಭಿಸಲಾಗಿದೆ! ಎದುರಾಳಿಗಳು ಹಾರಿಸುವ ಗುಂಡುಗಳನ್ನು ಕೇವಲ ಕತ್ತಿ ಜಳಪಿಸಿಯೇ ತಡೆದು ಬಿಡುತ್ತಾರೆ!





ಓಜಿ ಸಿನಿಮಾದಲ್ಲಿ ಕತೆಗೆ ನಾಲ್ಕನೇ ಆದ್ಯತೆ ನೀಡಲಾಗಿದೆ. ಮೊದಲ ಆದ್ಯತೆ ಪವನ್ ಕಲ್ಯಾಣ್ ಲುಕ್, ಸ್ಲೋ ಮೋಷನ್ ವಾಕುಗಳಿಗೆ. ಎರಡನೇ ಆದ್ಯತೆ ಆಕ್ಷನ್ ಸೀನುಗಳಿಗೆ. ಮೂರನೇ ಆದ್ಯತೆ ಹಿನ್ನೆಲೆ ಸಂಗೀತಕ್ಕೆ! ಓಜಿ ಸಿನಿಮಾ ಕತೆಯನ್ನು ಸರಳವಾಗಿ ವಿವರಿಸುವುದಾದರೆ, ಇದೊಂದು ಗ್ಯಾಂಗ್‌ಸ್ಟರ್ ಒಬ್ಬನ ಸ್ಟೋರಿ.



ಸಭ್ಯ ಉದ್ಯಮಿಯೊಬ್ಬನ ಬಲಗೈ ಭಂಟನ ಕತೆ. ಮುಂಬೈನಲ್ಲಿ ಈತನದ್ದೇ ಹವಾ. ಈತನ ಕತಾನಗೆ ಸಾವಿರಾರು ದುರುಳರು ಬಲಿ ಆಗಿದ್ದಾರೆ. ಆದರೆ ತಾನು ಮಾಡದ ತಪ್ಪನ್ನು ತಲೆ ಮೇಲೆ ಹೊತ್ತುಕೊಂಡು ಆ ಸಭ್ಯ ಉದ್ಯಮಿ ಮುಂಬೈ ಬಿಟ್ಟು ಹೋಗುತ್ತಾನೆ. ಆದರೂ ಆ ಉದ್ಯಮಿಗೆ ಮತ್ತೆ ದುರುಳರಿಂದ ಸಂಕಷ್ಟ ಎದುರಾದಾಗ...ಓಜಿ ಮತ್ತೆ ಮುಂಬೈಗೆ ಬರುತ್ತಾನೆ. ದುಷ್ಟರ ಸಂಹಾರ ಮಾಡುತ್ತಾನೆ.

ಅಂದಹಾಗೆ ಈ ಗ್ಯಾಂಗ್‌ಸ್ಟರ್‌ಗೆ ಜಪಾನಿನ ಲಿಂಕು ಇದೆ! ಆ ಲಿಂಕು ಏನೆಂದು ನಾವು ಹೇಳಬಾರದು. ನೀವೇ ಸಿನಿಮಾ ನೋಡಿ ತಿಳಿಯಬೇಕು... ಓ ಜಿಯಲ್ಲಿ ಪವನ್ ಕಲ್ಯಾಣ್ ಅವರದ್ದು ಗಂಭೀರ ಪಾತ್ರವಾದರೂ ಹೆಚ್ಚಿನ ಶ್ರಮ ತೆಗೆದುಕೊಳ್ಳದೆ ಆರಾಮವಾಗಿ ನಿರ್ವಹಿಸಿದ್ದಾರೆ. ಆದರೆ ಕೆಲವು ವರ್ಷಗಳ ಹಿಂದಿದ್ದ ಎನರ್ಜೆಟಿಕ್ ಪವನ್ ಕಲ್ಯಾಣ್ ಈ ಸಿನಿಮಾನಲ್ಲಿ ಮಿಸ್ಸಿಂಗ್! ಹಾಗಂತ ಬೇಜಾರು ಆಗಬೇಡಿ. ಗ್ಯಾಂಗ್‌ಸ್ಟರ್ ಪಾತ್ರಕ್ಕೆ ತಕ್ಕಂತೆ ಒಳ್ಳೆಯ ಸ್ವಾಗ್ ತೋರಿಸಿದ್ದಾರೆ. ಆಕ್ಷನ್ ಸೀನ್‌ಗಳಲ್ಲಿ ಸಖತ್ ಮಿಂಚಿದ್ದಾರೆ. ಪವನ್ ಬಿಟ್ಟರೆ ಸಿನಿಮಾನಲ್ಲಿ ಹೆಚ್ಚು ಗಮನ ಸೆಳೆಯುವುದು ಕಿಸ್ಸರ್ ಬಾಯ್ ಇಮ್ರಾನ್ ಹಶ್ಮಿ! ಇವರೇ ಮೇನ್ ವಿಲ್ಲನ್.

ಪವನ್ ಅವರಂತೆಯೇ ಕೆಲವು ಎಲಿವೇಶನ್ ಸೀನ್‌ಗಳಲ್ಲಿ ಆಕ್ಷನ್ ದೃಶ್ಯಗಳಲ್ಲಿ ಇಮ್ರಾನ್ ಸಖತ್ ಮಿಚಿದ್ದಾರೆ. ಪ್ರಕಾಶ್ ರೈ ತಮ್ಮ ಪಾತ್ರವನ್ನು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ರಾಜಕೀಯ ಭಿನ್ನಾಭಿಪ್ರಾಯಗಳ ನಡುವೆಯೂ ಪವನ್‌ಕಲ್ಯಾಣ್ ಹಾಗೂ ಪ್ರಕಾಶ್ ರೈ ಒಟ್ಟಿಗೆ ನಟಿಸಿರುವುದು ಗಮನಾರ್ಹ. ಶ್ರೇಯಾ ರೆಡ್ಡಿ ನಟನೆ ಚೆನ್ನಾಗಿದೆ. ನಾಯಕಿ ಪ್ರಿಯಾಂಕಾ ಮೋಹನ್ ಮುದ್ದು ಮುದ್ದಾಗಿ ಕಂಗೊಳಿಸುತ್ತಾರೆ. ನಮ್ಮ ಭಜರಂಗಿ ಲೋಕಿ ಅವರು ಎರಡನೇ ವಿಲ್ಲನ್ ಆಗಿ ಮಿಂಚಿಕೊಂಡಿದ್ದಾರೆ. ಎಸ್. ಥಮನ್ ಅವರ ಅಬ್ಬರದ ಹಿನ್ನೆಲೆ ಸಂಗೀತ, ಪವನ್ ಅವರ ಪಾತ್ರವನ್ನು ಸಖತ್ ಆಗಿ ಎಲಿವೇಟ್ ಮಾಡಿದೆ. ಚಿತ್ರಮಂದಿರದಲ್ಲಿ ಬೀಳುವ ಶಿಳ್ಳೆ, ಚಪ್ಪಾಳೆಯಲ್ಲಿ ಅವರಿಗೂ ಪಾಲು ಸೇರಬೇಕು! ಇಲ್ಲಿ ಹಾಡಿಗಿಂತ ಆಕ್ಷನ್ ದೃಶ್ಯಗಳು ಅದ್ಭುತವಾಗಿವೆ. ಇಂಟರ್ವೆಲ್ ಫೈಟ್ ಅಂತೂ ಮೈನವಿರೇಳಿಸುವಂತಿದೆ. ಒಟ್ಟಾರೆ, ಇದು ಪವನ್ ಕಲ್ಯಾಣ್ ಅಭಿಮಾನಿಗಳಿಗಾಗಿಯೇ ಮಾಡಿರುವ ಸಿನಿಮಾ ನೋಡಿ ಖುಷಿಪಡಿ...

Vol. 41 No. 17 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com